RNI .KAR/KAN/2009/31934 ಬೆಂಗಳೂರು ಸಂಪುಟ: 16 ಸಂಚಿಕೆ: 88 ಪುಟ: 06 ಶನಿವಾರ 01-03-2025

Mail:mussanje2010@gmail.com www.mussanjenews.com

# ಮುಸ್ಸಂಜೆ

ಪ್ರಭಾವಶಾಲಿ ಕನ್ನಡ ಸಂಜೆ ದಿನ ಪತ್ರಿಕೆ

Managing Editor: N.Veerendra Babu (MBA, LLB)

Executive Editor: L P Babu

ಬೆಂಗಳೂರು | ಬೆಂ.ಗ್ರಾಮಾಂತರ ತುಮಕೂರು ಚಿತ್ರದುರ್ಗ ಮೈಸೂರು ಮಂಡ್ಯ ರಾಮನಗರ ಚಾ.ನಗರ ಹಾಸನ ಚಿಕ್ಕಬಳ್ಳಾಪುರ ಕೋಲಾರ

Honourary Editor: Venkatesh



ಬೋಲ್ಡ್ ಅವತಾರದಲ್ಲಿ ಮೋಕ್ಷಾ ಕುಶಲ್

'ನಿಮ್ಮ ಗಂಡಗಿಂತ ದಳಪತಿ ವಿಜಯ್, ಪ್ರದೀಪ್ ರಂಗನಾಥ್ ಬೆಟರ್'

ಮತ್ತೆ ಕಣ್ಣ ಮುಂದೆ ಕನಕ ಪುಟ 6

# ಪರೀಕ್ಷಾ ಕೇಂದ್ರಗಳಲ್ಲಿ ಕಣ್ಗಾವಲು

## ಇಂದಿನಿಂದ ಪಿಯುಸಿ ಪರೀಕ್ಷೆ ಆರಂಭ; ಪ್ರತಿ ಕೊಠಡಿಯಲ್ಲೂ ಸಿಸಿ ಕ್ಯಾಮೆರಾ ಅಳವಡಿಕೆ

**ಬೆಂಗಳೂರು:** 2024-25ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆ-1 ಇಂದಿನಿಂದ ಪ್ರಾರಂಭವಾಗಿದ್ದು, ರಾಜ್ಯದಲ್ಲಿ ಒಟ್ಟಾರೆ 7,13.862 ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಿದ್ದಾರೆ.

6,61,474 ಹೊಸ ವಿದ್ಯಾರ್ಥಿಗಳು, 34,071 ಪುನರಾವರ್ತಿತ ವಿದ್ಯಾರ್ಥಿಗಳು, 18,317 ಖಾಸಗಿ ವಿದ್ಯಾರ್ಥಿಗಳು ಪರೀಕ್ಷೆ ಎದುರಿಸುತ್ತಿದ್ದಾರೆ.

ಒಟ್ಟು 1,171 ಪರೀಕ್ಷಾ ಕೇಂದ್ರಗಳಲ್ಲಿ ಇಂದು ಬೆಳಗ್ಗೆ 10 ರಿಂದ 1 ಗಂಟೆವರೆಗೆ ಕನ್ನಡ, ಆರೇಬಿಕ್ ಪರೀಕ್ಷೆ ನಡೆದಿದ್ದು, ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಸೂಕ್ತ ಪೊಲೀಸ್ ಭದ್ರತೆ ಕಲ್ಪಿಸಲಾಗಿತ್ತು. ಈ ಬಾರಿ ಪರೀಕ್ಷಾ ಕೇಂದ್ರಗಳಲ್ಲಿ ಎಲ್ಲಿಯೂ ಅಕ್ರಮ ನಡೆಯದಂತೆ ಪರೀಕ್ಷಾ ಮಂಡಳಿ ಎಚ್ಚರಿಕೆ ವಹಿಸಿದೆ.

ಇಂದಿನಿಂದ ಮಾರ್ಚ್ 20ವರೆಗೆ ರಾಜ್ಯಾದ್ಯಂತ ನಡೆಯಲಿರುವ ದ್ವಿತೀಯ ಪಿಯುಸಿ ಪರೀಕ್ಷೆಯನ್ನು ಕಟ್ಟುನಿಟ್ಟಾಗಿ ನಡೆಸಲು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಸಕಲ ಸಿದ್ದತೆ ಮಾಡಿಕೊಂಡಿದೆ.

ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಮಾಹಿತಿ ಪ್ರಕಾರ, ಪರೀಕ್ಷೆ ಸಂದರ್ಭದಲ್ಲಿ ನಕಲು ಮಾಡುವುದನ್ನು ತಡೆಯಲು ಪರೀಕ್ಷಾ ಕೇಂದ್ರಗಳಲ್ಲಿ ವೆಬ್ ಕಾಸ್ಟಿಂಗ್ ಮಾಡಲಾಗುತ್ತಿದೆ. ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಪರೀಕ್ಷಾ ಕೇಂದ್ರಗಳಲ್ಲಿ ವೆಬ್ ಕಾಸ್ಟಿಂಗ್ ಮೂಲಕ ವೀಕ್ಷಣೆ ಮಾಡಲಾಗುತ್ತಿದೆ.

ಪಾರದರ್ಶಕತೆ ಹೆಚ್ಚಿಸಲು ಪರೀಕ್ಷಾ ಕೇಂದ್ರಗಳ ಪ್ರತಿ ಕೊಠಡಿಯಲ್ಲೂ ಸಿಸಿ ಕ್ಯಾಮೆರಾ ಅವಳಡಿಕೆ ಜೊತೆಗೆ ಅಲ್ಲಿನ ಚಿತ್ರಣವನ್ನು ಜಿಲ್ಲಾ ಮಟ್ಟದ ನಿಯಂತ್ರಣ ಕೊಠಡಿಯಲ್ಲಿ ಕೂತು ವೀಕ್ಷಿಸಲು ವೆಬ್‌ಕಾಸ್ಟಿಂಗ್ ಕಣ್ಗಾವಲು ವ್ಯವಸ್ಥೆ ಅಳವಡಿಸಲಾಗಿದೆ. ಉನ್ನತ ಅಧಿಕಾರಿಗಳು ಈ ಕೇಂದ್ರಗಳಲ್ಲಿ ಕುಳಿತು ತಮ್ಮ ಜಿಲ್ಲಾ ವ್ಯಾಪ್ತಿಯ ಯಾವುದೇ ಕೇಂದ್ರದ ಯಾವುದೇ ಕೊಠಡಿಯಲ್ಲಿನ ಆಗು ಹೋಗುಗಳನ್ನು ವೀಕ್ಷಿಸುತ್ತಿರುತ್ತಾರೆ. ಯಾವುದೇ ವಿದ್ಯಾರ್ಥಿಗಳು ಪರೀಕ್ಷಾ ಅಕ್ರಮದಲ್ಲಿ ತೊಡಗಿರುವುದು, ಪರೀಕ್ಷಾ ಕೊಠಡಿ ಮೇಲ್ವಿಚಾರಕರು ಸಮಯಕ್ಕೆ ಸರಿಯಾಗಿ ಪ್ರಶ್ನೆ ಪತ್ರಿಕೆ, ಉತ್ತರ ಪತ್ರಿಕೆಗಳನ್ನು ನೀಡದೆ ಲೋಪವೆಸಗುವುದು, ಸಾಮೂಹಿಕ ನಕಲು ಮಾಡಿಸುವಂತಹ ಯಾವುದೇ ಅಕ್ರಮಗಳು ಕಂಡುಬಂದರೆ ತಕ್ಷಣ ಕಾನೂನು ಕ್ರಮ ಜರುಗಿಸಲಿದ್ದಾರೆ. ಹಾಗಾಗಿ ವಿದ್ಯಾರ್ಥಿಗಳು ಬಹಳ ಎಚ್ಚರಿಕೆಯಿಂದ ಪರೀಕ್ಷೆ ಬರೆಯಬೇಕಾಗಿದೆ. ಪುಟ 2



## ಪರೀಕ್ಷೆ ಮುಂದೂಡಲು ಸಾಧ್ಯವಿಲ್ಲ

**ಬೆಂಗಳೂರು:** ಕನ್ನಡ ಪರ ಸಂಘಟನೆಗಳು ಕರೆಕೊಟ್ಟಿರುವ ಕರ್ನಾಟಕ ಬಂದ್ ನೆಪಮಾಡಿ ಈಗಾಗಲೇ ನಿಗದಿಯಾಗಿರುವ ಪರೀಕ್ಷೆಗಳನ್ನು ಮುಂದೂಡಲು ಸಾಧ್ಯವಿಲ್ಲ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದ್ದಾರೆ. ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಾರ್ಚ್ 22 ರಂದು 7, 8, 9ನೇ ತರಗತಿ ಪರೀಕ್ಷೆಗಳ ದಿನಾಂಕ ನಿಗದಿಯಾಗಿದೆ. ಪುಟ 2






ಮಣಿಪಾಲ್ ಗ್ಲೋಬಲ್ ಎಜುಕೇಶನ್ ಸರ್ವಿಸಸ್ ಸಂಸ್ಥೆ ಛೇರ್ಮನ್, ಇನ್ಫೋಸಿಸ್ ಮಾಜಿ ಸಿಎ, ಬೋರ್ಡ್ ಮೆಂಬರ್ ಟಿ ವಿ ಮೋಹನ್ ದಾಸ್ ಪೈ ಅವರು ಡಿಸಿಎಂ ಡಿ ಕೆ ಶಿವಕುಮಾರ್ ಅವರನ್ನು ಬೆಂಗಳೂರಿನ ಸದಾಶಿವನಗರ ನಿವಾಸದಲ್ಲಿ ಶನಿವಾರ ಭೇಟಿ ಮಾಡಿ ಸಮಾಲೋಚನೆ ನಡೆಸಿದರು. ಮಾಜಿ ಮೇಯರ್ ಸಂಪತ್ ರಾಜ್, ತನ್ವಿರ್ ಜತೆಗಿದ್ದರು.

## ಗುಜರಾತ್ ಪ್ರವಾಸದಲ್ಲಿ ಪ್ರಧಾನಿ

**ನವದೆಹಲಿ:** ಪ್ರಧಾನಿ ನರೇಂದ್ರ ಮೋದಿ ಇಂದಿನಿಂದ ಮೂರು ದಿನಗಳ ಕಾಲ ತವರು ರಾಜ್ಯ ಗುಜರಾತ್ ಪ್ರವಾಸ ಕೈಗೊಳ್ಳಲಿದ್ದಾರೆ. ರಾಜ್ಯದ ಸ್ಥಳೀಯ ಸಂಸ್ಥೆಗಳಲ್ಲಿ ಬಿಜೆಪಿ ಭರ್ಜರಿ ಜಯಭೇರಿ ದಾಖಲಿಸಿದ ಬೆನ್ನಲ್ಲೇ ಅವರ ಈ ಪ್ರವಾಸ ಮಹತ್ವ ಪಡೆದುಕೊಂಡಿದೆ.



ಶನಿವಾರ ರಾತ್ರಿ ಜಾಮ್‌ನಗರ್‌ಗೆ ಆಗಮಿಸಲಿರುವ ಅವರು, ಅನೇಕ ಮಹತ್ವದ ಸಭೆಗಳಲ್ಲಿ ಭಾಗಿಯಾಗಲಿದ್ದಾರೆ.

ಜೊತೆಗೆ ಶ್ರೀ ಸೋಮನಾಥ ಟ್ರಸ್ಟ್‌ನ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ. ಸೋಮನಾಥ ದೇವಾಲಯವುದ ಟ್ರಸ್ಟ್‌ನಲ್ಲಿ ಪ್ರಧಾನಿ ಮೋದಿ ಅವರು ಸದಸ್ಯರಾಗಿದ್ದಾರೆ, ಟ್ರಸ್ಟ್‌ನ ಸಭೆಗಳಲ್ಲಿ ನಿಯಮಿತವಾಗಿ ಅವರು ಭಾಗವಹಿಸುತ್ತಾರೆ. ಪುಟ 2

## ಒಡಂಬಡಿಕೆಗಳ ತ್ವರಿತ ಅನುಷ್ಠಾನಕ್ಕೆ ಪಾಟೀಲ್ ಸೂಚನೆ

**ಬೆಂಗಳೂರು:** ಇತ್ತೀಚೆಗೆ ನಡೆಸಲಾದ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಆಗುರುವ ಹೂಡಿಕೆ ಒಡಂಬಡಿಕೆಗಳ ಪರುಣಾಮಕಾರಿ ಅನುಷ್ಠಾನಕ್ಕೆ ಸಮರೋಪಾದಿಯಲ್ಲಿ ಅಗತ್ಯ ಕ್ರಮ ಕೈಗೊಳ್ಳುವಂತೆ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ ಪಾಟೀಲ್ ಅಧಿಕಾರಿಗಳಿಗೆ ಕಟ್ಟುನಿಟ್ಟು ನಿರ್ದೇಶನ ನೀಡಿದ್ದಾರೆ.

ಈ ಸಂಬಂಧವಾಗಿ ಸಚಿವ ಎಂ.ಬಿ ಪಾಟೀಲ್ ಅವರು ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ, ಕೆಐಎಡಿಬಿ, ಉದ್ಯೋಗ ಮಿತ್ರ, ಭುಸ್ವಾಧೀನ ವಿಭಾಗ ಮತ್ತು ಇನ್ವೆಸ್ಟ್ ಕರ್ನಾಟಕ ಫೋರಂನ ಉನ್ನತ ಅಧಿಕಾರಿಗಳ ಜತೆ ಇಲ್ಲಿನ ಖನಿಜ ಭವನದಲ್ಲಿ ಮಹತ್ವದ ಸಭೆ ನಡೆಸಿದರು.



ಹೂಡಿಕೆದಾರರು ಭಾರೀ ನಿರೀಕ್ಷೆಯೊಂದಿಗೆ ಒಡಂಬಡಿಕೆಗಳನ್ನು ಮಾಡಿಕೊಂಡಿದ್ದಾರೆ. ಆದ್ದರಿಂದ ಅಧಿಕಾರಿಗಳು ಭೂಮಿಯ ಲಭ್ಯತೆ, ಸ್ವಾಧೀನ ಪುಟ 2

## ಸ್ಟಂಟ್ಸ್; ಬಂಧನ

**ಮೈಸೂರು:** ಮೈಸೂರು- ಹುಣಸೂರು ಮುಖ್ಯರಸ್ತೆಯಲ್ಲಿ ಸಾರ್ವಜನಿಕರಿಗೆ ಭೀತಿ ಸೃಷ್ಟಿಸುವಂತೆ ಸ್ಕೂಟರ್ ನಲ್ಲಿ ಅಪಾಯಕಾರಿ ಸ್ಟಂಟ್ಸ್ ಮಾಡಿ ಇನ್ಸ್ಟಾಗ್ರಾಂ ನಲ್ಲಿ ಅಪ್ ಲೋಡ್ ಮಾಡಿದ್ದ ಯುವಕನನ್ನ ಇಲವಾಲ ಪೊಲೀಸ್ ಠಾಣೆ ಪಿಎಸ್ಐ ಬಿ .ಆರ್.ಮಹೇಶ್ ಕುಮಾರ್ ಬಂಧಿಸಿದ್ದಾರೆ. ಮೈಸೂರಿನ ಮೇಟಗಳ್ಳಿ ಬಡಾವಣೆ ಏಕಲವ್ಯ ನಗರದ ನಿವಾಸಿ ಪ್ರಜ್ವಲ್ (22) ಬಂಧಿತ ಯುವಕ. ಸೋಷಿಯಲ್ ಮೀಡಿಯಾಗಳಲ್ಲಿ ಪುಟ 2

## ಮೈಸೂರಿನಲ್ಲಿ 'ಸಿಸಿಎಲ್' ಕಲರವ


**ಮೈಸೂರು:** ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಇಂದಿನಿಂದ ಎರಡು ದಿನ ಸಿಸಿಎಲ್ ಸೆಮಿ ಫೈನಲ್ ಹಾಗೂ ಫೈನಲ್ ಪಂದ್ಯಗಳು ನಡೆಯಲಿದೆ. ನಗರದ ಮಾನಸ ಗಂಗೋತ್ರಿಯಲ್ಲಿರುವ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಮೈದಾನದಲ್ಲಿ ಪಂದ್ಯಗಳು ನಡೆಯಲಿವೆ. ಈಗಾಗಲೇ ಪಂಜಾಬ್ ದೆ ಷೇರ್, ಬೆಂಗಾಲ್ ಟೈಗರ್ಸ್ ,ಕರ್ನಾಟಕ ಬುಲ್ಡೋಜರ್ಸ್, ಹಾಗೂ ಚೆನ್ನೈ ರೈನೋರ್ಸ್ ತಂಡ ಸೆಮಿ ಫೈನಲ್ಸ್ ಪ್ರವೇಶಿಸಿದ್ದು, ಪುಟ 2

## ವಾಣಿಜ್ಯ ಬಳಕೆಯ ಸಿಲಿಂಡರ್ ದರ ಏರಿಕೆ

ದೆಹಲಿ: ಒಂದೆಡೆ ಹೋಳಿ ಮತ್ತೊಂದೆಡೆ ರಂಜಾನ್ ಹಬ್ಬಕ್ಕೆ ದಿನಗಣನೆ ಆರಂಭವಾಗಿದೆ, ಈ ಹೊತ್ತಲ್ಲಿ 19 ಕೆಜಿ ವಾಣಿಜ್ಯ ಸಿಲಿಂಡರ್‌ನ ಬೆಲೆ ಏರಿಕೆ ಮಾಡಿರುವುದು ಗ್ರಾಹಕರಿಗೆ ಶಾಕ್ ನೀಡಿದಂತಾಗಿದೆ. ಮಾರ್ಚ್ 1, 2025 ರಿಂದ, ಅಂದರೆ ಇಂದಿನಿಂದ, ಪುಟ 2

## ಸಮಾಜದ ಹೆಸರಿನಲ್ಲಿ ಸಭೆ ಸಂಘಟಿಸಬೇಡಿ

**ಬೆಂಗಳೂರು:** ಸಮಾಜದ ಹೆಸರಿನಲ್ಲಿ ಸಭೆ ಸಂಘಟಿಸಬೇಡಿ, ಅದರ ಬದಲು ಪಕ್ಷ ಸಂಘಟನೆಗೆ ಒತ್ತು ನೀಡಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಅವರು ಬೆಂಬಲಿಗರಲ್ಲಿ ವಿನಂತಿ ಮಾಡಿದ್ದಾರೆ.



ಮಾರ್ಚ್ 4ರಂದು ವೀರಶೈವ ಲಿಂಗಾಯತ ಮುಖಂಡರ ಸಭೆಗೆ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಬಣ ನಿರ್ಧಾರ ಕೈಗೊಂಡಿರುವ ಬೆನ್ನಲ್ಲೇ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಪರ ವೀರಶೈವ ಲಿಂಗಾಯತ ಸಮುದಾಯದ ಸರಣಿ ಸಭೆಗಳನ್ನು ನಡೆಸಲು ಹಿತೈಷಿಗಳು ನಿರ್ಧರಿಸಿದ್ದರು. ಆದರೆ, ಇದಕ್ಕೆ ತಡೆಯೊಡ್ಡಿರುವ ವಿಜಯೇಂದ್ರ, ಆ ಮೂಲಕ ಯತ್ನಾಳ್ ಬಣಕ್ಕೆ ಟಕ್ಕರ್ ಕೊಟ್ಟಿದ್ದಾರೆ.

ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಸಂದೇಶ ಪ್ರಕಟಿಸಿರುವ ವಿಜಯೇಂದ್ರ, ಸಮ ಸಮಾಜ ಪುಟ 2

## ಉಕ್ರೇನ್ ಅಧ್ಯಕ್ಷ ಝೆಲೆನ್ಸ್ಕಿರನ್ನು ತರಾಟೆಗೆ ತೆಗೆದುಕೊಂಡ ಟ್ರಂಪ್

**ಮಾಸ್ಕೋ(ರಷ್ಯಾ):** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಉಪಾಧ್ಯಕ್ಷ ಜೆಡಿ ವ್ಯಾನ್ಸ್ ಶುಕ್ರವಾರ ಶ್ವೇತಭವನದಲ್ಲಿ ಉಕ್ರೇನಿಯನ್ ನಾಯಕ ವೊಲೊಡಿಮಿರ್ ಝೆಲೆನ್ಸ್ಕಿ ಅವರನ್ನು ತರಾಟೆಗೆ ತೆಗೆದುಕೊಂಡರು

ರಷ್ಯಾ - ಉಕ್ರೇನ್ ಯುದ್ಧದಲ್ಲಿ ಕದನ ವಿರಾಮ ಮಾತುಕತೆ ನಡೆಸಲು ಟ್ರಂಪ್ ಪ್ರಯತ್ನಗಳನ್ನು ನಡೆಸುತ್ತಿದ್ದು, ಈ ಮಧ್ಯೆ ನಿನ್ನೆ ಉಕ್ರೇನ್ ಅಧ್ಯಕ್ಷ ಝೆಲೆನ್ಸ್ಕಿ ಮಾತುಕತೆ ನಡೆಸಲು ಶ್ವೇತಭವನಕ್ಕೆ ಭೇಟಿ ನೀಡಿದರು. ಈ ವೇಳೆ ನಡೆದ ಸಭೆಯಲ್ಲಿ ಝೆಲೆನ್ಸ್ಕಿ ಆಡಿದ ಮಾತೊಂದಕ್ಕೆ ಟ್ರಂಪ್, ಝೆಲೆನ್ಸ್ಕಿ



ಅವರೇ ನೀವು ಸಭೆಗೆ "ಅಗೌರವ" ತೋರುತ್ತಿದ್ದೀರಿ , "ಭವಿಷ್ಯದಲ್ಲಿ ನಾವು ಏನು ಭಾವಿಸಬೇಕೆಂದು ಹೇಳಲು ನಿಮಗೆ ಯಾವುದೇ ಹಕ್ಕಿಲ್ಲ. ನೀವು(ಉಕ್ರೇನ್) ಮೂರನೇ ಮಹಾಯುದ್ಧದೊಂದಿಗೆ ಜೂಜಾಡುತ್ತಿದ್ದೀರಿ" ಎಂದು ಕೋಪದಲ್ಲೇ ಎಚ್ಚರಿಸಿದರು. ಮುಂದುವರಿದ ಮಾತುಕತೆಯಲ್ಲಿ, ಟ್ರಂಪ್ "ನಾನು ನಿಮಗೆ (ಝೆಲೆನ್ಸ್ಕಿ) ಧೈರ್ಯಶಾಲಿ ವ್ಯಕ್ತಿಯಾಗಲು ಅಧಿಕಾರ ನೀಡಿದ್ದೇನೆ. ನೀನು ಒಪ್ಪಂದ ಮಾಡಿಕೊಳ್ಳಬೇಕು ಇಲ್ಲದಿದ್ದರೆ ನಾವು ಹೊರಗೆ ಹೋಗುತ್ತೇವೆ. ನಿಮ್ಮ ಕೈಯಲ್ಲಿ ಏನೂ ಇಲ್ಲ" ಎಂದು ಟೀಕಿಸಿದರು.

## ಡಿಕೆಶಿ ವಿರುದ್ಧ ಸಚಿವ ಕೆ.ಎನ್.ರಾಜಣ್ಣ ಕಿಡಿ

**ಹಾಸನ:** ಮಹಾಶಿವರಾತ್ರಿಯಂದು ಸದ್ಗುರು ಜಗ್ಗಿ ವಾಸುದೇವ್ ಅವರು ಕೊಯಮತ್ತೂರ್ ನಲ್ಲಿ



ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಭಾಗವಹಿಸಿದ್ದಕ್ಕೆ ಕಾಂಗ್ರೆಸ್ ನ ಕೆಲ ನಾಯಕರು ಆಕ್ಷೇಪ ವ್ಯಕ್ತಪಡಿಸಿದ್ದು, ಇದೀಗ ಸಹಕಾರ ಸಚಿವ ಕೆ.ಎನ್ ರಾಜಣ್ಣ ಸಹ ಕಿಡಿಕಾರಿದ್ದಾರೆ.

ಈ ಕುರಿತು ಮಾತನಾಡಿರುವ ಸಚಿವ ಕೆ.ಎನ್ ರಾಜಣ್ಣ, ಸದ್ಗುರು ಜೊತೆ ಡಿಕೆ ಶಿವಕುಮಾರ್ ವೇದಿಕೆ ಹಂಚಿಕೊಂಡಿದ್ದು ಎಷ್ಟು ಸರಿ? ಡಿ.ಕೆ.ಶಿವಕುಮಾರ್ ಅವರ ನಡೆ ಎಷ್ಟರ ಮಟ್ಟಿಗೆ ಸರಿಯೆನಿಸುತ್ತದೆ? ಅವರೇ ಹೇಳಬೇಕು ಎಂದರು. ಈ ಹಿಂದೆ, ರಾಹುಲ್ ಗಾಂಧಿ ಯಾರು? ಪುಟ 2

## ವಾಲ್ಮೀಕಿ ಹೆಸರಲ್ಲಿ ಮೆಡಿಕಲ್ ಕಾಲೇಜಿಗೆ ಪಟ್ಟು

**ಬೆಂಗಳೂರು:** ವಾಲ್ಮೀಕಿ ಸಮುದಾಯದ ಅಭಿವೃದ್ಧಿ ಹಾಗೂ ಸಮುದಾಯದ ಮಕ್ಕಳ ಹಿತದೃಷ್ಟಿಯಿಂದ ವಾಲ್ಮೀಕಿ ನಾಯಕ ಸಮುದಾಯಕ್ಕೆ ಒಂದು ಮೆಡಿಕಲ್ ಕಾಲೇಜು ಅಗತ್ಯ. ಹೀಗಾಗಿ ವಾಲ್ಮೀಕಿ ಹೆಸರಿನಲ್ಲೇ ಮೆಡಿಕಲ್, ಇಂಜಿನಿಯರಿಂಗ್, ನರ್ಸಿಂಗ್ ಸೇರಿದಂತೆ ವೃತ್ತಿಪರ ಕೋರ್ಸ್ ಗಳನ್ನು ಒಳಗೊಂಡ ಕಾಲೇಜನ್ನು ಪಿಪಿಪಿ ಸಹಯೋಗದಲ್ಲಿ ನಿರ್ಮಾಣ ಮಾಡಬೇಕು ಎಂದು ವಿಧಾನ ಪರಿಷತ್ ಮಾಜಿ ಪ್ರತಿಪಕ್ಷ ನಾಯಕ ಹಾಗೂ ಮಾಜಿ ಸಂಸದ ವಿ.ಎಸ್.ಉಗ್ರಪ್ಪ ಆಗ್ರಹಿಸಿದ್ದಾರೆ.

ಬೆಂಗಳೂರಿನ ಹೊರ ವಲಯದಲ್ಲಿರುವ ನಂದಿಬೆಟ್ಟ ಗಾಂಧಿ ಭವನದಲ್ಲಿ ವಾಲ್ಮೀಕಿ ಸಮುದಾಯದ ಅಭಿವೃದ್ಧಿ ಹಿನ್ನೆಲೆಯಲ್ಲಿ ಕರ್ನಾಟಕ ವಾಲ್ಮೀಕಿ ನಾಯಕ ಸಮುದಾಯದ ಸಮಾನ ಮನಸ್ಕರ ವೇದಿಕೆ ಆಯೋಜಿಸಿದ್ದ ಬುದ್ದಿಜೀವಿಗಳು, ಸಾಹಿತಿಗಳು, ವಿವಿಧ ಸಂಘಟನೆಗಳ ಪ್ರಮುಖ ಮುಖಂಡರ ಸಭೆಯಲ್ಲಿ ಭಾಗವಹಿಸಿದ ನಂತರ ಸುದ್ದಿಗಾರರ ಜೊತೆಗೆ ಅವರು



ಮಾತನಾಡಿದರು.

ರಾಮಾಯಣದ ಕರ್ತೃ ಮಹರ್ಷಿ ಆದಿಕ ಕವಿ ವಾಲ್ಮೀಕಿ, ವಾಲ್ಮೀಕಿ ಸಮುದಾಯದಲ್ಲಿ 24 ಜನ ಹಾಲಿ ಅಧಿಕಾರದಲ್ಲಿರುವ ಜನಪ್ರತಿನಿಧಿಗಳಿದ್ದಾರೆ. ಆದರೆ ನಾಯಕ ಸಮಾಜದ ಇಷ್ಟು ಜನಪ್ರತಿನಿಧಿಗಳು ನಾವೆಲ್ಲ ಇದ್ದರೂ ಮುಖ್ಯವಾಹಿನಿಯಲ್ಲಿರುವ ಜನರಿಗೇ ಸರಿಯಾದ ಶೈಕ್ಷಣಿಕವಾಗಿ, ಔದ್ಯೋಗಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ನ್ಯಾಯ ಸಿಕ್ಕಿಲ್ಲ. 1974ರ ಸಮಾಜ ಕಲ್ಯಾಣ ಸಚಿವರ ಸಭೆಯಲ್ಲಿ ಖಅಕ ಖಖಕ ಅಡಿ ಎಸ್ಟಿಗೆ 11 ಸಾವಿರ ಪುಟ 2

## ಡಿಕ್ಕಿ: ಐವರ ದಾರುಣ ಸಾವು



**ಚಾಮರಾಜನಗರ:** ಮಲೈಮಹದೇಶ್ವರ ಬೆಟ್ಟಕ್ಕೆ ಕಾರಿನಲ್ಲಿ ತೆರಳುತ್ತಿದ್ದ ವೇಳೆ ಎದುರಿಗೆ ಬಂದ ಟಿಪ್ಪರ್ ನಡುವೆ ಡಿಕ್ಕಿ ಪರಿಣಾಮ.ಕಾರಿನಲ್ಲಿದ್ದ ಐವರು ಸ್ಥಳದಲ್ಲೇ ಮೃತಪಟ್ಟ ಬೀಕರ ಘಟನೆ ಇಂದು ನಡೆದಿದೆ .

ಕೊಳ್ಳೇಗಾಲ ತಾಲೂಕಿನ ಚಿಕ್ಕ ಇಂದುವಾಡಿ ಸಮೀಪ ಮಧುವನಹಳ್ಳಿ ವಡ್ಡರಕಟ್ಟೆ ಕೆರೆ ಬಳಿ ಅಪಘಾತ ಸಂಭವಿಸಿದ್ದುಮೃತರು ಇಂಜಿನಿಯರಿಂಗ್

# ದುಬಾರಿ ಬೈಕ್‌ಗಳನ್ನ ಕದ್ದಿದ್ದ ಖದೀಮ ಅರೆಸ್ಟ್

**ಬೆಂಗಳೂರು:** ಕಳೆದ ಮೂರು ವರ್ಷಗಳಲ್ಲಿ 100 ಬೈಕ್ ಗಳನ್ನ ಕಳ್ಳತನ ಮಾಡಿದ್ದ ಖತರ್ನಾಕ್ ಖದೀಮನನ್ನ ಬೆಂಗಳೂರಿನ ಕೆ ಆರ್ ಪುರಂ ಠಾಣಾ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಆಂಧ್ರಪ್ರದೇಶದ ಬಂಗಾರುಪಾಳ್ಯಂ ನಿವಾಸಿಯಾಗಿರುವ ಪ್ರಸಾದ್ ಬಾಬು ಬಂಧಿತ ಆರೋಪಿ. ಈತ ಕಳೆದ ಮೂರು ವರ್ಷಗಳಲ್ಲಿ ಬರೋಬ್ಬರಿ 100 ಬೈಕ್‌ಗಳನ್ನು ಕದ್ದಿದ್ದ ಎನ್ನಲಾಗಿದೆ. ಬೆಂಗಳೂರಿಗೆ ಆಗಮಿಸುತ್ತಿದ್ದ ಕಳ್ಳ ಪ್ರಸಾದ್ ಬಾಬು ಕೆ ಆರ್ ಪುರಂ, ಟಿನ್ ಫ್ಯಾಕ್ಟರಿ, ಮಹದೇವಪುರ ಸೇರಿದಂತೆ ವಿವಿಧ ಜನವಸತಿ ಪ್ರದೇಶಗಳಲ್ಲಿ ಸುತ್ತಾಡುತ್ತಿದ್ದ. ಮನೆಗಳ ಮುಂದೆ ನಿಲ್ಲಿಸಲಾಗಿದ್ದ ದುಬಾರಿ ಬೆಲೆಯ ಬೈಕ್ ಗಳನ್ನೇ ಟಾರ್ಗೆಟ್ ಮಾಡಿ ಹ್ಯಾಂಡ್ಲ್ ಲಾಕ್ ಮುರಿದು ಕಳ್ಳತನ ಮಾಡುತ್ತಿದ್ದ ಎನ್ನಲಾಗಿದೆ. ಬೆಂಗಳೂರಿನಿಂದ ಬೈಕ್ ಕದ್ದ ಅದೇ ದಿನದಂದೇ ಅದೇ ಬೈಕ್ ನಲ್ಲಿ ತನ್ನ ಊರಿಗೆ ಪರಾರಿಯಾಗುತ್ತಿದ್ದ. ಕದ್ದ ಬೈಕ್‌ಗಳನ್ನು ಕೇವಲ 15 ರಿಂದ 20 ಸಾವಿರ ರೂಪಾಯಿಗಳಿಗೆ ಆಂಧ್ರಪ್ರದೇಶದಲ್ಲಿ ಮಾರಾಟ ಮಾಡುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

# ಮಾ.2ರಿಂದ ರಮಝಾನ್ ಮಾಸದ ಉಪವಾಸ ಆರಂಭ: ಮೌಲಾನಾ ಮಕ್ಸೂದ್ ಇಮ್ರಾನ್

**ಬೆಂಗಳೂರು:** ಪವಿತ್ರ ರಮಝಾನ್ ಮಾಸದ ಚಂದ್ರ ದರ್ಶನವು ಶುಕ್ರವಾರ ಗೋಚರಿಸದೆ ಇರುವುದರಿಂದ ಮಾ.2ರಿಂದ ರಾಜ್ಯಾದ್ಯಂತ ಉಪವಾಸ ವ್ರತ ಆಚರಣೆ ನಡೆಸಲು ನಿರ್ಧರಿಸಲಾಗಿದೆ ಎಂದು ರಾಜ್ಯ ಚಂದ್ರ ದರ್ಶನ ಸಮಿತಿಯ ಸಂಚಾಲಕ ಮೌಲಾನಾ ಮಕ್ಸೂದ್ ಇಮ್ರಾನ್ ರಶಾದಿ ತಿಳಿಸಿದರು.

ಶುಕ್ರವಾರ ಸಂಜೆ ನಗರದ ಕನ್ನಿಂಗ್ ಹ್ಯಾಮ್ ರಸ್ತೆಯಲ್ಲಿರುವ ರಾಜ್ಯ ವಕ್ಫ್ ಬೋರ್ಡ್ನ ಕೇಂದ್ರ ಕಚೇರಿ(ದಾರುಲ್ ಔಕಾಫ್)ಯಲ್ಲಿ ಅಮೀರೆ ಶರೀಅತ್ ಮೌಲಾನಾ ಸಗೀರ್ ಅಹ್ಮದ್ ಖಾನ್ ರಶಾದಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ರಾಜ್ಯ ಹಾಗೂ ದೇಶದ ವಿವಿಧ ರಾಜ್ಯಗಳಲ್ಲಿ ಚಂದ್ರ ದರ್ಶನದ ಬಗ್ಗೆ ಲಭ್ಯವಾದ ಮಾಹಿತಿ ಕುರಿತು ಚರ್ಚೆ ನಡೆಸಿ ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಆಂಧ್ರಪ್ರದೇಶ, ಬಿಹಾರ, ಉತ್ತರಪ್ರದೇಶ, ತಮಿಳುನಾಡು, ಉತ್ತರಾಖಂಡ, ದಿಲ್ಲಿ ಸೇರಿದಂತೆ ವಿವಿಧ ರಾಜ್ಯಗಳು ಹಾಗೂ ನಮ್ಮ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಮಾಹಿತಿಗಳನ್ನು ತರಿಸಿಕೊಳ್ಳಲಾಗಿತ್ತು. ಎಲ್ಲಿಯೂ ಚಂದ್ರದರ್ಶನವಾದ ಮಾಹಿತಿ ಇಲ್ಲ. ಆದುದರಿಂದ, ಶನಿವಾರದಿಂದ ತರಾವೀ ನಮಾಝ್ ಹಾಗೂ ರವಿವಾರ ಮೊದಲ ಉಪವಾಸ ಆಚರಿಸಲಾಗುವುದು ಎಂದು ಮಕ್ಸೂದ್ ಇಮ್ರಾನ್ ತಿಳಿಸಿದರು.

ಸಭೆಯಲ್ಲಿ ಮುಫ್ತಿ ಇಫ್ತಿಖಾರ್ ಅಹ್ಮದ್ ಖಾಸ್ಮಿ, ಮೌಲಾನಾ ಏಜಾಝ್ ಅಹ್ಮದ್ ನದ್ವಿ, ಮೌಲಾನಾ ಅಬ್ದುಲ್ ಖಾದಿರ್ ವಾಜಿದ್, ಮೌಲಾನಾ ಸೈಯದ್ ಮನ್ಸೂರ್ ರಝಾ ಆಬಿದಿ ಹಾಗೂ ಮೌಲಾನಾ ಖಾರಿ ಝುಲ್ಫಿಖಾರ್ ರಝಾ ನೂರಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಪ್ರತ್ಯೇಕ ಜಂಟಿ ಕೃಷಿ ನಿರ್ದೇಶಕರ ಕಚೇರಿ ಮಂಜೂರು

**ಬೆಂಗಳೂರು:** ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಪ್ರತ್ಯೇಕ ಜಂಟಿ ಕೃಷಿ ನಿರ್ದೇಶಕರ ಕಚೇರಿ ಸ್ಥಾಪಿಸಬೇಕೆಂಬ ರೈತರ ಬಹುದಿನಗಳ ಬೇಡಿಕೆಯನ್ನು ಕೃಷಿ ಸಚಿವರಾದ ಎನ್. ಚಲುವರಾಯಸ್ವಾಮಿ ಈಡೇರಿಸಿದ್ದು, ಈ ಬಗ್ಗೆ ಆದೇಶ ಹೊರಡಿಸಿದ್ದಾರೆ.

ಸಚಿವರ ಸೂಚನೆ ಮೇರೆಗೆ ಕೃಷಿ ಇಲಾಖೆಯಲ್ಲಿನ ಕರ್ನಾಟಕ ಅಂತರಗಂಗಾ ಸೂಕ್ಷ್ಮ ನೀರಾವರಿ ನಿಗಮ ನಿಯಮಿತ ಸಂಸ್ಥೆ (ಕೆಮಿಕ್) ಸಮಾಪನಗೊಳಿಸಿದಾಗ ಲಭ್ಯವಾದ ಜಂಟಿ ಕೃಷಿ ನಿರ್ದೇಶಕರ ಹುದ್ದೆಯನ್ನು ಪೂರಕ ಸಿಬ್ಬಂದಿಯೊಡನೆ ಜಂಟಿ ಕೃಷಿ ನಿರ್ದೇಶಕರು, ಬೆಂಗಳೂರು ಗ್ರಾಮಾಂತರ ಎಂದು ಮರುವಿನ್ಯಾಸಗೊಳಿಸಿ ಆದೇಶ ಹೊರಡಿಸಲಾಗಿದೆ.

ಹುದ್ದೆಗಳ ವಿವರ: ಬೆಂಗಳೂರು ಗ್ರಾಮಾಂತರ ಕೃಷಿ ಕಚೇರಿಗೆ ಜಂಟಿ ಕೃಷಿ ನಿರ್ದೇಶಕರು–1, ಸಹಾಯಕ ಕೃಷಿ ನಿರ್ದೇಶಕರು–2, ಕೃಷಿ ಅಧಿಕಾರಿ–3, ಸಹಾಯ ಆಡಳಿತಾಧಿಕಾರಿ–1, ಅಧೀಕ್ಷಕರು–1, ಪ್ರಥಮ ದರ್ಜೆ ಸಹಾಯಕರು–1, ದ್ವಿತೀಯ ದರ್ಜೆ ಸಹಾಯಕರು–2, ಬೆರಳಚ್ಚುಗಾರರು–1, ವಾಹನ ಚಾಲಕರು–2, ಗ್ರೂಪ್ ಡಿ–3 ಸೇರಿದಂತೆ 17 ಅಧಿಕಾರಿ ಸಿಬ್ಬಂದಿಗಳ ಹುದ್ದೆಗಳನ್ನು ಸೃಜಿಸಲಾಗಿದೆ. ಇದಲ್ಲದೇ 13 ಹುದ್ದೆಗಳನ್ನೊಳಗೊಂಡ ಬೆಂಗಳೂರು ಗ್ರಾಮಾಂತರ ಉಪ ಕೃಷಿ ನಿರ್ದೇಶಕರ ಕಚೇರಿ ಕೂಡಾ ಕಾರ್ಯನಿರ್ವಹಿಸಲಿದೆ. ಇದರಿಂದಾಗಿ ಒಟ್ಟು 30 ಅಧಿಕಾರಿ ಸಿಬ್ಬಂದಿಗಳು ಬೆಂಗಳೂರು ಗ್ರಾಮಾಂತರ ಜಿಲ್ಲೆ ರೈತರ ಸೇವೆಗೆ ಲಭ್ಯವಾಗಲಿದ್ದಾರೆ.

ಜಂಟಿ ಕೃಷಿ ನಿರ್ದೇಶಕ ಕಚೇರಿಗಳ ಕೇಂದ್ರ ಸ್ಥಾನ: ಜಂಟಿ ಕೃಷಿ ನಿರ್ದೇಶಕರು ಬೆಂಗಳೂರು ನಗರ ಜಿಲ್ಲೆ ಕಚೇರಿಯನ್ನು ಹಾಲಿ ಇರುವ ಬನಶಂಕರಿಯೇ ಮುಂದುವರೆಸಿದ್ದು, ಜಂಟಿ ಕೃಷಿ ನಿರ್ದೇಶಕರು, ಬೆಂಗಳೂರು ಹುದ್ದೆಯನ್ನು ಜಂಟಿ ಕೃಷಿ ನಿರ್ದೇಶಕರು, ಬೆಂಗಳೂರು ಗ್ರಾಮಾಂತರ ಎಂದು ಪುನರ್ ನಾಮಕರಣ ಮಾಡಲಾಗಿದೆ. ಇವರ ಕಚೇರಿಯನ್ನು ಜಿಲ್ಲಾಡಳಿತ ಭವನ, ಬೀರಸಂದ್ರ ಗ್ರಾಮ, ದೇವನಹಳ್ಳಿ ತಾಲ್ಲೂಕು ಇಲ್ಲಿಗೆ ಸ್ಥಳಾಂತರ ಮಾಡಲು ನಿರ್ದೇಶನ ನೀಡಲಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕೃಷಿ ಇಲಾಖೆಯ ಎಲ್ಲಾ ಕಚೇರಿಗಳ ಉಸ್ತುವಾರಿ ಈ ಜಂಟಿ ಕೃಷಿ ನಿರ್ದೇಶಕರ ವ್ಯಾಪ್ತಿಗೆ ಒಳಪಡಲಿದೆ.

ಈ ಹಿಂದೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ, ಹೊಸಕೋಟೆ, ದೇವನಹಳ್ಳಿ ದೊಡ್ಡಬಳ್ಳಾಪುರ, ಬೆಂಗಳೂರು ನಗರ ಜಿಲ್ಲೆಯ ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಬೆಂಗಳೂರು ಪೂರ್ವ, ಯಲಹಂಕ ಮತ್ತು ಆನೇಕಲ್ ತಾಲ್ಲೂಕುಗಳು ಸೇರಿ ಒಂದೇ ಜಂಟಿ ಕೃಷಿ ನಿರ್ದೇಶಕರ ಹುದ್ದೆ ಇತ್ತು, ಈ ಕಚೇರಿ ಅಧೀನದಲ್ಲಿ 11 ರೈತ ಸಂಪರ್ಕ ಕೇಂದ್ರಗಳು (ಬೆಂಗಳೂರು ಉತ್ತರ 4+ ಆನೇಕಲ್–7) ಕಾರ್ಯ ನಿರ್ವಹಿಸುತ್ತಿವೆ. ಜೊತೆಗೆ ರಾಮಕೃಷ್ಣ ಕೃಷಿ ಪಾಠಶಾಲೆ, ಪೀಡೆನಾಶಕ ಶೇಷಾಂಶ ಪ್ರಯೋಗಾಲಯ, ಮಣ್ಣು ಪರೀಕ್ಷಾ ಪ್ರಯೋಗಾಲಯಗಳು ಸಹ ಕಾರ್ಯ ನಿರ್ವಹಿಸುತ್ತಿವೆ.

ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಿಗೆ ಪ್ರತ್ಯೇಕ ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಇರುವುದರಿಂದ, ಎರಡು ಜಿಲ್ಲೆಗಳಿಗೆ ಸಂಬಂಧಿಸಿದಂತೆ ಎಲ್ಲಾ ಸಭೆಗಳಲ್ಲಿ ಒಬ್ಬರೇ ಜಂಟಿ ಕೃಷಿ ನಿರ್ದೇಶಕರೇ ಭಾಗವಹಿಸಬೇಕಾಗಿತ್ತು.

ಇದರಿಂದಾಗಿ, ಎರಡು ಜಿಲ್ಲೆಗಳ ಕೃಷಿ ಚಟುವಟಿಕೆಗಳನ್ನು ಸಕಾಲದಲ್ಲಿ ಕೈಗೊಂಡು ಇಲಾಖೆಯ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವಲ್ಲಿ ಹೆಚ್ಚಿನ ಕಾರ್ಯ ಒತ್ತಡ ಉಂಟಾಗುತ್ತಿತ್ತು, ಇಲಾಖೆಯ ಸವಲತ್ತುಗಳನ್ನು ರೈತರಿಗೆ ತಲುಪಿಸುವಲ್ಲಿ ಕಷ್ಟಸಾಧ್ಯವಾಗುತ್ತಿತ್ತು. ಹೊಸ ಜಂಟಿ ಕೃಷಿ ನಿರ್ದೇಶಕರ ಹುದ್ದೆ ಸೃಜನೆಯಾದ ನಂತರ ಈ ಎಲ್ಲಾ ಸಮಸ್ಯೆಗಳು ಕೊನೆಯಾಗಿ ರೈತರಿಗೆ ಸಕಾಲದಲ್ಲಿ ಸೇವೆ ದೊರೆಯಲು ಅನುಕೂಲವಾಗಲಿದೆ.

ಕೃಷಿ ಇಲಾಖೆಯ ಕಾರ್ಯಕ್ರಮಗಳನ್ನು ಸಕಾಲದಲ್ಲಿ ರೈತರಿಗೆ ತಲುಪಿಸುವಲ್ಲಿ ಅಧಿಕಾರಿಗಳ ಪಾತ್ರ ಮಹತ್ವದ್ದಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಪ್ರತ್ಯೇಕ ಜಂಟಿ ಕೃಷಿ ನಿರ್ದೇಶಕರ ಕಚೇರಿ ಪ್ರಾರಂಭವಾಗಲಿದ್ದು, ಗ್ರಾಮಾಂತರ ಜಿಲ್ಲೆಯ ಜನರಿಗೆ ಇಲಾಖೆಯ ಸವಲತ್ತುಗಳು ಮತ್ತು ತಾಂತ್ರಿಕ ನೆರವು ಶೀಘ್ರವಾಗಿ ದೊರೆಯಲು ನೆರವಾಗುತ್ತದೆ. ಅಲ್ಲದೇ ರಾಜ್ಯಾದ್ಯಂತ ಖಾಲಿ ಇರುವ ಹುದ್ದೆಗಳ ಭರ್ತಿ ಪ್ರಕ್ರಿಯೆ ಚಾಲನೆಯಲ್ಲಿದ್ದು, ಶೀಘ್ರವಾಗಿ 956 ಕೃಷಿ ಅಧಿಕಾರಿಗಳ ಹುದ್ದೆಯನ್ನು ಕೆ.ಪಿ.ಎಸ್.ಸಿ ಮೂಲಕ ಭರ್ತಿಗೆ ಕ್ರಮಕೈಗೊಳ್ಳಲಾಗಿದೆ

# ‘ಹಣಕ್ಕೂ, ಪ್ರತಿಭೆಗೂ ಸಂಬಂಧವಿಲ್ಲ’



**ನವದೆಹಲಿ:** ಮಧ್ಯಮ ವರ್ಗದ ಪೋಷಕರು ತಮ್ಮ ಮಕ್ಕಳನ್ನು ಕ್ರೀಡೆಯತ್ತ ಪ್ರೋತ್ಸಾಹಿಸುವ ಮೊದಲು ಎಚ್ಚರಿಕೆಯಿಂದ ಯೋಚಿಸಬೇಕು ಎಂದು ಭಾರತದ ಬ್ಯಾಡ್ಮಿಂಟನ್ ತಾರೆ ಪಿವಿ ಸಿಂಧು ಅವರ ತಂದೆ ಪಿವಿ ರಮಣ ಅಭಿಪ್ರಾಯಪಟ್ಟಿದ್ದಾರೆ.

ಕೆಳಮಧ್ಯಮ ಮತ್ತು ಮಧ್ಯಮ ವರ್ಗದ ಆಟಗಾರರು ಕ್ರೀಡೆಯಲ್ಲಿ ಸಾಧನೆ ಮಾಡಿದರೆ ಉತ್ತಮ ಉದ್ಯೋಗಾವಕಾಶಗಳು ದೊರೆಯುತ್ತವೆ ಎಂದು ಅವರು ಹೇಳಿದ್ದಾರೆ.

ಪ್ರಮುಖ ಸುದ್ದಿ ಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಪಿವಿ ರಮಣ ತಮ್ಮ ಜೀವನದ ಅನುಭವಗಳು ಮತ್ತು ಸಿಂಧು ಅವರ ವೃತ್ತಿಜೀವನದ ಬಗ್ಗೆ ಹಲವು ವಿಷಯಗಳನ್ನು ಹಂಚಿಕೊಂಡಿದ್ದಾರೆ.

ಕ್ರೀಡಾ ಕೋಟಾದಲ್ಲಿ ಕೆಲಸ ಸಿಕ್ಕಿತು: ನನಗೆ ಮೂರು ವರ್ಷದವನಿದ್ದಾಗ ನನ್ನ ತಂದೆ ತೀರಿಕೊಂಡರು. ನನ್ನ ಹತ್ತು ಮಂದಿಯಲ್ಲಿ ನಾನು ಚಿಕ್ಕವನಾಗಿದ್ದೆ. ಆದರೆ ನನ್ನ ಸಹೋದರ ಸಹೋದರಿಯರು ನನ್ನನ್ನು ಕ್ರೀಡೆಯತ್ತ ಪ್ರೋತ್ಸಾಹಿಸಿದರು. ನಾನು ರಾಷ್ಟ್ರಮಟ್ಟದಲ್ಲಿ ವಾಲಿಬಾಲ್ ಆಡಿದ್ದೇನೆ. ಆಗ ಅವರೆಲ್ಲರೂ ಸಂತೋಷಪಟ್ಟರು. ಆ ಕ್ರೀಡೆಯಿಂದ ನನಗೆ ರೈಲ್ವೆಯಲ್ಲಿ ಕೆಲಸ ಸಿಕ್ಕಿತು. ನೀವು ಕೆಳ ಮಧ್ಯಮ ವರ್ಗದವರಾಗಿದ್ದರೆ ಮಧ್ಯಮ ವರ್ಗದವರಾಗಿದ್ದರೆ, ಯಾವುದೇ ಕ್ರೀಡೆಯಲ್ಲಿ ಮಿಂಚಿದರೆ, ನಿಮಗೆ ಒಳ್ಳೆಯ ಉದ್ಯೋಗದ ಅವಕಾಶಗಳು ಸಿಗುತ್ತವೆ ಎಂದು ಸಿಂಧು ತಂದೆ ಪಿವಿ ರಮಣ್ ಹೇಳಿದ್ದಾರೆ.

ಗೋಪಿಚಂದ್ ಹೇಳಿಕೆ ಒಪ್ಪದ ರಮಣ: ಭಾರತೀಯ ಬ್ಯಾಡ್ಮಿಂಟನ್ ದಂತಕಥೆ ಮತ್ತು ಕೋಚ್ ಪುಲ್ಲೇಲ ಗೋಪಿಚಂದ್, ಶ್ರೀಮಂತ ಮಕ್ಕಳು ಮಾತ್ರ ಕ್ರೀಡೆಯನ್ನು ವೃತ್ತಿಯಾಗಿ ಆಯ್ಕೆ ಮಾಡಿಕೊಳ್ಳಬೇಕು ಎಂಬ ರೀತಿಯಲ್ಲಿ ಹೇಳಿದ್ದರು. ಅವರ ಈ ಮಾತಿಗೆ ಪಿ.ವಿ.ರಮಣ ಪರೋಕ್ಷವಾಗಿ ಪ್ರತಿಕ್ರಿಯಿಸಿದ್ದಾರೆ. ಪ್ರತಿಭೆ ಯಾವಾಗಲೂ ತನ್ನನ್ನು ತಾನೇ ಬಹಿರಂಗಪಡಿಸುತ್ತದೆ.

ಅದು ಎಂದಿಗೂ ಹಣಕ್ಕಾಗಿ ಆಗಿರುವುದಿಲ್ಲ. ನನ್ನ ಹಿರಿಯ ಮಗಳು ದಿವ್ಯಾ ಬಾಲ್ಯದಲ್ಲಿ ನೆಟ್‌ಬಾಲ್‌ನಲ್ಲಿ ಉತ್ತಮವಾಗಿದ್ದಳು. ನಂತರ ಅವಳು ವೈದ್ಯಳಾದಳು. ಸಿಂಧು ಚಿಕ್ಕವಳಿದ್ದಾಗಲೇ ಬ್ಯಾಡ್ಮಿಂಟನ್ ನಲ್ಲಿ ಪ್ರತಿಭೆಯನ್ನು ತೋರಿಸಿದಳು. ಮಕ್ಕಳ ಪ್ರತಿಭೆಯನ್ನು ಪೋಷಕರು ಗುರುತಿಸಬೇಕು. ನನ್ನ ಹಿರಿಯ ಮಗಳು ಅಧ್ಯಯನದಲ್ಲಿ ಆಸಕ್ತಿ ಹೊಂದಿದ್ದಾಳೆ. ನಾನು ಅವಳನ್ನು ಆ ದಿಕ್ಕಿನಲ್ಲಿ ಪ್ರೋತ್ಸಾಹಿಸಿದೆ. ಸಿಂಧು 10 ನೇ ತರಗತಿಯ ಮಕ್ಕಳೊಂದಿಗೆ ಉತ್ತಮ ಸ್ಥಿತಿಯಲ್ಲಿದ್ದಳು. ನಾನು ಎದೆಗುಂದುವುದಿಲ್ಲ ಎಂದು ಪಿ.ವಿ.ರಮಣ ಹೇಳಿದ್ದಾರೆ .

ಕ್ರೀಡಾ ಕೋಟಾದಡಿ ಪ್ರಮುಖ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಸಿಗುತ್ತದೆ. ಆಟಗಾರರಿಗೆ ಉದ್ಯೋಗ ಮತ್ತು ಇತರ ಅವಕಾಶಗಳ ಬಗ್ಗೆ ತಿಳಿಸುವುದು ತರಬೇತುದಾರರ ಜವಾಬ್ದಾರಿಯಾಗಿದೆ. ಕ್ರೀಡಾಪಟುಗಳು ಕನಿಷ್ಠ ಪದವಿ ಪೂರ್ಣಗೊಳಿಸಬೇಕು. ಆಗ ಮಾತ್ರ ಅವರು ಕ್ರೀಡಾ ಕೋಟಾದಲ್ಲಿ ಉತ್ತಮ ಉದ್ಯೋಗವನ್ನು ಪಡೆಯಬಹುದು ಎಂದು ಪಿ ವಿ ರಮಣ್ ಹೇಳಿದ್ದಾರೆ.

ಮೊದಲ ಪುಟದಿಂದ

## ಪರೀಕ್ಷಾ ಕೇಂದ್ರಗಳಲ್ಲಿ ಕಣ್ಗಾವಲು

ಪರೀಕ್ಷೆ ನಡೆಯುವ ಸಮಯದಲ್ಲಿ ಪರೀಕ್ಷಾ ಕೇಂದ್ರಗಳ ಸುತ್ತ 200 ಮೀಟರ್ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಲಾಗಿದೆ. ನಿಷೇಧಿತ ಪ್ರದೇಶದಲ್ಲಿ ಜೆರಾಕ್ಸ್, ಸೈಬರ್, ಕಂಪ್ಯೂಟರ್ ಸೆಂಟರ್‌ಗಳನ್ನು ಮುಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ. ಪರೀಕ್ಷಾ ಕೇಂದ್ರಗಳಲ್ಲಿ ಮೊಬೈಲ್ ಫೋನ್, ಸ್ಮಾರ್ಟ್ ವಾಚ್, ಸೇರಿದಂತೆ ಎಲ್ಲಾ ವಿಧದ ಎಲೆಕ್ಟ್ರಾನಿಕ್ ಉಪಕರಣಗಳನ್ನು ನಿಷೇಧಿಸಲಾಗಿದೆ.

ಪರೀಕ್ಷಾ ಕೇಂದ್ರಗಳಿಗೆ ಸಚಿವ ಮಧುಬಂಗಾರಪ್ಪ ಅವರು ಇಂದು ಭೇಟಿ ನೀಡಿ ವಿದ್ಯಾರ್ಥಿಗಳಿಗೆ ಧೈರ್ಯ ಮತ್ತು ಉತ್ಸಾಹ ತುಂಬುವ ಕೆಲಸ ಮಾಡಿದರು.

ಮಲ್ಲೇಶ್ವರಂನ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಭೇಟಿ ನೀಡಿ, ವಿದ್ಯಾರ್ಥಿಗಳು ಆತಂಕ ತೊರೆದು ಧೈರ್ಯವಾಗಿ ಪರೀಕ್ಷೆ ಎದುರಿಸಿ ಎಂದು ಹೇಳುವ ಮೂಲಕ ಆತ್ಮಸ್ಥೈರ್ಯ ತುಂಬಿದರು.ದ್ವಿತೀಯ ಪಿಯುಸಿ ಮತ್ತು 10ನೇ ತರಗತಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಕೆಎಸ್ ಆರ್‌ಟಿಸಿಯಿಂದ ಉಚಿತ ಬಸ್ ಪ್ರಯಾಣ ವ್ಯವಸ್ಥೆಯನ್ನು ಒದಗಿಸಲಾಗಿದೆ. ವಿದ್ಯಾರ್ಥಿಗಳು ತಮ್ಮ ಪರೀಕ್ಷಾ ಪ್ರವೇಶಪತ್ರವನ್ನು ತೋರಿಸಿ, ಉಚಿತವಾಗಿ ಸಂಚರಿಸಬಹುದು.

ಉತ್ತರ ಪತ್ರಿಕೆ ಮೌಲ್ಯಮಾಪನಕ್ಕಾಗಿ, 31,000 ಮೌಲ್ಯಮಾಪಕರು 76 ಕೇಂದ್ರಗಳಲ್ಲಿ ಪಿಯುಸಿ ಪತ್ರಿಕೆಗಳನ್ನು ಪರಿಶೀಲಿಸಲಿದ್ದಾರೆ.

## ಮುಂದೂಡಲು ಸಾಧ್ಯವಿಲ್ಲ

ಬಂದ್ ಕಾರಣವೊಡ್ಡಿ ಅವುಗಳನ್ನು ಮುಂದೂಡಲು ಸಾಧ್ಯವಿಲ್ಲ ಎಂದರು. ಮಕ್ಕಳಿಗೆ ಯಾವುದೇ ತೊಂದರೆ ಆಗದಂತೆ ಸಹಕಾರ ನೀಡಬೇಕು ಎಂದು ಹೋರಾಟಗಾರರಲ್ಲಿ ಮನವಿ ಮಾಡುವುದಾಗಿ ತಿಳಿಸಿದರು.

ಈಗಾಗಲೇ ವೇಳಾಪಟ್ಟಿ ಸಿದ್ಧ ಪಡಿಸಿ ಬಿಡುಗಡೆ ಮಾಡಲಾಗಿದೆ, ಅದರಲ್ಲಿ ಬದಲಾವಣೆ ಆದರೆ, ಕಷ್ಟವಾಗಲಿದೆ ಎಂದು ಸಚಿವರು ಹೇಳಿದರು.

## ಸ್ಟಂಟ್ಸ್; ಬಂಧನ

’ ನೀಡಿರುವ ಅವರು, ರಾಜ್ಯದಲ್ಲಿ ಎಂದೂ ಜನರಿಂದ ಬಹುಮತ ಪಡೆಯದ ಬಿಜೆಪಿ ವಾಮ ಮಾರ್ಗದ ಮೂಲಕ ಅಧಿಕಾರ ಹಿಡಿದು ಹತ್ತಾರು ಹಗರಣ ಮಾಡಿ 40 ಪರ್ಸೆಂಟ್ ಸರ್ಕಾರ ಎಂಬ .ಕುಖ್ಯಾತಿ ಪಡೆದು ಜನರಿಂದ ತಿರಸ್ಕೃತ ವಾಗಿದೆ. ಪ್ರತಿ ಪಕ್ಷ ಸ್ಥಾನದ ಜವಾಬ್ದಾರಿ ಯನ್ನೂ ಸರಿಯಾಗಿ ನಿಭಾಯಿಸದೆ ವಿಫಲಗೊಂಡು ಇದೀಗ ರಾಜ್ಯ ಸರ್ಕಾರದ ವಿರುದ್ಧ ಹೋರಾಟ ಎಂಬ ಹೊಸ ನಾಟಕ ಆರಂಭಿಸಿದೆ ಎಂದು ಆಕ್ರೋಶ ವ್ಯಕ್ತ ಪಡಿಸಿದ್ದಾರೆ.

ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆ ಅನುಷ್ಠಾನ ಹಾಗೂ ಜನಪರ ತೀರ್ಮಾನ ಗಳನ್ನು

ಬಿಜೆಪಿ ಗೆ ಸಹಿಸಲು ಆಗುತ್ತಿಲ್ಲ, ಹೀಗಾಗಿ ಅನಗತ್ಯ ವಿಷಯ ಮುಂದಿಡುತ್ತಿದೆ. ಮೊದಲಿಗೆ ಮುಡಾ ಆಯ್ತು, ನಂತರ ವಖ್ಛ್ ಆಯ್ತು, ಇದೀಗ ಗುತ್ತಿಗೆದಾರ ಸಚಿನ್ ಪಂಚಾಳ್ ಆತ್ಮಹತ್ಯೆ ಪ್ರಕರಣ ದಲ್ಲಿ ಹೋರಾಟ ಎಂದು ಹೇಳಿದೆ. ರಾಜಕೀಯವಾಗಿ ಪ್ರಿಯಾಂಕ್ ಖರ್ಗೆ ಅವರನ್ನು ಎದುರಿಸಲು ಸಾಧ್ಯವಾಗದೆ ಅವರಿಗೆ ಸಂಬಂಧವೇ ಇಲ್ಲದ ಅವರ ಪಾತ್ರವೇ ಇರದ ಸಚಿನ್ ಆತ್ಮಹತ್ಯೆ ಪ್ರಕರಣ ದಲ್ಲಿ ರಾಜೀನಾಮೆ ಕೇಳುತ್ತಿರುವುದು ಬಿಜೆಪಿಯವರ ಎಳಸುತನಕ್ಕೆ ಸಾಕ್ಷಿ ಎಂದು ಜಮೀರ್ ಅಹಮದ್ ಖಾನ್ ಲೇವಡಿ ಮಾಡಿದ್ದಾರೆ.

ವಖ್ಛ್ ವಿಚಾರದಲ್ಲಿ ಅಧಿವೇಶನ ದಲ್ಲಿ ಎರಡೂ ಸದನಗಳಲ್ಲಿ ಸಮರ್ಪಕ ಉತ್ತರ ನೀಡಲಾಗಿದೆ. ಆಗ ಗಪ್ ಚುಪ್ ಆಗಿ ಯಾರೂ ಏನೂ ಮಾತನಾಡಲಿಲ್ಲ. ವಿಧಾನ ಸಭೆಯಲ್ಲಿ ಉತ್ತರ ನೀಡುವಾಗ ಬಸನಗೌಡ ಪಾಟೀಲ್ ಯತ್ನಾಳ್ ಅವರು ತಪ್ಪಿಸಿಕೊಂಡು ಹೋದರು. ಅಂದು ನಾಪತ್ತೆ ಆಗಿದ್ದವರು ಈಗ ಮತ್ತೆ ಕಂಪ್ಲಿ ಯಿಂದ ಹೋರಾಟ ಎಂದು ಹೊರಟಿದ್ದಾರೆ. ರಾಜ್ಯದ ಜನತೆಯನ್ನು ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿರುವ ಅವರಿಗೆ ಸರಿಯಾದ ಪಾಠ ಕಲಿಸಲಿದ್ದಾರೆ. ಬಿಜೆಪಿಯವರು ಎಷ್ಟೇ ಬಟ್ಟೆ ಹರಿದುಕೊಂಡು ಅರಚಿದರೂ ಸಿದ್ದರಾಮಯ್ಯ ಹಾಗೂ ಡಿಕೆ ಶಿವಕುಮಾರ್ ನೇತೃತ್ವದ ಕಾಂಗ್ರೆಸ್ ಸರ್ಕಾರ ವನ್ನು ಅಲ್ಲಾಡಿಸಲು ಸಾಧ್ಯವಿಲ್ಲ. ಅಭಿವೃದ್ಧಿ ವಿಚಾರದಲ್ಲಿ ಬಹಿರಂಗ ಚರ್ಚೆಗೆ ಬರಲಿ ಎಂದು ಜಮೀರ್ ಅಹಮದ್ ಖಾನ್ ಅವರು ಸವಾಲು ಹಾಕಿದ್ದಾರೆ.

## ‘ಸಿಸಿಎಲ್’ ಕಲರವ

ಇಂದು ಮಧ್ಯಾಹ್ನ 2 ಗಂಟೆಗೆ ಬೆಂಗಾಲ್ ಟೈಗರ್ಸ್ ಹಾಗೂ ಪಂಜಾಬ್ ದೆ ಷೇರ್ ನಡುವೆ ಮೊದಲ ಸೆಮಿ ಫೈನಲ್ ನಡೆಯಲಿದೆ.

ಸಂಜೆ 6:30 ರಿಂದ ಕರ್ನಾಟಕ ಬುಲ್ಡೋಜರ್ಸ್ ಹಾಗೂ ಚೆನ್ನೈ ರೈನೋರ್ಸ್ ನಡುವೆ ಎರಡನೇ ಸೆಮಿ ಫೈನಲ್ ಪಂದ್ಯ ನಡೆಯಲಿದ್ದು ಗೆದ್ದ ತಂಡಗಳು ನಾಳೆ ಫೈನಲ್ ನಲ್ಲಿ ಮುಖಾಮುಖಿಯಾಗಲಿವೆ. ಸೆಲೆಬ್ರಿಟಿಸ್ ಕ್ರಿಕೆಟ್ ಕಣ್ತುಂಬಿಕೊಳ್ಳಲು ಅಭಿಮಾನಿಗಳು ಕಾತರದಿಂದ ಕಾಯುತ್ತಿದ್ದಾರೆ.

## ಅನುಷ್ಠಾನಕ್ಕೆ ಪಾಟೀಲ್ ಸೂಚನೆ

ಪ್ರಕ್ರಿಯೆ, ಇರಬಹುದಾದ ವಿವಾದಗಳ ಇತ್ಯರ್ಥ, ಈಗಾಗಲೇ ಸರಕಾರದ ಮಟ್ಟದಲ್ಲಿ ಇರುವ ಭೂಮಿ ಇವುಗಳ ಬಗ್ಗೆ ತಿಳಿವಳಿಕೆ ಹೊಂದಿರಬೇಕು ಎಂದು ಅವರು ಹೇಳಿದ್ದಾರೆ.

ಸುಗಮ ಹೂಡಿಕೆಗೆ ಕೈಗಾರಿಕಾ ಇಲಾಖೆಯು ಉದ್ಯಮಿಸ್ನೇಹಿ ಏಕಗವಾಕ್ಷಿ ವ್ಯವಸ್ಥೆಯನ್ನು ಕೂಡ ರೂಪಿಸಿದೆ. ಈ ಬಗ್ಗೆ ಕೂಡ ಸಂಬಂಧಿಸಿದ ಉಳಿದ ಇಲಾಖೆಗಳ ಅಧಿಕಾರಿಗಳಲ್ಲೂ ಜಾಗ್ರತಿ ಮೂಡಿಸಬೇಕು ಎಂದು ಅವರು ಸೂಚಿಸಿದ್ದಾರೆ.

ಕೈಗಾರಿಕಾ ಯೋಜನೆಗಳ ಜತೆ ಕಂದಾಯ, ಅರಣ್ಯ, ಇಂಧನ, ನಗರಾಭಿವೃದ್ಧಿ, ಮಾಲಿನ್ಯ ನಿಯಂತ್ರಣ ಮಂಡಳಿ, ಬಿಡಬ್ಲ್ಯುಎಸ್‌ಎಸ್ ಬಿ ಮುಂತಾದ ಇಲಾಖೆಗಳು ನಿಕಟ ಸಂಬಂಧ ಹೊಂದಿವೆ. ಈ ಇಲಾಖೆಗಳಿಂದ ಕೂಡ ಕೈಗಾರಿಕಾ ಯೋಜನೆಗಳಿಗೆ ಅನುಮತಿ ಅಗತ್ಯವಾಗಿದೆ. ಇವೆಲ್ಲವುಗಳ ಜೊತೆ ಕೈಗಾರಿಕಾ ಇಲಾಖೆಯ ಅಧಿಕಾರಿಗಳು ಸಮನ್ವಯ ಸಾಧಿಸಬೇಕು ಎಂದು ಎಂ.ಬಿ ಪಾಟೀಲ್ ಸಭೆಯಲ್ಲಿ ಗಮನ ಸೆಳೆದು ಮನದಟ್ಟು ಮಾಡಿದ್ದಾರೆ.

ಸಭೆಯಲ್ಲಿ ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಆಯುಕ್ತೆ ಗುಂಜನ್ ಕೃಷ್ಣ, ಕೆಐಎಡಿಬಿ ಸಿಇಒ ಡಾ.ಮಹೇಶ್, ಉದ್ಯೋಗ ಮಿತ್ರ ವ್ಯವಸ್ಥಾಪಕ ನಿರ್ದೇಶಕ ದೊಡ್ಡ ಬಸವರಾಜು, ಐಕೆಎಫ್ ಹೆಚ್ಚುವರಿ ನಿರ್ದೇಶಕ ಶಿವಕುಮಾರ, ಜಗದೀಶ ಸೇರಿದಂತೆ ಇತರ ಹಿರಿಯ ಅಧಿಕಾರಿಗಳು ಇದ್ದರು.

## ಸಿಲಿಂಡರ್ ದರ ಏರಿಕೆ

19 ಕೆಜಿ ವಾಣಿಜ್ಯ ಬಳಕೆಯ ಗ್ಯಾಸ್ ಸಿಲಿಂಡರ್‌ನ ಬೆಲೆಯನ್ನು 6 ರೂ.ಗಳಷ್ಟು ಹೆಚ್ಚಿಸಲಾಗಿದೆ.

ಇಂಡಿಯನ್ ಆಯಿಲ್ ಇಂದಿನಿಂದ ವಾಣಿಜ್ಯ ಎಲ್‌ಪಿಜಿ ಗ್ಯಾಸ್ ಸಿಲಿಂಡರ್‌ಗಳ ಬೆಲೆಯನ್ನು 6 ರೂ. ಹೆಚ್ಚಿಸಿದ್ದು, ಈ ಹಿಂದೆ 1797 ರೂ. ಇದ್ದ ಪ್ರತಿ ಸಿಲಿಂಡರ್‌ಗೆ 1803 ರೂ.ಗೆ ಏರಿಕೆಯಾಗಿದೆ. ಸರ್ಕಾರಿ ತೈಲ ಕಂಪನಿಗಳು ಪ್ರತಿ ತಿಂಗಳ ಮೊದಲ ದಿನದಂದು ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆಗಳನ್ನು ಪರಿಶೀಲಿಸುತ್ತವೆ. ಇಂದಿನಿಂದ ಹೊಸ ತಿಂಗಳು ಪ್ರಾರಂಭವಾಗುತ್ತಿದೆ.

ದೆಹಲಿಯಲ್ಲಿ 19 ಕೆಜಿ ಸಿಲಿಂಡರ್ ಬೆಲೆಯನ್ನು 1797 ರೂ. ಗಳಿಂದ 1803 ರೂ.ಗಳಿಗೆ ಹೆಚ್ಚಿಸಲಾಗಿದೆ. ಕೋಲ್ಕತ್ತಾದಲ್ಲಿ ಹೊಸ ಬೆಲೆ 1907 ರೂ.ಗಳಿಂದ 1913 ರೂ.ಗಳಿಗೆ ಏರಿಕೆಯಾಗಿದೆ. ಮುಂಬೈನಲ್ಲಿ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ನ ಹೊಸ ಬೆಲೆ 1749.50 ರೂ.ಗಳಿಂದ 1755.50 ರೂ.ಗಳಿಗೆ ಏರಿಕೆಯಾಗಿದೆ. ಚೆನ್ನೈನಲ್ಲಿ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಗ್ಯಾಸ್ ಈಗ 1959 ರೂ.ಗಳಿಂದ 1965 ರೂ. ಗಳಿಗೆ ಲಭ್ಯವಿರುತ್ತದೆ.

ಇಂದಿನಿಂದ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆಯಲ್ಲಿ ಹೆಚ್ಚಳವಾಗಿದ್ದರೂ, ದೇಶೀಯ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆಯಲ್ಲಿ ಯಾವುದೇ ಬದಲಾವಣೆಯಾಗಿಲ್ಲ. ಆದರೆ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆಯಲ್ಲಿನ ಹೆಚ್ಚಳವು ರೆಸ್ಟೋರೆಂಟ್‌ಗಳಲ್ಲಿನ ಊಟದ ಮೇಲೆ ಪರಿಣಾಮ ಬೀರಬಹುದು. ರೆಸ್ಟೋರೆಂಟ್‌ಗಳು ತಮ್ಮ ಆಹಾರದ ದರಗಳನ್ನು ಹೆಚ್ಚಿಸಬಹುದು.

## ಪ್ರವಾಸದಲ್ಲಿ ಪ್ರಧಾನಿ

ವಂತಾರಾದಲ್ಲಿ ಪ್ರಧಾನಿ ಜಂಗಲ್ ಸಫಾರಿ: ಎರಡನೇ ದಿನದ ಪ್ರವಾಸದಲ್ಲಿ ಪ್ರಧಾನಿ ಮೋದಿ ರಾಜ್ಯದ ಪ್ರಾಣಿ ರಕ್ಷಣೆ, ಸಂರಕ್ಷಣೆ ಮತ್ತು ಪುನರ್ವಸತಿ ಕೇಂದ್ರವಾದ ವಂತಾರಕ್ಕೆ ಭೇಟಿ ನೀಡಲಿದ್ದಾರೆ. ಸುಮಾರು 3,000 ಎಕರೆಗಳಷ್ಟು ವ್ಯಾಪಿಸಿರುವ ವಂತರಾ ಅಳಿವಿನಂಚಿನಲ್ಲಿರುವ ಪ್ರಾಣಿಗಳು ಹಾಗೂ ವನ್ಯಜೀವಿಯ ಅಭಯಾರಣ್ಯವಾಗಿದ್ದು, ಇಲ್ಲಿ ಪ್ರಧಾನಿ ಜಂಗಲ್ ಸಫಾರಿ ನಡೆಸಲಿದ್ದಾರೆ.

ಇನ್ನು ಅವರ ಪ್ರವಾಸದ ಮಹತ್ವದ ಅಂಶಗಳಲ್ಲಿ ಜುನಾಗಢ್ ಜಿಲ್ಲೆಯಲ್ಲಿ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸಭೆ ಅಧ್ಯಕ್ಷತೆವಹಿಸಿ. ಅಲ್ಲಿ ವಿವಿಧ ವನ್ಯಜೀವಿ–ಸಂಬಂಧಿತ ಸಮಸ್ಯೆಗಳ ಕುರಿತು ಚರ್ಚೆ ನಡೆಸಲಿದ್ದಾರೆ.

ಅಭಯಾರಣ್ಯಗಳ ರಕ್ಷಣೆ ಬಗ್ಗೆ ಮಹತ್ವದ ಸಲಹೆ ನೀಡುವಲ್ಲಿ ನಿರ್ಣಾಯಕ ಪಾತ್ರ: ಎನ್‌ಬಿಡಬ್ಲ್ಯುಎಲ್‌ನ ಪದನಿಮಿತ್ತ ಅಧ್ಯಕ್ಷರಾಗಿ ಪ್ರಧಾನಿ ಮೋದಿ ಸಭೆ ನಡೆಸಲಿದ್ದಾರೆ. ಇದರಲ್ಲಿ ಸೇನಾ ಮುಖ್ಯಸ್ಥರು, ವಿವಿಧ ರಾಜ್ಯಗಳ ಪ್ರತಿನಿಧಿಗಳು, ವನ್ಯಜೀವಿ ಎನ್‌ಜಿಒಗಳು, ಮುಖ್ಯ ವನ್ಯಜೀವಿ ವಾರ್ಡನ್‌ಗಳು ಮತ್ತು ರಾಜ್ಯ ಕಾರ್ಯದರ್ಶಿಗಳು ಸೇರಿದಂತೆ 47 ಸದಸ್ಯರಿದ್ದಾರೆ. ಈ ಮಂಡಳಿ ವನ್ಯಜೀವಿ ಸಂರಕ್ಷಣಾ ನೀತಿಗಳು ಮತ್ತು ರಾಷ್ಟ್ರೀಯ ಉದ್ಯಾನವನಗಳು ಮತ್ತು ಅಭಯಾರಣ್ಯಗಳ ರಕ್ಷಣೆಯ ಕುರಿತು ಸರ್ಕಾರಕ್ಕೆ ಸಲಹೆ ನೀಡುವಲ್ಲಿ ನಿರ್ಣಾಯಕ ಪಾತ್ರವನ್ನು ಹೊಂದಿದೆ.

ಎನ್‌ಬಿಡಬ್ಲ್ಯೂಎಲ್ ಸಭೆಯ ನಂತರ, ಪ್ರಧಾನಿ ಮೋದಿ ಅವರು ಸಸನ್‌ನಲ್ಲಿ ಮಹಿಳಾ ಅರಣ್ಯ ಸಿಬ್ಬಂದಿಗಳೊಂದಿಗೆ ಸಂವಾದ ನಡೆಸಿ, ಅವರ ಕೊಡುಗೆಗಳನ್ನು ಶ್ಲಾಘಿಸಲಿದ್ದಾರೆ.

ಇದಾದ ಬಳಿಕ ಅವರು, ಗಿರ್ ಸೋಮನಾಥ ಜಿಲ್ಲೆಯ ಐತಿಹಾಸಿಕ ಸೋಮನಾಥ ದೇವಾಲಯಕ್ಕೆ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಲಿದ್ದಾರೆ .

## ಮೆಡಿಕಲ್ ಕಾಲೇಜಿಗೆ ಪಟ್ಟು

ಕೋಟಿ ಇಡಬೇಕು ಎಅಮದು ನಿರ್ಧರಿಸಲಾಯಿತು.

ಈ ಬಾರಿ ಕೇಂದ್ರ ಸರ್ಕಾರ 52 ಲಕ್ಷ ಕೋಟಿ ಬಜೆಟ್ ಮಂಡಿಸಿದೆ. ಆದರೆ ಪರಿಶಿಷ್ಟ ವರ್ಗದ ಜನಸಂಖ್ಯೆಗೆ ಅನುಗುಣವಾಗಿ ಬಜೆಟ್ ನೀಡಿಲ್ಲ. ಕೇಂದ್ರ ಮತ್ತು ರಾಜ್ಯ ಎರಡೂ ಸರ್ಕಾರಗಳಿಂದಲೂ ವಾಲ್ಮೀಕಿ ಸಮುದಾಯಕ್ಕೆ ಅನ್ಯಾಯವಾಗುತ್ತಿದೆ. ಇದರಲ್ಲಿ ನಾನು ರಾಜಕೀಯೇತರವಾಗಿ ಸಮುದಾಯದ ಪರವಾದ ಸತ್ಯ ಹೇಳುತ್ತಿದ್ದೇನೆ ಎಂದು ಹೇಳಿದರು.

ಈ ಬಗ್ಗೆ ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಭೇಟಿ ಮಾಡಿ ಮನವಿ ಮಾಡಿದ್ದೇವೆ. ಹಿಂದೆ ಒಮ್ಮೆ ಶಾಸಕರ ಭವನದಲ್ಲೇ ಸಮುದಾತದ ಸಮಾನ ಮನಸ್ಕರು, ಬುದ್ಧಿ ಜೀವಿಗಳು, ಸಾಹಿತಿಗಳು ಸೇರಿ 6 ನಿರ್ಣಯ ತಡಗೆದುಕೊಂಡಿದ್ದೇವೆ. ಇದನ್ನು ಮುಖ್ಯಮಂತ್ರಿಯವರ ಗಮನಕ್ಕೆ ತಂದಿದ್ದೇನೆ. ಸಮುದಾಯದಲ್ಲಿ ಸುಧಾರಣೆ ತರಬೇಕಿದೆ. ವಾಲ್ಮೀಕಿ ಸಮುದಾಯ ಮೂಲತಃ ಲೇಖನಿ ಸಂಸ್ಕೃತಿಯ ಸಮುದಾಯ. ಆದರೆ ಇತ್ತೀಚಿನ ಕೆಲ ವರ್ಷಗಳಲ್ಲಿ ಕೆಲವು ಸ್ವಹಿತಾಸಕ್ತಿಗಳ ಕಯಮ್ಮಕ್ಕಿನ ಕಾರಣಕ್ಕೆ ಕೆಲವು ಕಡೆ ಹೊಡಿ ಬಡಿ ಸಂಸ್ಕೃತಿ ಬೆಳೆದಿತ್ತು. ಅದನ್ನ ತಪ್ಪಿಸಿ ಇಡೀ ಸಮುದಾಯವನ್ನು ಲೇಖನಿ ಸಂಸ್ಕೃತಿಗೆ ತರಬೇಕಿದೆ. ಆಶ್ರಮ ಶಿಕ್ಷಣ ಶುರುವಾಗಿದ್ದೇ ಲವಕುಶರಿಗೆ ವಾಲ್ಮೀಕಿ ಗುರುಕುಲದಲ್ಲಿ ಶಿಕ್ಷಣ ನೀಡಿದ್ದರ ಮೂಲಕ. ಹೀಗಾಗಿ ಮಹರ್ಷಿ ವಾಲ್ಮೀಕಿ ಜಗತ್ತಿನ ಮೊದಲ ಗುರು. ಆದ್ದರಿಂದ ಈ ಸಮುದಾಯವನ್ನು ಮುಖ್ಯವಾಹಿನಿಗೆ ತರಬೇಕು. ಅದಕ್ಕಾಗಿ ಇಂದು ನಂದಿಬೆಟ್ಟದಲ್ಲಿ ಸಭೆ ನಡೆಸಲಾಗಿದೆ. ಇದಕ್ಕೆ ಸಮಾಜದ ಎಲ್ಲ ಶಾಸಕರು, ಮಾಜಿ ಶಾಸಕರು, ಹಾಲಿ ಮಾಜಿ ಸಂಸದರು ಉದ್ಯಮಿಗಳು, ಸಾಹಿತಿಗಳು, ಸರ್ಕಾರಿ ನೌಕರರು, ನಿವೃತ್ತ ನೌಕರರು ಕೈಜೋಡಿಸಬೇಕು ಎಂದರು

**ಮೀಸಲಾತಿ ಭಿಕ್ಷೆಯಲ್ಲ:**

ಸಂಘಟಿತರಾಗುವ ಆಲೋಚನೆ. ಹಕ್ಕುಗಳನ್ನು ಪಡೆಯುವುದು ಈಗಿನ ನಮ್ಮ ಆದ್ಯ ಕರ್ತವ್ಯ. ಮೀಸಲಾತಿ ಹಾಗೂ ಅನುದಾನ ಭಿಕ್ಷೆಯಲ್ಲ. ಅದು ನಮ್ಮ ಹಕ್ಕು. ಕನಿಷ್ಠ 1000 ಕೋಟಿಯನ್ನು ನಮ್ಮ ಸಮುದಾಯದ ಶಿಕ್ಷಣಕ್ಕೆ ರಾಜ್ಯ ಸರ್ಕಾರ ಇಡಬೇಕು. ಉತ್ತರ ಪ್ರದೇಶದ ಮಾದರಿಯಲ್ಲಿ ಬುಡಕಟ್ಟು ವಾಲ್ಮೀಕಿ ಹೆಸರಿನಲ್ಲಿ ವಿಶ್ವವಿದ್ಯಾಲಯ ಕಟ್ಟಬೇಕು. ಸರ್ಕಾರ ಹಾಗೂ ಸಮುದಾಯದ ಸಹಭಾಗಿತ್ವದಲ್ಲಿ ಅದನ್ನು ನಡೆಸಲು ಸರಕಾರ ಮುಂದಾಗಬೇಕು. ಅದಕ್ಕೆ ಸಮುದಾಯದ ನಾವೆಲ್ಲರೂ ಕೈ ಜೋಡಿಸುತ್ತೇವೆ ಎಂದು ಹೇಳಿದರು.

ಈಗಾಗಲೇ ಹಿಂದಿನ ಬಜೆಟ್ ಸಮಯದಲ್ಲಿ ಕೂಡ ಮುಖ್ಯಮಂತ್ರಿಗೆ ನಾಯಕ ಸಮುದಾಯವನ್ನು ಮುಖ್ಯವಾಹಿನಿಗೆವತರುವ ಬಗ್ಗೆ ಹಾಗೂ ಸೌಲಭ್ಯಗಳ ಬಗ್ಗೆ ಒತ್ತಾಯ ಮಾಡಿದ್ವಿ. ವಾಲ್ಮೀಕಿ ಹೆಸರಿನಲ್ಲಿ ಮೆಡಿಕಲ್, ಇಂಜಿನಿಯರಿಂಗ್, ಕಾನೂನು, ನರ್ಸಿಂಗ್ ಕೋರ್ಸ್ ಗಳನ್ನು ಮಾಡಬೇಕು. ಶೇ.50 ರಷ್ಟು ಸೀಟ್ ಗಳನ್ನು ಪರಿಶಿಷ್ಟ ಪಂಗಡದ ಸಮುದಾಯಕ್ಕೆ ಉಚಿತವಾಗಿ ನೀಡಬೇಕು. ಉಳಿದ ಶೇ.50 ರಷ್ಟು ಸೀಟ್ ಗಳನ್ನು ಉಳಿದ ಎಲ್ಲ ವರ್ಗಗಳಿಗೆ ಸಿಇಟಿ ಅಥವಾ ನೀಟ್ ಮೂಲಕ ಆಯ್ಕೆ ಮಾಡಿ ಕೊಡಬೇಕುವೆಂದು ಮುಖ್ಯಮಂತ್ರಿಗೆ ಹೇಳಿದ್ದೇವೆ ಎಂದು ವಿ.ಎಸ್.ಉಗ್ರಪ್ಪ ಹೇಳಿದರು.

ವಾಲ್ಮೀಕಿ ಸಮುದಾಯದ ಅಭಿವೃದ್ಧಿಗೆ ಟಿಎಸ್‌ಪಿ ಯೋಜನೆಯಡಿ ನೀಡಿದ ಹಣವನ್ನು ಬೇರೆ ಕಡೆ ವರ್ಗಾಯಿಸಬೇಡಿ. ಅದೇ ವರ್ಷ ಅದನ್ನು ವೆಚ್ಚ ಮಾಡಬೇಕು. ಜೊತೆಗೆ ಸುಳ್ಳು ಜಾತಿ ಪ್ರಮಾಣ ಪತ್ರ ಪಡೆಯುವವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಬೇಕು ಎಂದರು.

ಮಹರ್ಷಿ ಆದಿ ಕವಿ ವಾಲ್ಮೀಕಿ ವಿಚಾರಗಳನ್ನು ತಿಳಿಸುವ ಕೆಲಸವನ್ನು ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಆಗಬೇಕು. ಅದಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒತ್ತು ನೀಡಬೇಕು. ಕಾರಣ ಎಲ್ಲದಕ್ಕೂ ಆದಿ ಮಹರ್ಷಿ ವಾಲ್ಮೀಕಿ. ರಾಮಾಯಣದ ಮೂಲಕ ಮಹಾತ್ಮಾ ಗಾಂಧಿಯವರಿಗೆ, ಬಸವಣ್ಣ, ಡಾ.ಬಿ.ಆರ್. ಅಂಬೇಡ್ಕರ್ ಅವರಿಗೆ ರಾಮ ರಾಜ್ಯದ ಅಥವಾ ಸಮ ಸಮಾಜದ ಪರಿಕಲ್ಪನೆಯನ್ನು ನೀಡಿದ್ದು ಮಹರ್ಷಿ ವಾಲ್ಮೀಕಿ. ಅದನ್ನು ಮರೆಯದೆ ಎಲ್ಲ ವರ್ಗದ ಜನರೂ ಮಹರ್ಷಿ ವಾಲ್ಮೀಕಿಯನ್ನು ನೆನೆಯಬೇಕು.

**ನಾಗೇಂದ್ರಗೆ ಸಚಿವ ಸ್ಥಾನ:**

ಮಾಧ್ಯಮಗಳು ಕೇಳಿದ ಪ್ರಶ್ನೆಗೆ ಉತ್ತರಿಸಿದ ಉಗ್ರಪ್ಪ, ಬಿ. ನಾಗೇಂದ್ರ ಅವರಿಗೆ ಸಚಿವ ಸ್ಥಾನ ನೀಡುವ ಬಗ್ಗೆ ಮಾತಾಡಿದ್ರೆ ಕಾನೂನು ಉಲ್ಲಂಘನೆಯಾಗುತ್ತೆ. ಯಾರೇ ಅಧಿಕಾರ ದುರುಪಯೋಗ ಮಾಡಿಕೊಂಡ್ರೂ ಅಪರಾಧ, ಆದರೆ ಯಾರು ತಪ್ಪಿತಸ್ತರು ಎಂಬುದನ್ನು ನ್ಯಾಯಾಲಯ ತೀರ್ಮಾನಿಸುತ್ತದೆ. ಖಅಕ ಖಖಕ ನಲ್ಲೇ ಶಿಕ್ಷೆಗೆ ಅವಕಾಶ ಇದೆ. ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು ಎಂದು ಹೇಳಿದರು.

ಗ್ಯಾರಂಟಿಗೆ ದಲಿತರ ಹಣ ಬಳಕೆ ಬೇಡ:

ಎಸ್‌ಸಿಪಿ/ಟಿಎಸ್‌ಪಿ ಬಗ್ಗೆ ನಾವೇ ಕಾನೂನು ಮಾಡಿಕೊಂಡಿದ್ದೇವೆ. ಆದರೂ ಈ ಹಣವನ್ನು ಬೇರೆ ಕೆಲಸಗಳಿಗೆ ಬಳಸಿಕೊಳ್ಳಲಾಗುತ್ತಿದೆ. ಸರ್ಕಾರ ಯಾವುದೇ ಇರಲಿ, ಎಸ್‌ಸಿಪಿ/ಟಿಎಸ್‌ಪಿ ಹಣ ದುರುಪಯೋಗವಾಗುವುದು ಬೇಡ. ಬೇರೆ ವರ್ಗಕ್ಕೂ ಇಟ್ಟ ಹಣ ತೆಗೆಯಿರಿ ನೋಡೋಣ, 1974 ರಲ್ಲಿ ಇಂದಿರಾಗಾಂಧಿ ಪ್ರಧಾನಿಯಾದಾಗ ಈ ಬಗ್ಗೆ ಪ್ರಸ್ತಾಪ ಮಾಡಿ, ಪರಿಶಿಷ್ಟರ ಹಣ ಸದ್ವಿನಿಯೋಗ ಆಗಬೇಕು ಎಂದು ಕಾಯ್ದೆ ಜಾರಿಗೆ ತರಲಾಗಿದೆ. ನಮ್ಮ ಎಸ್‌ಸಿಪಿ/ಟಿಎಸ್‌ಪಿ ಹಣ ಮಾತ್ರ ಯಾಕೆ ಕಟ್ ಮಾಡಬೇಕು? ನಾವು ಇನ್ನೂ ತೆವಳುತ್ತಿದ್ದೇವೆ. ಈ ಸರ್ಕಾರ ಸಾಮಾಜಿಕ ನ್ಯಾಯದ ಪರವಾಗಿದೆ. ದಯಮಾಡಿ ನಮ್ಮ ಹಣ ನಮಗೆ ಬಳಸಿ ಎಂದು ಉಗ್ರಪ್ಪ ಆಗ್ರಹಿಸಿದರು.

ಸುದ್ದಿ ಗೋಷ್ಠಿಯಲ್ಲಿ ಸಮಾಜದ ಹಿರಿಯರಾದ ಡಾ. ರಂಗಯ್ಯ, ಚಿಂತಕರು, ನಿವೃತ್ತ ಅಧಿಕಾರಿ ಭಕ್ತರಾಮೇಗೌಡ, ವಾಲ್ಮೀಕಿ ನಾಯಕ ಮಹಾಸಭಾ ಮಾಜಿ ಅಧ್ಯಕ್ಷರಾದ ಎಂ. ನರಸಿಂಹಯ್ಯ, ಪ್ರೊ. ಅರ್ಜುನ್ ಪಂಗಣ್ಣವರ್, ರಾಜಪ್ಪ, ರಮೇಶ್ ಹಿರೇಜಂಬೂರು, ಸಿಂಗಾಪುರ ವೆಂಕಟೇಶ್, ತುಳಸಿರಾಮ್, ಭೀಮಪುತ್ರಿ ರೇವತಿ, ಗಾಣದವಹುಣಸೆ ನಾಗರಾಜ್, ಉದ್ಯಮಿ ಸೂರನಾಯಕ್, ನಿವೃತ್ತ ಖಕಖ ಅಧಿಕಾರಿ ಶಿವ ಪ್ರಸಾದ್, ನಿರ್ದೇಶಕ ರಾಧಾಕೃಷ್ಣ ಪಲ್ಲಕ್ಕಿ ಸೇರಿದಂತೆ ವಿವಿಧ ನಿವೃತ್ತ ಕುಲಪತಿಗಳು, ನಿವೃತ್ತ ಅಧಿಕಾರಿಗಳು, ಸಾಹಿತಿಗಾಲು, ಚಿಂತಕರು ಉಪಸ್ಥಿತರಿದ್ದರು.

ಇಡೀ ದಿನ ನಂದಿ ಬೆಟ್ಟದ ಗಾಂಧೀ ಭವನದಲ್ಲಿ ವಾಲ್ಮೀಕಿ ನಾಯಕ ಸಮಾಜದ ಅಭಿವೃದ್ಧಿಯ ಬಗ್ಗೆ ಚರ್ಚೆ ನಡೆಸಲಾಯಿತು.

## ಸಭೆ ಸಂಘಟಿಸಬೇಡಿ

ಕಟ್ಟಲು ತಮ್ಮನ್ನು ಸಮರ್ಪಿಸಿಕೊಂಡ ಅಣ್ಣ ಬಸವಣ್ಣನವರ ತತ್ವ ಅನುಸರಿಸಿ, ರಾಜ್ಯದಲ್ಲಿ ಮುಖ್ಯಮಂತ್ರಿಯಾಗಿ “ಸರ್ವರಿಗೂ ಸಮಬಾಳು–ಸರ್ವರಿಗೂ ಸಮಪಾಲು” ಎಂಬ ಧ್ಯೇಯ ಪಾಲಿಸಿ ಆಡಳಿತ ನಡೆಸಿದವರು ಮಾನ್ಯ ಬಿ.ಎಸ್. ಯಡಿಯೂರಪ್ಪನವರು. ಅವರ ಆದರ್ಶಗಳನ್ನು ಅಳವಡಿಸಿಕೊಂಡು ಮುನ್ನಡೆಯುತ್ತಿರುವ ನಾನು ವೀರಶೈವ ಲಿಂಗಾಯತ ಸಮಾಜಕ್ಕೆ ಸೇರಿದವನು ಎಂಬ ಬಗ್ಗೆ ಕಾಳಜಿ ಪೂರ್ವಕ ಹೆಮ್ಮೆ ಇರಿಸಿಕೊಂಡಿದ್ದೇನೆ. ಈ ನಿಟ್ಟಿನಲ್ಲಿ ಸಮಾಜದ ಆಶಯಕ್ಕೆ ಪೂರಕವಾಗಿ ಸರ್ವ ಸಮಾಜಗಳ ಬಗ್ಗೆ ಸಮಭಾವ ಇಟ್ಟುಕೊಂಡು ಒಟ್ಟು ಸಮಾಜದ ಏಳಿಗೆ ಹಾಗೂ ಅಭಿವೃದ್ಧಿಗಾಗಿ ಚಿಂತಿಸುವವನು, ಆ ಮೂಲಕ ಸಮಗ್ರ ಕರ್ನಾಟಕದ ಶ್ರೇಯೋಭಿವೃದ್ಧಿಗಾಗಿ ಹಾಗೂ ಮಾನ್ಯ ಪ್ರಧಾನಿ ನರೇಂದ್ರ ಮೋದಿ ಅವರ ವಿಕಸಿತ ಭಾರತದ ಮಹಾ ಸಂಕಲ್ಪದ ಗುರಿ ಸಾಧಿಸಲು ಪರಿಶ್ರಮಿಸುತ್ತಿರುವ ಭಾರತೀಯ ಜನತಾ ಪಾರ್ಟಿಯ ಸಿದ್ದಾಂತ ಪ್ರತಿಪಾದಿಸುವ ಒಬ್ಬ ನಿಷ್ಠಾವಂತ ಕಾರ್ಯಕರ್ತನಾಗಿ ಹೆಜ್ಜೆ ಇಡುತ್ತಿದ್ದೇನೆ ಎಂದು ಉಲ್ಲೇಖಿಸಿದ್ದಾರೆ.

ಕೆಲವು ಹಿತೈಷಿಗಳು ಇತ್ತೀಚಿನ ರಾಜಕೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ನನ್ನ ಹಾಗೂ ಮಾನ್ಯ ಬಿ.ಎಸ್.ಯಡಿಯೂರಪ್ಪನವರ ಮೇಲಿನ ಅಭಿಮಾನದ ಕಾರಣಕ್ಕಾಗಿ ವೀರಶೈವ ಲಿಂಗಾಯತ ಸಮುದಾಯದ ಸರಣಿ ಸಭೆಗಳನ್ನು ನಡೆಸಲು ಹೊರಟಿರುವ ವಿಷಯ ನನ್ನ ಗಮನಕ್ಕೆ ಬಂದ ತಕ್ಷಣದಲ್ಲೇ ಇದನ್ನು ನಿಲ್ಲಿಸುವಂತೆ ತಿಳಿಸಿದ್ದೇನೆ. ಸಭೆಗಳನ್ನು ಮಾಡುವುದರಿಂದ ಪಕ್ಷಕ್ಕೂ ಸಹ ಮುಜುಗರದ ಸನ್ನಿವೇಶ ಸೃಷ್ಟಿ ಆಗುತ್ತದೆ. ಆದ್ದರಿಂದ ನಮ್ಮ ಹಿತೈಷಿಗಳು ಹಾಗೂ ಅಭಿಮಾನಿಗಳು ತಮ್ಮ ಗಮನವನ್ನು ಪಕ್ಷ ಸಂಘಟನೆಯತ್ತ ಕೇಂದ್ರೀಕರಿಸಬೇಕೆ ಹೊರತು, ಸಮಾಜದ ಹೆಸರಿನಲ್ಲಿ ಸಭೆಗಳನ್ನು ಸಂಘಟಿಸುವ ಪ್ರಯತ್ನಗಳನ್ನು ಈ ಕೂಡಲೇ ನಿಲ್ಲಿಸುವಂತೆ ಈ ಮೂಲಕ ವಿನಂತಿಸುವೆ ಎಂದು ವಿಜಯೇಂದ್ರ ಮನವಿ ಮಾಡಿದ್ದಾರೆ.

## ಡಿಕೆಶಿ ವಿರುದ್ಧ ರಾಜಣ್ಣ ಕಿಡಿ

ಅವರು ಗೊತ್ತೇ ಇಲ್ಲ ಎಂದು ಸದ್ಗುರು ಹೇಳಿದ್ದರು. ಅಂತವರ ಜೊತೆ ವೇದಿಕೆ ಕಾರ್ಯಕ್ರಮ ಹಂಚಿಕೊಳ್ತಾರೆ ಅಂದ್ರೆ ಇದರ ಬಗ್ಗೆ ಡಿ.ಕೆ.ಶಿವಕುಮಾರ್ ಅವರೇ ಉತ್ತರ ಕೊಡಬೇಕು ಎಂದು ಅಸಮಾಧಾನ ವ್ಯಕ್ತಪಡಿಸಿದರು.

# ಚಿಕ್ಕಬಳ್ಳಾಪುರಲ್ಲಿ ಪತ್ತೆಯಾದ ಹಕ್ಕಿ ಜ್ವರ

ಚಿಕ್ಕಬಳ್ಳಾಪುರ: ಆಂಧ್ರ ಹಾಗೂ ತೆಲಂಗಾಣದಲ್ಲಿ ಕೋಟ್ಯಾಂತರ ಪ್ರಾಣಿ ಪಕ್ಷಿಗಳನ್ನ ಬಲಿ ಪಡೆದಿರುವ ಡೆಡ್ಲಿ ಎಚ್5ಎನ್1 ವೈರಸ್ ಜಿಲ್ಲೆಗೂ ಕಾಲಿಟ್ಟಿದೆ. ಚಿಕ್ಕಬಳ್ಳಾಪುರ ತಾಲ್ಲೂಕಿನ ವರದಹಳ್ಳಿ ಗ್ರಾಮದಲ್ಲಿ ಸಾಕಿದ್ದ ನಾಟಿ ಕೋಳಿಗಳಲ್ಲಿ ಹಕ್ಕಿ ಜ್ವರ ಪತ್ತೆಯಾಗಿದೆ ಎಂದು ಉನ್ನತ ಶಿಕ್ಷಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್ ತಿಳಿಸಿದ್ದಾರೆ.


ವರದಹಳ್ಳಿ ಗ್ರಾಮದಲ್ಲಿ ಗ್ರಾಮಸ್ಥರೊಬ್ಬರು ಸಾಕಿದ್ದ ಎರಡು ನಾಟಿ ಕೋಳಿಗಳು ಅಸ್ವಸ್ಥಗೊಂಡು ಹಠಾತ್ತನೆ ಸಾವನ್ನಪ್ಪಿದ್ದವು. ಪಶು ಸಂಗೋಪನಾ ಮತ್ತು ಪಶುವೈದ್ಯ ಇಲಾಖೆಯು ಈ ಸತ್ತ ಕೋಳಿಗಳ ಮಾದರಿಗಳನ್ನು ಪರೀಕ್ಷೆಗಾಗಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. ಆ ಮಾದರಿಗಳಲ್ಲಿ ಹಕ್ಕಿ ಜ್ವರದ ವೈರಾಣು ಪತ್ತೆಯಾಗಿದೆ ಎಂದು ಮೌಖಿಕ ವರದಿ ಬಂದಿದ್ದು, ಇನ್ನಷ್ಟೇ ಲಿಖಿತ ವರದಿಬರಬೇಕಿದೆ. ಜಿಲ್ಲೆಯಲ್ಲಿ ಹಕ್ಕಿ ಜ್ವರ ಪತ್ತೆಯಾಗಿದ್ದು. ಜಿಲ್ಲಾಡಳಿತ ಹೈ ಅಲರ್ಟ್ ಘೋಷಣೆ ಮಾಡಿದೆ. ಪಶು ಸಂಗೋಪನಾ ಮತ್ತು ಪಶುವೈದ್ಯ ಇಲಾಖೆ ಸೇರಿ ಆರೋಗ್ಯ ಇಲಾಖೆ ಅಧಿಕಾರಿಗಳು ಗ್ರಾಮದಲ್ಲೇ ಬೀಡು ಬಿಟ್ಟಿದ್ದು, ಮಾರಕ ಹಕ್ಕಿ ಜ್ವರ ಕಡಿವಾಣಕ್ಕೆ ಮುಂಜಾಗ್ರತಾ ಕ್ರಮಗಳನ್ನ ಕೈಗೊಳ್ಳಲಾಗುತ್ತಿದೆ ಎಂದರು.

ಕೋಳಿ ಸೇರಿದಂತೆ ಪಕ್ಷಿಗಳ ಜೀವಕ್ಕೆ ಡೆಡ್ಲಿಯಾಗಿರುವ ಎಚ್5ಎನ್1 ವೈರಸ್ ಜಿಲ್ಲೆಗೂ ಕಾಲಿಟ್ಟಿದೆ. ಚಿಕ್ಕಬಳ್ಳಾಪುರ ತಾಲೂಕಿನ ವರದಹಳ್ಳಿ ಗ್ರಾಮದಲ್ಲಿ ಮಾರಕ ಹಕ್ಕಿ ಜ್ವರ ಕಾಣಿಸಿಕೊಂಡಿದೆ. ಗ್ರಾಮದ ದ್ಯಾವಪ್ಪ ಎಂಬುವವರಿಗೆ ಸೇರಿದ 28 ಕೋಳಿಗಳು ಹಾಗೂ ರತ್ನಮ್ಮ ಎಂಬುವವರಿಗೆ ಸೇರಿದ 5 ಕೋಳಿಗಳು ಸೇರಿದಂತೆ ಗ್ರಾಮದಲ್ಲಿ ಕಳೆದ ಎರಡು ಮೂರು ದಿನಗಳಿಂದ ದಿಢೀರ್ ಅಂತ ಸಾವನ್ನಪ್ಪಿವೆ. ಬಾಯಲ್ಲಿ ನೊರೆ ತೂಕಡಿಕೆ ಖಾಯಿಲೆ ಸೇರಿದಂತೆ ರಕ್ತ ಭೇದಿ ಮಾಡಿ ಕೋಳಿಗಳು ದಿಢೀರ್ ಅಂತ ಪ್ರಾಣಬಿಟ್ಟಿವೆ. ಇನ್ನೂ ದ್ಯಾವಪ್ಪ ತಮಗೆ ಆಗದವರು ಯಾರೋ ಕೋಳಿಗಳಿಗೆ ವಿಷವಿಕ್ಕಿದ್ದಾರೆ ಅಂತ ಅನುಮಾನಗೊಂಡಿದ್ದರು.ಆದರೆ ಸ್ಥಳೀಯ ಪಶು ವೈದ್ಯಾಧಿಕಾರಿ ಸತ್ತ ಕೋಳಿಗಳ ಮಾದರಿಯನ್ನ ಬೆಂಗಳೂರಿನ ಪಶುಪಾಲನ ಹಾಗೂ ಜೈವಿಕ ವಿಜ್ಞಾನ ವಿಭಾಗದ ಪ್ರಯೋಗಲಾಯಕ್ಕೆ ಕಳುಹಿಸಿದ್ದರು.

ಪ್ರಯೋಗಾಲಯದಲ್ಲಿ ಹಕ್ಕಿ ಜ್ವರದ ಎಚ್5 ಎನ್1 ವೈರಸ್ ಪತ್ತೆ ಹಿನ್ನಲೆಯಲ್ಲಿ ತದನಂತರ ಅದೇ ಮಾದರಿಗಳನ್ನ ಭೂಪಾಲ್ ನಲ್ಲಿರುವ ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. ಈಗ ಅಲ್ಲೂ ಸಹ ಎಚ್ 5 ಎನ್ 1 ವೈರಸ್ ಇರೋದು ಧೃಡವಾಗಿದೆ. ಹಾಗಾಗಿ ಮೌಖಿಕವಾಗಿ ಚಿಕಬಳ್ಳಾಪುರ ಜಿಲ್ಲಾಡಳಿತಕ್ಕೆ ಹಕ್ಕಿ ಜ್ವರದ ಬಗ್ಗೆ ಮಾಹಿತಿ ನೀಡಲಾಗಿದ್ದು ಜಿಲ್ಲಾಡಳಿತ ಹೈಅಲರ್ಟ್ ಆಗಿದೆ. ಹಕ್ಕಿ ಜ್ವರದ ವರದಿಯಾಗುತ್ತಿದ್ದಂತೆ ಜಿಲ್ಲಾಡಳಿತ ಭವನದಲ್ಲಿ ಅಧಿಕಾರಿಗಳ ತುರ್ತು ಸಭೆ ನಡೆಸಿದ್ದೇನೆ. ಇನ್ನೂ ಅಧಿಕೃತವಾಗಿ ಸರ್ಕಾರದ ಆದೇಶ ಬಂದ ಕೂಡಲೇ 2 ಕಿಲೋಮೀಟರ್ ವ್ಯಾಪ್ತಿಯಲ್ಲಿನ ಪಕ್ಷಿಗಳ ಮಾರಣ ಹೋಮಕ್ಕೆ ಬೇಕಾಗುವ ಮುಂಜಾಗ್ರತಾ ಕ್ರಮಗಳ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ ತಿಳಿಸಿದರು.

ವರದಹಳ್ಳಿ ಗ್ರಾಮಕ್ಕೆ ಪಶುಪಾಲನಾ ಇಲಾಖೆ ಆಧಿಕಾರಿಗಳ ತಂಡ ಹಾಗೂ ಆರೋಗ್ಯ ಇಲಾಖೆಯ ಅಧಿಕಾರಿಗಳ ತಂಡ ಸೇರಿದಂತೆ ಪಂಚಾಯತಿ ಅಧಿಕಾರಿಗಳ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿದದೆ. ಪಿಪಿಐ ಕಿಟ್ ಧರಿಸಿರುವ ಗ್ರಾಮ ಪಂಚಾಯತಿ ಸಿಬ್ಬಂದಿಗಳು ಗ್ರಾಮದಲ್ಲಿ ಈಗಾಗಲೇ ಸೋಂಕು ವೈರಸ್ ನಿವಾರಕ ಸೋಡಿಯಂ ಹೈಡ್ರೋಕ್ಲೋರೈಡ್ ದ್ರಾವಣವನ್ನ ಸಿಂಪಡಣೆ ಮಾಡುತ್ತಿದ್ದಾರೆ. ಮತ್ತೊಂದು ಕಡೆ ಆರೋಗ್ಯ ಇಲಾಖೆಯಡಿ ಆಶಾ ಕಾರ್ಯಕರ್ತೆಯರು ಸಹ ಮನೆ ಮನೆಗೂ ತೆರಳಿ ಜನರಿಗೆ ಸೋಂಕು ತಗುಲಿದೆಯಾ, ಯಾರಿಗಾದರೂ ಕೆಮ್ಮು ನೆಗಡಿ ಜ್ವರ ಗಂಟಲು ನೋವು ಇದೆಯಾ ಅಂತ ವಿಚಾರಣೆ ನಡೆಸುತ್ತಿದ್ದಾರೆ ಎಂದು ಆರೋಗ್ಯ ಮತ್ತು ಕುಟುಂಭ ಕಲ್ಯಾಣಾಧಿಕಾರಿ ಡಾ.ಎಸ್.ಎಸ್. ಮಹೇಶ್ ಕುಮಾರ್ ತಿಳಿಸಿದರು.





ಬಾಕ್ಸ್

ಚಿಕ್ಕಬಳ್ಳಾಪುರ ಜಿಲ್ಲಾ ಕೇಂದ್ರಕ್ಕೆ ಕೇವಲ ನಾಲ್ಕು ಕಿಲೋಮೀಟರ್ ಸಮೀಪ ಇರುವ ವರದಹಳ್ಳಿಯಲ್ಲಿ ಇತ್ತೀಚಿಗೆ 35 ಕೋಳಿಗಳು ಏಕಕಾಲದಲ್ಲಿ ಮೃತಪಟ್ಟಿದ್ದು ಬೆಳಕಿಗೆ ಬಂದಿದ್ದು ಕೂಡಲೇ ಕಾರ್ಯಪ್ರವೃತ್ತರಾಗಿ ಮೃತ ಕೋಳಿಗಳನ್ನು ಪರಿಶೋಧನೆಗೆ ಕಳುಹಿಸಿದ್ದು ಭೂಪಾಲ್‌ನಿಂದ ಪರಿಶೋಧನೆ ವರದಿ ಬಂದಿದ್ದು ಹಕ್ಕಿ ಜ್ವರ ಇರುವುದು ದೃಢಪಟ್ಟಿದೆ

– ಜಿಲ್ಲಾ ಆರೋಗ್ಯ ಅಧಿಕಾರಿ ಡಾಕ್ಟರ್ ಮಹೇಶ್ ತಿಳಿಸಿದರು.

# ಕೂಗೂರು ಬಸವರಾಜುಗೆ ಗೌರವ ಡಾಕ್ಟರೇಟ್



**ಆನೇಕಲ್:** ಏಷ್ಯಾ ಇಂಟರ್ನಾಷನಲ್ ಕಲ್ಚರಲ್ ರಿಸರ್ಚ್ ವಿಶ್ವವಿದ್ಯಾಲಯ ವತಿಯಿಂದ ಹೊಸೂರಿನಲ್ಲಿ ನಡೆದ ವಿವಿಧ ವಿಭಾಗಗಳಲ್ಲಿ ಸೇವೆ ಸಲ್ಲಿಸಿದ ಗಣ್ಯರಿಗೆ ಗೌರವ ಡಾಕ್ಟರೇಟ್ ಪದವಿ ಸಮಾರಂಭದಲ್ಲಿ ಸಾಮಾಜಿಕ ಸೇವೆ ವಿಭಾಗದಲ್ಲಿ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ ವಿ.ಕೂಗೂರು ಬಸವರಾಜು ಅವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಲಾಯಿತು.

ಗೌರವ ಡಾಕ್ಟರೇಟ್ ಸ್ವೀಕರಿಸಿ ಮಾತನಾಡಿದ ವಿ.ಕೂಗೂರು ಬಸವರಾಜು ರವರು, ಈ ಗೌರವ ಡಾಕ್ಟರೇಟ್ ಪ್ರಧಾನವು ಸಾಮಾಜಿಕ ಕ್ಷೇತ್ರದಲ್ಲಿ ಮತ್ತಷ್ಟು ಜವಾಬ್ದಾರಿಯನ್ನು ಹೆಚ್ಚಿಸಿದೆ. ಸಮಾಜವು ನಮಗೆ ಉಸಿರು, ಹೆಸರನ್ನು ಕೊಟ್ಟಿದೆ. ನಾವು ಏನನ್ನಾದರೂ ಸಾಧಿಸಿ ಸಮಾಜಕ್ಕೆ ಏನಾದರೂ ಕೊಡುಗೆಯನ್ನು ಕೊಡಬೇಕು ಎಂಬ ಉದ್ದೇಶವೇ ನನ್ನ ಈ ಸಾಧನೆಗೆ ಕಾರಣ. ನನಗೆ ಗೌರವ ಡಾಕ್ಟರೇಟ್ ಸಿಕ್ಕಿರುವುದು ನಿಜವಾಗಿಯೂ ನನ್ನ ಸೇವೆಗೆ ಸಿಕ್ಕಿರುವ ಫಲವಾಗಿದೆ ಎಂದು ತಿಳಿಸಿದರು.

ಇನ್ನು ಕೂಗುರು ವಿ ಬಸವರಾಜುರವರಿಗೆ ಗೌರವ ಡಾಕ್ಟರೇಟ್ ಪದವಿ ಲಭಿಸಿದ ಹಿನ್ನೆಲೆ ಸ್ವಗ್ರಾಮವಾದ ಆನೇಕಲ್ ತಾಲೂಕಿನ ಕೂಗುರು ಗ್ರಾಮದ ಹಿರಿಯ ಮುಖಂಡರಾದ ಬಿಎಂ ರಾಜೇಂದ್ರ ಮತ್ತು ಗ್ರಾಮಸ್ಥರು ಸಿಹಿ ಹಂಚಿ ಬೃಹತ್ ಗಾತ್ರದ ಹೂವಿನ ಹಾರವನ್ನು ಹಾಕಿ ಕೂಗುರು ಬಸಣ್ಣರವರಿಗೆ ಶುಭ ಕೋರಿದರು.

ಈ ಸಂದರ್ಭದಲ್ಲಿ ಏಷ್ಯಾ ಇಂಟರ್ನಾಷನಲ್ ಕಲ್ಚರಲ್ ರಿಸರ್ಚ್ ಯೂನಿವರ್ಸಿಟಿ ಸಂಸ್ಥಾಪಕರಾದ ಬಾಬು ವಿಜಯನ್, ಆಂಧ್ರಪ್ರದೇಶದ ನಿವೃತ್ತ ನ್ಯಾಯಾಧೀಶರಾದ ಡಾ.ಜೆ ಹರಿಡೆಣಟಿಜಜಜಿಟಿಜಜೀಸ್, ಕರಾಟೆಯ ಗಿನಿಸ್ ದಾಖಲೆ ವಿಜೇತರಾದ ಡಾ.ಕರಾಟೆ ಎಪಿ ಶ್ರೀನಾಥ್, ತಮಿಳುನಾಡು ಮಾಜಿ ಶಾಸಕ ಡಾ.ಮನೋಕರನ್, ಅನಂತಪುರ ಜಿಲ್ಲೆಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಡಾ. ಸಾಮ್ರಾಟ್ ಕೆ ಮಧು ಹಾಗೂ ಮತ್ತಿತರರು ಹಾಜರಿದ್ದರು.

# ವಿಜೃಂಭಣೆಯ ಶ್ರೀರಾಮಲಿಂಗೇಶ್ವರ ಸ್ವಾಮಿ ಬ್ರಹ್ಮರಥೋತ್ಸವ

**ಮುಳಬಾಗಿಲು:** ತಾಲ್ಲೂಕಿನ ಆವಣಿ ಗ್ರಾಮದಲ್ಲಿ ನೆಲೆಸಿರುವ ಇತಿಹಾಸ ಪ್ರಸಿದ್ಧ ಶ್ರೀ ಕಾಮಾಕ್ಷಿ ದೇವಿ ಸಮೇತ ಪ್ರಸನ್ನ ಶ್ರೀ ರಾಮಲಿಂಗೇಶ್ವರ ಸ್ವಾಮಿ ದೇವಾಲಯದ ಬ್ರಹ್ಮ ರಥೋತ್ಸವವು ಶುಕ್ರವಾರ ವಿಜೃಂಭಣೆಯಿಂದ ಲಕ್ಷಾಂತರ ಭಕ್ತಾದಿಗಳ ಸಮ್ಮುಖದಲ್ಲಿ ನಡೆಯಿತು.

ಶತಮಾನಗಳ ಇತಿಹಾಸ ಹೊಂದಿರುವ ಶ್ರೀ ಕಾಮಾಕ್ಷಿ ದೇವಿ ಸಮೇತ ಪ್ರಸನ್ನ ಶ್ರೀ ರಾಮಲಿಂಗೇಶ್ವರ ಸ್ವಾಮಿ ರಥೋತ್ಸವ ಸಲುವಾಗಿ ದೇವಸ್ಥಾನದಲ್ಲಿ ವಿವಿಧ ಪೂಜಾ ಕಾರ್ಯಗಳನ್ನು ಏರ್ಪಡಿಸಲಾಗಿತ್ತು. ಮೂಲ ದೇವರಿಗೆ ಪಂಚಾಮೃತ ಅಭಿಷೇಕ ಹೋಮ, ಹವನ ವೇದ, ಉಪ ನಿಷತ್ತುಗಳ ಮಂತ್ರಗಳ ಘೋಷಣೆ ಮೊಳಗಿದವು.

ಪ್ರತಿ ವರ್ಷದಂತೆ ಈ ಬಾರಿಯೂ ಇಂದು ನಡೆದ ರಥೋತ್ಸವಕ್ಕೆ ಹೂವುಗಳಿಂದ ಅಲಂಕಾರಗೊಳಿಸಿದ್ದ . ಬೃಹತ್ತಾದ 78 ಅಡಿಗಳ ಎತ್ತರದ ರಥದಲ್ಲಿ ಶ್ರೀ ಕಾಮಾಕ್ಷಿ ದೇವಿ ಸಮೇತ ಪ್ರಸನ್ನ ಶ್ರೀ ರಾಮಲಿಂಗೇಶ್ವರ ಸ್ವಾಮಿ, ಉತ್ಸವ ಮೂರ್ತಿಗಳು ಇಟ್ಟಿದ್ದರು.

ಶ್ರೀ ಆವಣಿ ಶೃಂಗೇರಿ ಮಠದ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನದ ಪೀಠಾಧಿಪತಿಗಳಾದ ಶ್ರೀ ಶ್ರೀ ಅದ್ವೈತ ನಂದ ಭಾರತಿ ಸ್ವಾಮಿಗಳ ಆಶೀರ್ವಾದಗಳೊಂದಿಗೆ ಶಾಸಕ ಸಮೃದ್ಧಿ ವಿ. ಮಂಜುನಾಥ್ .ಹಾಗೂ ಸಂಸದ ಮಲ್ಲೇಶ್ ಬಾಬು ವಿಶೇಷ ಪೂಜೆ ಸಲ್ಲಿಸಿದ ನಂತರ. ತಾಸಿಲ್ದಾರ್ ವಿ ಗೀತಾ. ಓಂ ನಮಃ ಶಿವಾಯ ನಾಮ ಸ್ಮರಣೆದೊಂದಿಗೆ ರಥವನ್ನು ಎಳೆಯುವ ಮೂಲಕ ಚಾಲನೆ ನೀಡಿದರು.



ರಥಕ್ಕೆ ದವನ, ಉಪ್ಪು ಹೂವು ಬಾಳೆಹಣ್ಣು . ಮೆಣಸು. ಉಪ್ಪು.ಎಸೆದು ಭಕ್ತಾದಿಗಳು ಹರಕೆ ತೀರಿಸಿಕೊಂಡರು. ತಮಟೆ. ಮಂಗಳ ವಾದ್ಯಗಳೊಂದಿಗೆ ಡೋಳ್ಳು ಕುಣಿತ ಜಾನ ಪದ ಕಲಾ ತಂಡಗಳು ಗ್ರಾಮದಲ್ಲಿ ಕಲಾವಿದರ ಮಂಡಳಿಯಿಂದ ಭಜನೆ ಮತ್ತು ಅನ್ನಸಂತರ್ಪಣೆ ವಿಶೇಷವಾಗಿತ್ತು.

ಗ್ರಾಮದ ಭಕ್ತಾದಿಗಳಿಂದ ಹೆಸರುಬೇಳೆ, ಪಾನಕ, ಮಜ್ಜಿಗೆ, ಲಡ್ಡುಗಳು, ಕುಡಿಯುವ ನೀರಿನ ಪಾಕೆಟ್, ಚಿತ್ರಾನ್ನ, ಮೊಸರನ್ನ ಪ್ರಸಾದ ವಿನಿಯೋಗ ರಥೋತ್ಸವಕ್ಕೆ ಮೆರಗು ನೀಡಿದವು.

ದೇವಾಲಯದ ಮಂಭಾಗದಿಂದ ಹೊರಟ ರಥೋತ್ಸವ ಗ್ರಾಮದ ಪ್ರಮುಖ ರಥ ಬೀದಿಗಳಲ್ಲಿ ಸಂಚರಿಸಿತು.

ಜಾತ್ರೆಯ ಪ್ರಯುಕ್ತ 700 ಕ್ಕೂ ಹೆಚ್ಚು ಪೊಲೀಸ್ ಬಂದೋಬಸ್ತ್ ಕೋಲಾರ ಜಿಲ್ಲಾ ಪೊಲೀಸ್ ರಕ್ಷಣಾಧಿಕಾರಿ ನಿಖಿಲ್.ಬಿ ನೇತೃತ್ವದಲ್ಲಿ ಪೋಲಿಸರು ಮುಂಜಾಗ್ರತೆಯಿಂದ ಯಾವುದೇ ಸಮಸ್ಯೆ ಎದುರಾಗದಂತೆ ಬಾರೀ ಬಂದೋಬಸ್ತು ಮಾಡಿದನ್ನು ಜನರಿಂದ ಮೆಚ್ಚುಗೆ ವ್ಯಕ್ತವಾಯಿತು.

ಕೋಲಾರ ಶಾಸಕ ಕೊತ್ತೂರು ಜಿ ಮಂಜುನಾಥ್. ವಿಧಾನ ಪರಿಷತ್ ಸದಸ್ಯ ಅನಿಲ್ ಕುಮಾರ್ ಅನಿಲ್ ಕುಮಾರ. ಜೆಡಿಎಸ್ ನ ಜೆಡಿಎಸ್ ನ ಕಾರ್ಯದರ್ಶಿ ರಘುಪತಿ ರೆಡ್ಡಿ.ಆವಣಿ ಬಾಬು, ನೀಲಕಂಠೇಗೌಡ, ಉದ್ಯಮಿ ಸುಹಾಸ್ ಶೆಟ್ಟಿ, ದರ್ಕಾಸ್ತು ಸಮಿತಿ ಸದಸ್ಯರಾದ ಜಮ್ಮನಹಳ್ಳಿ ಕೃಷ್ಣ, ಗ್ರಾಪಂ ಅಧ್ಯಕ್ಷೆ ಲಕ್ಷ್ಮಿಪ್ರಿಯ, ಧಾರ್ಮಿಕ ದತ್ತಿ ತಹಸೀಲ್ದಾರ್ ಎಸ್ ಶ್ರೀನಿವಾಸ್ ರೆಡ್ಡಿ, ತಾಪಂ ಇ ಓ ಡಾ.ಸರ್ವೇಶ್, ಉಪ ತಹಶೀಸಿಲ್ದಾರ್ ಎಂ ಹೆಚ್ ನಾರಾಯಣಸ್ವಾಮಿ ಡಿವೈಎಸ್ಪಿ, ಡಿಸಿ ನಂದಕುಮಾರ್, ಆರ್ ಐ ಸುಬ್ರಹ್ಮಣ್ಯಂ, ಗ್ರಾಮ ಲೆಕ್ಕಿಗ ಸಿಎಂ ವೀರೇಶ್, ದೇವಾಲಯದ ಅರ್ಚಕರಾದ ಕೆಎಂ ರಮಣಮೂರ್ತಿ ದೀಕ್ಷಿತ್ ಎಸ್ ಅನಿಲ್ ಕುಮಾರ್ ಭಾಗಿಯಾಗಿದ್ದರು.

# ಶಿವರಾತ್ರಿ ಅಂಗವಾಗಿ ಸಾಂಸ್ಕೃತಿಕ ಕಾರ್ಯಕ್ರಮ





**ಚಿಕ್ಕಬಳ್ಳಾಪುರ:** ಜೈ ಫೌಂಡೇಶನ್ ವತಿಯಿಂದ ಶಿವರಾತ್ರಿ ಹಬ್ಬದ ಅಂಗವಾಗಿ ಎರಡನೇ ವರ್ಷದ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ನಗರದ ಸುಬ್ಬರಾಯನಪೇಟೆ ಹಳೆ ಗಣೇಶ ದೇವಾಲಯ ರಸ್ತೆಯ ಸ್ಥಾನಕ ನಂದೀಶ್ವರಸ್ವಾಮಿ ದೇವಾಲಯದಲ್ಲಿ ನಡೆಯಿತು.

ಸಾಮಾಜಿಕ ಸೇವೆ ಅಷ್ಟೇ ಅಲ್ಲ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ನಡೆಸುವ ಮೂಲಕ ಯುವಕರಲ್ಲಿ ದೈವ ಭಕ್ತಿ ಹೆಚ್ಚಿಸಲು ಹಾಗೂ ಸಾಂಸ್ಕೃತಿಕವಾಗಿ ಬೆಳೆಸಲು ಇಂತಹ ಹಲವಾರು ಕಾರ್ಯಕ್ರಮಗಳನ್ನು ಏರಪಡಿಸಲಾಗುತ್ತಿದೆ. ಸ್ಥಳೀಯ ಪ್ರತಿಭೆಗಳನ್ನು ಗುರುತಿಸಿ ಅವರಿಗೆ ಸೊಕ್ತ ರೀತಿಯ ಸಹಕಾರ ನೀಡಿ ಅವರಲ್ಲಿರುವ ಪ್ರತಿಭೆಯನ್ನು ಪ್ರದರ್ಶಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಜೈ ಫೌಂಡೇಶನ್ ಅಧ್ಯಕ್ಷರಾದ ಜಯಕುಮಾರ್ ತಿಳಿಸಿದರು.

ಸ್ಥಾನಕ ನಂದೀಶ್ವರಸ್ವಾಮಿ ದೇವಾಲಯದಲ್ಲಿ ಶಿವರಾತ್ರಿ ಅಂಗವಾಗಿ ನಡೆದ ಧಾರ್ಮಿಕ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜೈ ಫೌಂಡೇಶನ್ ವತಿಯಿಂದ ಈ ದೇವಾಲಯದಲ್ಲಿ ಧಾರ್ಮಿಕ ಕಾರ್ಯಕ್ರಮಗಳು ಕಾರ್ತಿಕ ಸೋಮವಾರದಂದು ನಡೆಸಲಾಗುತ್ತಿದೆ ಇನ್ನು ಕಳೆದ ವರ್ಷ ಶಿವರಾತ್ರಿದಂದು ಸ್ಥಾನಕ ನಂದೀಶ್ವರಸ್ವಾಮಿ ದೇವಾಲಯದಲ್ಲಿ ಧಾರ್ಮಿಕ ಸಾಂಸ್ಕೃತಿಕ ಕಾರ್ಯಕ್ರಮಗಳು ಶುರುಮಾಡಿದ್ದು, ಎರಡನೇ ವರ್ಷದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಪಾಲ್ಗೊಳ್ಳುವ ಮೂಲಕ ದೈವ ಭಕ್ತಿಯನ್ನು ಮೆರೆದು ದೇವರ ಕೃಪೆಗೆ ಪಾತ್ರರಾಗಿದ್ದಾರೆ.

ಇನ್ನು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಯುವಕರು ಭಕ್ತಿ ಗಾಯನ, ಸಾಂಸ್ಕೃತಿಕ,ನೃತ್ಯ ಮತ್ತು ಹಲವಾರು ಕಾರ್ಯಕ್ರಮಗಳನ್ನು ಪ್ರದರ್ಶಿಸಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿ ಜನರ ಮನ ಗೆದ್ದಿದ್ದು, ನಂದೀಶ್ವರಸ್ವಾಮಿ ಆಶೀರ್ವಾದ ಸದಾ ಎಲ್ಲರ ಮೇಲಿರಲಿ ಎಂದು ಪ್ರಾರ್ಥಿಸಿದರು.ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದವರನ್ನು ಜಯಕುಮಾರ್ ರವರು ಪ್ರೋತ್ಸಾಹಿಸಿ ಸನ್ಮಾನಿಸಿದರು.

ಇದೇ ವೇಳೆ ಮಂಚೇನಹಳ್ಳಿ ಪೊಲೀಸ್ ಠಾಣೆಯ ಕಾನ್ಸೇಬಲ್ ಪ್ರಮೋದ್ ರೆಡ್ಡಿ ರವರ ಸಮಾಜಮುಖಿ ಕಾರ್ಯಗಳನ್ನು ಮೆಚ್ಚಿ ಜೈ ಫೌಂಡೇಶನ್ ವತಿಯಿಂದ ಸನ್ಮಾನಿಸಲಾಯಿತು.

ಶಿವರಾತ್ರಿ ಪ್ರಯುಕ್ತ ದೇವಾಲಯಕ್ಕೆ ವಿಶೇಷ ಅಲಂಕಾರ,ಪೂಜಾ ಕೈಂಕರ್ಯಗಳು ನಡೆಯಿತು.

ಭಕ್ತರಿಗೆ ಪ್ರಸಾದ ವಿನಿಯೋಗ ನಡೆಯಿತು, ಜೈ ಡೇಶನ್ ಕಾರ್ಯದರ್ಶಿ ಮುಬಾರಕ್, ಟ್ರಸ್ಟಿ ಸುಬ್ರಮಣಿ, ಕೆ.ಆರ್.ಗೋಪಾಲ್,ಸುಧೀರ್, ಪ್ರಕಾಶ್, ಚೇತನ್,ಮನೋಹರ್, ಸುಬ್ಬು, ಗೋವಿಂದರಾಜು ಮತ್ತು ಇತರರು ಉಪಸ್ಥಿತರಿದ್ದರು.

# ಮ.ಬೆಟ್ಟದಲ್ಲಿ ಅನಧಿಕೃತ ನಿರ್ಮಾಣದ ಮನೆಗಳಿಗೆ ಕಡಿವಾಣಕ್ಕೆ ಸೂಚನೆ

**ಹನೂರು:** ಮಲೆ ಮಹದೇಶ್ವರ ಬೆಟ್ಟದಲ್ಲಿ ಅನಧಿಕೃತವಾಗಿ ನಿರ್ಮಾಣಗೊಳ್ಳುತ್ತಿರುವ ಮನೆಗಳಿಗೆ ಕಡಿವಾಣ ಹಾಕಲು ಅಧಿಕಾರಿಯ ಸಿಬ್ಬಂದಿ ವರ್ಗದವರು ಕಾರ್ಯ ಪ್ರವೃತ್ತರಾಗಬೇಕು. ಭೂಮಾಪನ ಸರ್ವೆ ಇಲಾಖೆಯ ಅಧಿಕಾರಿಗಳು ತುರ್ತಾಗಿ ಮಲೆ ಮಾದೇಶ್ವರ ಬೆಟ್ಟದ ಮಾಸ್ಟರ್ ಪ್ಲಾನ್ ಆವರಣದ ಅರಣ್ಯದಂಚಿನಲ್ಲಿ ಬರುವ ವಿವಿಧ ಭಾಗಗಳಲ್ಲಿ ಇರುವ ಜಮೀನನ್ನು ತುರ್ತಾಗಿ ಸರ್ವೆ ನಡೆಸಬೇಕು ಎಂದು ಶಾಸಕ ಮಂಜುನಾಥ್ ತಿಳಿಸಿದರು.

ತಾಲೂಕಿನ ಮಲೆ ಮಾದೇಶ್ವರ ಬೆಟ್ಟದಲ್ಲಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಮಾಸ್ಟರ್ ಪ್ಲಾನ್ ಸಿದ್ಧಪಡಿಸುವ ಕುರಿತು ಶಾಸಕ ಮಂಜುನಾಥ್, ಜಿಲ್ಲಾಧಿಕಾರಿ ಶಿಲ್ಪನಾಗ್ ಅವರ ಅಧ್ಯಕ್ಷತೆಯಲ್ಲಿ ಮಲೆ ಮಹದೇಶ್ವರ ನಾಗಮಲೆ ಭವನದಲ್ಲಿ ಸಭೆ ನಡೆಯಿತು.

ಮಹದೇಶ್ವರ ಬೆಟ್ಟ ಅಭಿವೃದ್ಧಿ ಪ್ರಾಧಿಕಾರದ ಮಾಸ್ಟರ್ ಪ್ಲಾನ್ ಆವರಣದಲ್ಲಿ ಒತ್ತುವರಿ ಕುರಿತು ಚರ್ಚೆ ನಡೆಸಿದರು. ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಮಾಸ್ಟರ್ ಪ್ಲಾನ್ ಆವರಣದ 7.18 ಎಕರೆ ಜಮೀನುಗಳಲ್ಲಿ ಒತ್ತುವರಿಯಾಗಿರುವ ಅನಧಿಕೃತವಾಗಿ ನಿರ್ಮಾಣವಾಗಿರುವ ಬಗ್ಗೆ ಚರ್ಚಿಸಿದರು. ಮಹದೇಶ್ವರ ಬೆಟ್ಟ ಮಾಸ್ಟರ್ ಪ್ಲಾನ್ ಆವರಣದಲ್ಲಿ ನಿರ್ಮಾಣಗೊಂಡಿರುವ 381 ಮನೆಗಳು ಅದರಲ್ಲಿ 41 ಮನೆಗಳಿಗೆ ಈ ಸ್ವತ್ತು ಮಲೆ ಮಾದೇಶ್ವರ ಬೆಟ್ಟ ಗ್ರಾಮ ಪಂಚಾಯಿತಿ ವತಿಯಿಂದ ನೀಡಲಾಗಿದೆ. ಇದಲ್ಲದೆ ದೀಪದಗಿರಿ ವಡ್ಡುವಿನಲ್ಲಿ ಪ್ರತಿಮೆಗೆ ಹೋಗುವ ದಾರಿಯಲ್ಲಿ ಸುಮಾರು 15 ಅನಧಿಕೃತ ಮನೆಗಳು ನಿರ್ಮಿಸಲಾಗಿದೆ ಎಂದು ಗ್ರಾಮ ಪಂ. ಪಿಡಿಒ ಕಿರಣ್ ಕುಮಾರ್ ಸಭೆಯಲ್ಲಿ ತಿಳಿಸಿದರು.



ಸಭೆಯಲ್ಲಿ ಶಾಸಕ ಮಂಜುನಾಥ್ ಅವರು ಮಾತನಾಡಿ,ಮಲೆ ಮಹದೇಶ್ವರ ಬೆಟ್ಟದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಪೌರಕಾರ್ಮಿಕರಿಗೆ ಸಮವಸ್ತ್ರ ಹಾಗೂ ಹ್ಯಾಂಡ್ ಗ್ಲೌಸ್ ಹೆಲ್ಮೆಟ್ ಗಳನ್ನು ಮತ್ತು ಸುರಕ್ಷಿತ ಸಾಧನಗಳನ್ನು ಸಭೆಯಲ್ಲಿ ವಿತರಣೆ ಮಾಡಿ ಶ್ರೀ ಕ್ಷೇತ್ರದಲ್ಲಿ ಸ್ವಚ್ಛತೆಗೆ ಆದ್ಯತೆ ನೀಡುವಂತೆ ಸಭೆಯಲ್ಲಿ ತಿಳಿಸಿದರು.

ಸಭೆಗು ಮೊದಲು ಇಂದು ಬೆಳಿಗ್ಗೆ ಮಲೈ ಮಹದೇಶ್ವರ ಬೆಟ್ಟಕ್ಕೆ ಭೇಟಿ ನೀಡಿದ ಶಾಸಕ ಮಂಜುನಾಥ್ ಅವರು ಶ್ರೀ ಮಲೈ ಮಹದೇಶ್ವರ ಸ್ವಾಮಿ ದರ್ಶನ ಪಡೆದರು. ನಂತರ ಪ್ರಾಧಿಕಾರದ ಸಭೆಯಲ್ಲಿ ಭಾಗವಹಿಸಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಶಿಲ್ಪನಾಗ್, ಅಪರ ಜಿಲ್ಲಾಧಿಕಾರಿ ಗೀತಾಉಡೇದಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆಟಿ ಕವಿತಾ, ಪ್ರಾಧಿಕಾರ ಕಾರ್ಯದರ್ಶಿ ಎಇ ರಘು, ಉಪ ಕಾರ್ಯದರ್ಶಿ ಚಂದ್ರಶೇಖರ್, ಡಿವೈಎಸ್ಪಿ ಧರ್ಮೇಂದರ್, ಉಪ ವಿಭಾಗಾಧಿಕಾರಿ ಮಹೇಶ್, ತಹಶೀಲ್ದಾರ್ ಗುರುಪ್ರಸಾದ್, ಇಒ ಉಮೇಶ್, ಇನ್ಸ್ಪೆಕ್ಟರ್ ಜಗದೀಶ್, ಎಡಿಎಲ್ ಆರ್ ವಿದ್ಯಾರಾಣಿ ಹಾಗೂ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿಕಾರಿ ಸಿಬ್ಬಂದಿ ವರ್ಗದವರು ಹಾಜರಿದ್ದರು

# ಸಂಭ್ರಮದ ಸೋಮೇಶ್ವರ ಸ್ವಾಮಿ ರಥೋತ್ಸವ



**ಶಿಡ್ಲಘಟ್ಟ:** ಗಂಗರ ಕಾಲದ ಎಂಟನೇ ಶತಮಾನದ್ದು ಎನ್ನಲಾದ ತಾಲ್ಲೂಕಿನ ಗುಡಿಹಳ್ಳಿಯಲ್ಲಿ ನೆಲೆಸಿರುವ ಇತಿಹಾಸ ಪ್ರಸಿದ್ಧ ಶ್ರೀಪಾರ್ವತಾಂಬಾ ಸಮೇತ ಶ್ರೀ ಸೋಮೇಶ್ವರಸ್ವಾಮಿ ದೇವಾಲಯದ 17ನೇ ವರ್ಷದ ಬ್ರಹ್ಮರಥೋತ್ಸವವು ಭಕ್ತಿ–ಭಾವಪೂರ್ಣದಿಂದ ನೆರವೇರಿತು.

ಸುತ್ತಮುತ್ತಲಿನ ಗ್ರಾಮಗಳಿಂದ ಆಗಮಿಸಿದ ಸಾವಿರಾರು ಭಕ್ತರು ಈ ಪುಣ್ಯಕಾರ್ಯಕ್ಕೆ ಸಾಕ್ಷಿಯಾಗಿದ್ದು ಭಕ್ತಿ ಹಾಗೂ ಸಂಭ್ರಮದಿಂದ ಜಾತ್ರೆಯು ನಡೆಯಿತು.

ಶಾಸಕರಾದ ಬಿ.ಎನ್.ರವಿಕುಮಾರ್ ಹಾಗು ತಹಶೀಲ್ದಾರ್ ಬಿ.ಎನ್.ಸ್ವಾಮಿ ಅವರುಗಳು ರಥೋತ್ಸವಕ್ಕೆ ಚಾಲನೆ ನೀಡಿದರು.

ಬ್ರಹ್ಮರಥೋತ್ಸವದ ಅಂಗವಾಗಿ ದೇವರಿಗೆ ವೈಶಿಷ್ಟ್ಯಪೂರ್ಣ ಹೂವಿನ ಅಲಂಕಾರ ಮಾಡಿ ಸಿಂಗರಿಸಲಾಗಿತ್ತು, ವಿವಿಧ ಧಾರ್ಮಿಕ ವಿಧಿವಿಧಾನಗಳಾದ ವಿಶೇಷ ಪೂಜೆ, ಹೋಮ–ಹವನ, ಕಳಶ ಪೂಜೆ, ಗಣಪತಿ ಪೂಜೆ ನೆರವೇರಿಸಿದ ಬಳಿಕ ಮಹಾಮಂಗಳಾರತಿ ನೆರವೇರಿಸಿ ಭಕ್ತರಿಗೆ ತೀರ್ಥ, ಪ್ರಸಾದ ವಿನಿಯೋಗಿಸಲಾಯಿತು.

ಗುಡಿಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಹೆಣ್ಣುಮಕ್ಕಳು ದೀಪಗಳನ್ನು ಹೊತ್ತುಕೊಂಡು ಮೆರವಣಿಗೆ ನಡೆಸಿ ದೇವರಿಗೆ ಆರತಿ ಎತ್ತಿದ ಕ್ಷಣ ಭಕ್ತಿಭಾವದ ಪರಾಕಾಷ್ಠೆಯಾಗಿತ್ತು. ವೀರಗಾಸೆ ಹಾಗು ಕಲಾತಂಡಗಳ ಸಾಂಸ್ಕೃತಿಕ ಪ್ರದರ್ಶನ ಮೆರವಣಿಗೆಗೆ ಮತ್ತಷ್ಟು ಮೆರುಗು ನೀಡಿತು.

ಶ್ರೀ ಪಾರ್ವತಾಂಭ ಸಮೇತಾ ಶ್ರೀ ಸೋಮೇಶ್ವರ ದೇವಾಲಯವು ಗಂಗರ ಆಳ್ವಿಕೆ ಕಾಲದ 8 ನೇ ಶತಮಾನದ್ದು ಎಂಬ ಇತಿಹಾಸವಿದೆ ಎಂದು ಗ್ರಾಮದ ಹಿರಿಯರು ಹೇಳುತ್ತಾರೆ.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ರಾಜೀವ್‌ಗೌಡ ,ಆಂಜಿನಪ್ಪ (ಪುಟ್ಟು), ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಬಂಕ್ ಮುನಿಯಪ್ಪ,ಸದಸ್ಯರಾದ ಗುಡಿಹಳ್ಳಿ ಚಂದ್ರನಾಥ್, ರಾಜ್ಯ ರೈತ ಸಂಘದ ಕಾರ್ಯಾದ್ಯಕ್ಷರಾದ ಭಕ್ತರಹಳ್ಳಿ ಭೈರೇಗೌಡ, ತಾದೂರು ರಘು, ಬಂಗಾರು ನಾರಾಯಣಸ್ವಾಮಿ, ಶ್ರೀಸೋಮೇಶ್ವರಸ್ವಾಮಿ ದೇವಾಲಯದ ಅಧ್ಯಕ್ಷ ಜಿ.ಎಸ್. ಹರಿಕೃಷ್ಣ, ಗೌರವಾಧ್ಯಕ್ಷ ಮುನಿವೆಂಕಟಸ್ವಾಮಿ, ಕಾರ್ಯದರ್ಶಿ ಜಿ.ಎನ್.ನರಸಿಂಹಮೂರ್ತಿ, ಖಜಾಂಚಿ ಚನ್ನಕೃಷ್ಣಪ್ಪ, ಸಮಿತಿ ಸದಸ್ಯರು ಸೇರಿದಂತೆ ಸ್ಥಳೀಯ ಗಣ್ಯರು ಹಾಗು ಸಾವಿರಾರು ಭಕ್ತಾದಿಗಳು ರಥೋತ್ಸವದಲ್ಲಿ ಪಾಲ್ಗೊಂಡಿದ್ದರು.

# ಸಂಘದ ಕಚೇರಿಗೆ ಬಾಡಿಗೆ ರಹಿತ ಮಳಿಗೆ: ಮನವಿ

**ಶಿಡ್ಲಘಟ್ಟ:** ಕರ್ನಾಟಕ ರಾಜ್ಯ ರೈತ ಸಂಘ ಕಚೇರಿ ಬಾಡಿಗೆ ಕಟ್ಟಲು ಕಷ್ಟಕರವಾಗಿರುವುದರಿಂದ ನಮಗೆ ಸರ್ಕಾರಿ ಪದವಿಪೂರ್ವ ಕಾಲೇಜು ಮುಂದೆ ಇರುವ ನಗರಸಭೆ ಮಳಿಗೆಗಳಲ್ಲಿ ಬಾಡಿಗೆ ರಹಿತವಾದ ಒಂದು ಮಳಿಗೆಯನ್ನು ರೈತ ಸಂಘ ಕಚೇರಿ ನಡೆಸಿಕೊಳ್ಳಲು ಕೊಡಬೇಕೆಂದು ನಗರಸಭೆ ಆಯುಕ್ತರ ಪರವಾಗಿ ವ್ಯವಸ್ಥಾಪಕರಾದ ರಾಜರಾಜೇಶ್ವರಿ ಅವರಿಗೆ ಮನವಿಯನ್ನು ಕೊಟ್ಟಿದ್ದೇವೆ ಎಂದು ರಾಜ್ಯ ರೈತ ಸಂಘದ ತಾಲ್ಲೂಕು ಅಧ್ಯಕ್ಷ ಎಸ್. ಎಂ.ಪ್ರಕಾಶ್ ತಿಳಿಸಿದರು.

2 ದಶಕಗಳಿಂದ ರೈತಪರ ,ನಾಡು ನುಡಿ ಹಾಗು ಸಾರ್ವಜನಿಕರ ಪರ ಹೋರಾಟಗಳನ್ನು ಮಾಡಿಕೊಂಡು ಬಂದಿದ್ದು ಸಂಘಕ್ಕೆ ಸಂಬಂಧಿಸಿದ ಕಾರ್ಯಗಳನ್ನು ನಿರ್ವಹಿಸಲು ಮಳಿಗೆಯನ್ನು ನೀಡಬೇಕೆಂದು ಅವರು ಮನವಿ ಮಾಡಿದರು. ಈ ಸಂದರ್ಭದಲ್ಲಿ ರೈತ ಸಂಘದ ಉಪಾಧ್ಯಕ್ಷರಾ ನಾಗರಾಜ್, ಕಾರ್ಯದರ್ಶಿ ಎನ್.ಶ್ರೀಧರ್, ಮನೋಜ್ ಗೌಡ, ಪದಾಧಿಕಾರಿಗಳಾದ ಮಾಧವಚಾರ್ಯ, ಮಂಜುನಾಥ್, ಬೀದಿ ಬದಿ ವ್ಯಾಪಾರ ಸಂಘದ ಅಧ್ಯಕ್ಷರಾದ ಶ್ರೀರಾಮ್, ದ್ಯಾವಕೃಷ್ಣಪ್ಪ ಮುಂತಾದವರು ಭಾಗವಹಿಸಿದ್ದರು.



# ಒಂದು ಕಡೆ ಸಾಲ ಮಾಡಿದಾಗ ಹಿಂಪಾವತಿಯು ಸರಳವಾಗಿರುತ್ತದೆ

**ಮುಳಬಾಗಿಲು:** ಖಾಸಗಿ ಫೈನಾನ್ಸ್, ಮೈಕ್ರೋ ಫೈನಾನ್ಸ್ ಹಾವಳಿಯಿಂದ ಸಾರ್ವಜನಿಕರಿಗೆ ಪ್ರಮುಖವಾಗಿ ಮಹಿಳೆಯರಿಗೆ ಉಂಟಾಗುತ್ತಿರುವ ಸಮಸ್ಯೆಗಳು ಹಾಗೂ ಸರ್ಕಾರವು ಸರ್ಕಾರಿ ಬ್ಯಾಂಕುಗಳ ಮೂಲಕ ವಿವಿಧ ರೂಪದಲ್ಲಿ ಸಾಲವನ್ನು ನೀಡುತ್ತಿದ್ದು ಪ್ರಮುಖವಾಗಿ ಮಹಿಳೆಯರು ಒಂದು ಕಡೆ ಸಾಲವನ್ನು ಮಾಡಿದ್ದಾಗ ಹಿಂಪಾವತಿಯು ಸಹ ಸರಳವಾಗಿರುತ್ತದೆ ಮತ್ತು ಖಾಸಗಿ ಫೈನಾನ್ಸ್‌ಗಳಿಂದ ಹೆಚ್ಚಿನ ಬಡ್ಡಿಯನ್ನು ಕಟ್ಟುವಂತಹ ಮಹಿಳೆಯರು ಬಹಳಷ್ಟು ಮಹಿಳಾ ಸಂಘಗಳಿಗೆ ವಿಶೇಷವಾಗಿ ಅತ್ಯಂತ ಕಡಿಮೆ ಬಡ್ಡಿ ದರದಲ್ಲಿ ಸುಲಭದ ರೂಪದಲ್ಲಿ ಬ್ಯಾಂಕ್ ಸಾಲವನ್ನು ನೀಡುತ್ತಿವೆ ಎಂದು ಲಾರ ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ಜಿಲ್ಲಾ ವ್ಯವಸ್ಥಾಪಕರು ಕೆ ಸುಬ್ಬುನಾಯಕ್ ಹೇಳಿದರು.

ನಗರಸಭೆ ಸಭಾಂಗಣದಲ್ಲಿ ಆರ್ಥಿಕ ಸಾಕ್ಷರತಾ ಕೇಂದ್ರ ಮುಳಬಾಗಿಲು, ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಗ್ರಾಮೀಣ ಬ್ಯಾಂಕ್, ಯೂನಿಯನ್ ಬ್ಯಾಂಕ್, ಬ್ಯಾಂಕ್ ಆಫ್ ಬರೋಡ, ಕರ್ನಾಟಕ ಬ್ಯಾಂಕ್ ಸಂಯುಕ್ತಾಶ್ರಯದಲ್ಲಿ ಮಹಿಳಾ ಆರ್ಥಿಕ ಸಬಲೀಕರಣ ಮತ್ತು ಆರ್ಥಿಕ ಸಾಕ್ಷರತೆ ಕುರಿತಂತೆ ನಗರಸಭೆಯಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಕೋಲಾರ ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ಜಿಲ್ಲಾ ವ್ಯವಸ್ಥಾಪಕರು ಕೆ ಸುಬ್ಬುನಾಯಕ್ ಮಾತನಾಡಿ, ಪ್ರಮುಖವಾಗಿ ಬೀದಿಬದಿ ವ್ಯಾಪಾರಸ್ಥರಿಗೆ ಜೀವನ್ ಭೀಮಾ ಯೋಜನೆ, ವಿಶ್ವಕರ್ಮ ಯೋಜನೆ ಸೇರಿದಂತೆ ಹಲವು ಯೋಜನೆಗಳ ಮೂಲಕ ಹೆಣ್ಣು ಮಕ್ಕಳಿಗೂ ಆರ್ಥಿಕ ಸಬಲೀಕರಣಕ್ಕೆ ,ಸ್ವಂತ ಉದ್ಯೋಗ ವ್ಯಾಪಾರಕ್ಕಾಗಿ ನೀಡುತ್ತಿದ್ದು ಸರಿಯಾದ ರೀತಿಯಲ್ಲಿ ಸಾಲವನ್ನು ಪಡೆದು ಹಣವನ್ನು ಉಪಯೋಗಿಸಿಕೊಂಡು ಮತ್ತೆ ಬ್ಯಾಂಕಿಗೆ ಸಾಲವನ್ನು ತೀರಿಸಿದಾಗ ನಿಮ್ಮ ಸಿಬಿಲ್ಮಟ್ಟವನ್ನು ಕಾಪಾಡಿಕೊಂಡು ಹೋದರೆ ಬ್ಯಾಂಕ್ ಎಂದು ಗ್ರಹಕರನ್ನು ಬಿಡುವುದಿಲ್ಲ ಏಕೆಂದರೆ ಎಲ್ಲಾ ಬ್ಯಾಂಕುಗಳ ಜೀವಾಳ ಗ್ರಾಹಕರೆಯಾಗಿದ್ದು ಹೆಣ್ಣು ಮಕ್ಕಳು ಇಲ್ಲಸಲ್ಲದ ಕೈಸಾಲೆಗಳಿಗೆ ಹೋಗಿ ಅತಿ ಹೆಚ್ಚಿನ ಬಡ್ಡಿಯನ್ನು ಕಟ್ಟಿಸಿಕೊಳ್ಳುವಂತಹ ಮೈಕ್ರೋ ಫೈನಾನ್ಸ್ ಹಾವಳಿನಿಂದ ದೂರ ಉಳಿಯಬೇಕು ಎಂದು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ನೂರಾರು ಮಹಿಳಾ ಸ್ವಸಹಾಯ ಸಂಘದ ಮಹಿಳೆಯರಿಗೆ ತಿಳಿಸಿದರು.

ನಂತರ ಆರ್ಥಿಕ ಸಾಕ್ಷರತಾ ಸಲಹೆಗಾತಿ ಅಂಬಿಕಾ ಮಂಜುನಾಥ್ ಮಾತನಾಡಿ ಮಹಿಳೆಯರ ಅಭ್ಯುದಯ" ಎಂಬ ಥೀಮ್‌ನೊಂದಿಗೆ ಖಃಖ 2025 (ಫೆಬ್ರವರಿ 24–28) ಆರಂಭಿಸಿದ ಆರ್ಥಿಕ ಸಾಕ್ಷರತಾ ವಾರವನ್ನು ನಾವು ಆಚರಿಸುತ್ತಿದ್ದೇವೆ. ಮಹಿಳೆಯರನ್ನು ಆರ್ಥಿಕ ತೊಂದರೆ ಮತ್ತು ಸಮಸ್ಯೆಗಳಿಗೆ ಸರಿಯಾದ ಜ್ಞಾನದಿಂದ ಸಬಲೀಕರಣಗೊಳಿಸಲು, ಆರ್ಥಿಕ ಸೇರ್ಪಡೆಯನ್ನು ಸುಧಾರಿಸಲು ಮತ್ತು ಆರ್ಥಿಕ ಭಾಗವಹಿಸುವಿಕೆಯನ್ನು ಹೆಚ್ಚಿಸಲು ಬ್ಯಾಂಕಿಂಗ್ ಜಾಗೃತಿಯ ಬಗ್ಗೆ ವಿವರಿಸಿದರು. 18–50 ವರ್ಷ ವಯಸ್ಸಿನ ಎಲ್ಲಾ ಚಂದಾದಾರರಿಗೆ




2.00 ಲಕ್ಷದ ರೂ ವಿಮೆಯ ರಕ್ಷಣೆ ಇದ್ದು, ಯಾವುದೇ ಕಾರಣದಿಂದ ಮರಣವನ್ನು ಆವರಿಸುತ್ತದೆ. ಪಾವತಿಸಬೇಕಾದ ಪ್ರೀಮಿಯಂ ಪ್ರತಿ ಚಂದಾದಾರರ ಪ್ರತಿ ವರ್ಷಕ್ಕೆ 436/– ಆಗಿದೆ, ಚಂದಾದಾರರ ಬ್ಯಾಂಕ್/ಪೋಸ್ಟ್ ಆಫೀಸ್ ಖಾತೆಯಿಂದ ಸ್ವಯಂ ಡೆಬಿಟ್ ಮಾಡಲು, ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ ವೈಯಕ್ತಿಕ ಅಪಘಾತ ರಕ್ಷಣೆ ರೂ. 2,00,000/– ಅತ್ಯಲ್ಪ ವಾರ್ಷಿಕ ಪ್ರೀಮಿಯಂ ರೂ. 20/– 18 ಮತ್ತು 70 ವರ್ಷಗಳ ನಡುವಿನ ಎಲ್ಲಾ ಉಳಿತಾಯ ಬ್ಯಾಂಕ್ ಖಾತೆದಾರರಿಗೆ ಇರುವ ಕೇಂದ್ರ ಸರ್ಕಾರದ ಯೋಜನೆಗಳ ಬಗ್ಗೆ ಸವಿಸ್ತಾರವಾಗಿ ತಿಳಿಸಿದರು.

ನಂತರ ಸ್ಟೇಟ್ ಬ್ಯಾಂಕ್ ಎಜಿಎಂ ಬಾಬು ಸೋಮಪ್ಪ ಮಾತನಾಡಿ, ಇತ್ತೀಚಿಗೆ ಸೈಬರ್ ಕ್ರೈಂ ಹೆಚ್ಚಾಗಿದ್ದು, ಗ್ರಾಹಕರು ಯಾವುದೇ ಅನ್ಯ ಕರೆಗಳಿಗೆ ಸರಿಯಾಗಿ ಸ್ಪಂದಿಸಬಾರದು ಏಕೆಂದರೆ ಸೈಬರ್ ಕ್ರೈಂ ಮಾಡುವಂಥವರು ಇಲ್ಲಸಲ್ಲದ ಆಮಿಷಗಳನ್ನು ಒಡ್ಡಿ, ಕರೆ ಮೂಲಕ ,ಮೆಸೇಜ್ ಮೂಲಕ ,ನಿಮ್ಮನ್ನು ನಿಮ್ಮಲ್ಲಿನ ಓಟಿಪಿ ಪಡೆದು ನಿಮ್ಮ ಹಣಕ್ಕೆ ಕನ್ನ ಹಾಕುವಂತಹ ಕೆಲಸಗಳು ನಡೆಯುತ್ತಿದ್ದು. ಗ್ರಾಹಕರಿಗೆ ಯಾವುದೇ ಕಾರಣಕ್ಕೂ ಬ್ಯಾಂಕ್ ಸಿಬ್ಬಂದಿ ಕರೆ ಮಾಡುವುದಿಲ್ಲ ,ಆದ್ದರಿಂದ ಗ್ರಾಹಕರು ತಮ್ಮ ಮೊಬೈಲಿಗೆ ಒಟಿಪಿ ಇನ್ನಿತರ ವಿಚಾರಗಳನ್ನು ಬೇರೆಯವರು ಕೇಳಿದಾಗ ಕೂಡಲೇ ಬ್ಯಾಂಕ್ ನ ಸಂಪರ್ಕಕ್ಕೆ ಬಂದು ವಿಚಾರಿಸಿ ತದನಂತರ ತಿಳಿಸಬೇಕೆಂದು ಹೇಳಿದರು

ಈ ಸಂದರ್ಭದಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಎಜಿಎಂ ಬಾಬು ಸೋಮಪ್ಪ, ನಗರ ಸಭೆ ಪೌರಾಯುಕ್ತರು ಶ್ರೀಧರ್, ಸುಬ್ಬ ನಾಯಕ್, ಎಸ್ ಬಿ ಐ ಮುಳುಬಾಗಿಲು ಬ್ಯಾಂಕಿನ ವ್ಯವಸ್ಥಾಪಕರು ವಿಜ್ಞೇಶ್, ಯೂನಿಯನ್ ಬ್ಯಾಂಕ್ ಆಫ್ ಬರೋಡ ,ಗ್ರಾಮೀಣ ಬ್ಯಾಂಕ್, ಕರ್ನಾಟಕ ಗ್ರಾಮೀಣ ಬ್ಯಾಂಕ್ ಗಳ ವ್ಯವಸ್ಥಾಪಕರು, ನಗರ ಸಂಘಟನಾ ಅಧಿಕಾರಿ ಎಚ್ ಶ್ರೀನಿವಾಸ್, ನಗರ ಸಭೆ ವ್ಯಾಪ್ತಿಯ ಸಿಆರ್ಪಿಎಸ್ಗಳಾದ ವಂದನ ಆರ್, ಪಲ್ಲವಿ ಬಾಯಿ ,ಮಾದುರಿ ಜಿ ಹಾಗೂ ನಗರ ವ್ಯಾಪ್ತಿಯ ಮಹಿಳಾ ಸ್ವಸಹಾಯದ ಗುಂಪು ಹಾಗೂ ನಗರಸಭೆಯ ಪೌರಕಾರ್ಮಿಕರು ಸೇರಿದಂತೆ ಹಲವಾರು ಮಹಿಳೆಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು

# ಪಟ್ಟಣದವರಿಗಿಂತ ಗ್ರಾಮೀಣ ಭಾಗದ ಮಕ್ಕಳು ಕಡಿಮೆಯಿಲ್ಲ

**ಶಿಡ್ಲಘಟ್ಟ:** ಪಟ್ಟಣದ ಮಕ್ಕಳಿಗಿಂತ ಗ್ರಾಮೀಣ ಭಾಗದ ಮಕ್ಕಳು ಕಡಿಮೆಯೇನಿಲ್ಲಾ ಕಷ್ಟಪಟ್ಟು ಓದಿದಲ್ಲಿ ಏನು ಬೇಕಾದರು ಸಾಧಿಸಬಹುದು ಎಂದು ತಹಶೀಲ್ದಾರ್ ಬಿ.ಎನ್.ಸ್ವಾಮಿ ತಿಳಿಸಿದರು.

ತಾಲ್ಲೂಕಿನ ಗಡಿಭಾಗದ ಸಾದಲಿ ಸರ್ಕಾರಿ ಪ್ರೌಢ ಶಾಲೆ, ದ್ಯಾವಪ್ಪನಗುಡಿ ಪ್ರೌಢಶಾಲೆ, ನಗರದ ಜೂನಿಯರ್ ಕಾಲೇಜ್ ಬಳಿಯ ಪ್ರೌಢಶಾಲೆ,ಟೌನ್ ಸರ್ಕಾರಿ ಉರ್ದು ಪ್ರೌಢಶಾಲೆ ಹಾಗೂ 11 ಮೈಲಿಯ ವಸತಿಶಾಲೆ, ಸೇರಿದಂತೆ ನಗರದ ಪದವಿ ಪೂರ್ವ ಕಾಲೇಜಿಗೆ ಬೇಟಿ ನೀಡಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ ಅವರು ಮಾತನಾಡಿದರು.

ವರ್ಷವಿಡೀ ಓದಿರುವ ವಿಷಯವನ್ನು ಪರೀಕ್ಷೆಯಲ್ಲಿ ಅಚ್ಚುಕಟ್ಟಾಗಿ ಬರೆಯಬೇಕು ಪರೀಕ್ಷಾ ಸಮಯದಲ್ಲಿ ಗಲಿಬಿಲಿಗೊಳ್ಳದೇ ಮನಸ್ಸನ್ನು ಕೇಂದ್ರೀಕರಿಸಿ ಬರುವ ಉತ್ತರಗಳನ್ನು ಮೊದಲು ಬರೆದು ಬಾರದಂತಹ ಪ್ರಶ್ನೆಗಳಿಗೆ ನಿಧಾನವಾಗಿ ಆಲೋಚಿಸಿ ಬರೆದಲ್ಲಿ ಹೆಚ್ಚಿನ ಅಂಕ ಗಳಿಸಲು ಸಾಧ್ಯ ಎಂದು ಹೇಳಿದರು.

ವಿದ್ಯಾರ್ಥಿಗಳು ಪ್ರತಿದಿನ ದಿನಪತ್ರಿಕೆ ಓದುವ



ರೂಢಿ ಬೆಳೆಸಿಕೊಳ್ಳಬೇಕು ದಿನಪತ್ರಿಕೆ ಓದುವುದರಿಂದ ಸಾಮಾನ್ಯ ಜ್ಞಾನ ಹಾಗೂ ದಿನನಿತ್ಯದ ಆಗುಹೋಗುಗಳ ಜ್ಞಾನ ಹೆಚ್ಚಾಗಿ ಆತ್ಮವಿಶ್ವಾಸ ಹೆಚ್ಚಾಗುತ್ತದೆ ಎಂದರು.

ಸಾಧಕರ ಕುರಿತ ಪುಸ್ತಕಗಳನ್ನು ಓದಬೇಕು, ಸ್ಪಷ್ಟ ಗುರಿಯೊಂದಿಗೆ ಸಾಧಿಸಲು ಪರಿಶ್ರಮ ಪಡಬೇಕು ಪ್ರತಿಯೊಬ್ಬ ವಿದ್ಯಾರ್ಥಿ ಶಿಸ್ತು ಮೈಗೂಡಿಸಿಕೊಂಡು ನಮ್ಮ ಸುತ್ತ ಮುತ್ತಲಿನ ಸ್ವಚ್ಛತೆಗೂ ಒತ್ತು ನೀಡಬೇಕು ಎಂದು ಮನವರಿಕೆ ಮಾಡಿದರು.

ವಿದ್ಯಾರ್ಥಿಗಳು ಮಾನಸಿಕ ಒತ್ತಡಕ್ಕೆ ಒಳಗಾಗದೆ ಧೈರ್ಯವಾಗಿ ಪರೀಕ್ಷೆ ಎದುರಿಸಬೇಕು ಎಂದರು.

ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವ ಕುರಿತು ಮಾಹಿತಿ ಜತೆಗೆ ಪರೀಕ್ಷೆಯನ್ನು ಬರೆಯುವ ವಿಧಾನ ಮತ್ತು ಸಾಮಾನ್ಯ ಜ್ಞಾನದ ಬಗ್ಗೆ ಬೋಧನೆ ಮಾಡಿ ಸಾಧಕರ ಸಾಧನೆಗಳ ಬಗ್ಗೆ ಹೇಳಿ ಮಕ್ಕಳಿಗೆ ಸ್ಫೂರ್ತಿ ತುಂಬಿದರು.

ಈ ಸಂದರ್ಭದಲ್ಲಿ ಬಿಇಒ ನರೇಂದ್ರಕುಮಾರ್, ಪಿಯುಸಿ ಕಾಲೇಜಿನ ಪ್ರಾಂಶುಪಾಲರು,ಪ್ರೌಢಶಾಲಾ ಮುಖ್ಯ ಶಿಕ್ಷಕರು ಹಾಗು ಶಾಲಾ ಶಿಕ್ಷಕರು ಹಾಜರಿದ್ದರು.

# ಮಕ್ಕಳಸಂತೆಯಲ್ಲಿ ಮಕ್ಕಳು ಭರ್ಜರಿ ವ್ಯಾಪಾರ

**ಕೆ.ಆರ್.ಪೇಟೆ:** ಅಣ್ಣಾ ಬನ್ನೀ. ಅಕ್ಕ ಬನ್ನೀ, ಅಂಕಲ್ ಬನ್ನಿ, ಆಂಟಿ ಬನ್ನೀ.. ನಮ್ಮತ್ರ ತಗೊಳ್ಳಿ ಎಂದು ಪೈಪೋಟಿಯ ಮೇಲೆ ಗ್ರಾಹಕರನ್ನು ಕರೆದು ಮಕ್ಕಳಸಂತೆಯಲ್ಲಿ ಮಕ್ಕಳು ಭರ್ಜರಿ ವ್ಯಾಪಾರ ಮಾಡಿದರು.

ತಾಲ್ಲೂಕಿನ ಕಿಕ್ಕೇರಿ ಸಮೀಪದ ಮಂದಗೆರೆ ಗ್ರಾಮದ ಶ್ರೀ ಜಗನ್ನಾಥ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿಗಳು ಮಕ್ಕಳ ಸಂತೆಯಲ್ಲಿ ತಿಂಡಿ ತಿನಿಸು, ತಂಪು ಪಾನಿಯಗಳು, ಐಸ್ ಕ್ರೀಮ್, ಹಣ್ಣುಗಳು, ಪಾನಿಪೂರಿ, ಗೋಬಿ, ಬಿರಿಯಾನಿ, ಕಬಾಬ್, ತಾಜಾ ತರಕಾರಿಗಳು ಮಕ್ಕಳು ತಮ್ಮ ಮನೆಯಿಂದ ಪೋಷಕರ ನೆರವಿ ನೊಂದಿಗೆ ತಯಾರಿಸಿ ತಂದಿದ್ದ ವಿವಿಧ ವಸ್ತುಗಳನ್ನು ಮಾರಾಟ ಮಾಡಿ ಪೋಷಕರು ಹಾಗೂ ಶಿಕ್ಷಕರ ಮೆಚ್ಚುಗೆಗೆ ಪಾತ್ರರಾದರು.

ಶ್ರೀ ಜಗನ್ನಾಥ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಇಂದು ಮಕ್ಕಳ ಸಂತೆಯ ಸಂಭ್ರಮ.. ಇಡೀ ಶಾಲೆಯ ವಾತಾವರಣವೇ ಸಂತೆಯಾಗಿತ್ತು. ಇದಲ್ಲದೆ ಹಲವು ಮಕ್ಕಳು ವಿಜ್ಞಾನಕ್ಕೆ ಸಂಬಂದಿಸಿದ ವಸ್ತುಗಳು, ಶ್ರೀ ರಾಮಮಂದಿರ ಸೇರಿದಂತೆ ಮತ್ತಿತರ ಅನೇಕ ವಸ್ತುಗಳನ್ನು ತಯಾರು ಮಾಡಿ ವಸ್ತು ಪ್ರದರ್ಶನದಲ್ಲಿ ಇಟ್ಟು ಸಾರ್ವಜನಿಕರ ಮತ್ತು ಶಿಕ್ಷಕರ ಮೆಚ್ಚುಗೆಗೆ ಪಾತ್ರರಾದರು

ಶಾಲೆಯ ಆಡಳಿತ ಮಂಡಲಿಯ ಅಧ್ಯಕ್ಷರು, ನಿರ್ದೇಶಕರುಗಳು ಮಾತನಾಡಿ ಮಕ್ಕಳಿಗೆ ಪಠ್ಯ ಚಟುವಟಿಕೆಗಳ ಜೊತೆ ಜೊತೆಗೆ ಲೆಕ್ಕಾಚಾರ, ಗುಣಾಕಾರ, ಕೂಡೋದು, ಕಳೆಯೋದು ಸೇರಿದಂತೆ ವ್ಯವಹಾರ ಜಾಣ್ಮೆಯ ಬಗ್ಗೆ ವಿಶೇಷವಾಗಿ ಅರಿವು ಮೂಡಿಸಲು ಮಕ್ಕಳ ಸಂತೆಯನ್ನು ಏರ್ಪಡಿಸಲಾಗಿದೆ. ಬೆಳಗಿನಿಂದಲೂ ಮಕ್ಕಳಿಂದ



ವ್ಯಾಪಾರ ಜೋರಾಗಿದ್ದು ಮಕ್ಕಳು ತಂದಿರುವ ವಿವಿಧ ವಸ್ತುಗಳನ್ನು ಮಕ್ಕಳ ಪೋಷಕರು ಹಾಗೂ ಗ್ರಾಮಸ್ಥರು ಪೈಪೋಟಿಯ ಮೇರೆಗೆ ಖರೀದಿಸಿ ಸಂಭ್ರಮಿಸುತ್ತಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಜಿ.ಪಿ.ಶಿವರಾಂ, ಶ್ರೀ ಜಗನ್ನಾಥಹಿರಿಯ ಪ್ರಾಥಮಿಕ ಶಾಲೆಯ ಆಡಳಿತ ಮಂಡಲಿಯ ಅಧ್ಯಕ್ಷರಾದ ಕೆ.ಮುರುಳಿಧರ್, ಕಾರ್ಯದರ್ಶಿ ಮೋಹನ್‌ಬಾಬು, ಖಜಾಂಚಿ ನವೀನ್, ಮಾಜಿ ಉಪಾಧ್ಯಕ್ಷ ಮಂಜುನಾಥ್, ಮಾಜಿ ಕಾರ್ಯದರ್ಶಿ ಗೋವಿಂದೇಗೌಡ, ನಿರ್ದೇಶಕ ನಾಗೇಶ್, ಮುಖ್ಯಶಿಕ್ಷಕ ಮುಕುಂದಸ್ವಾಮಿ, ಸಹ ಶಿಕ್ಷಕರಾದ ಯೋಗೇಶ್, ಇಂದ್ರೇಶ್, ನಂದೀಶ್, ಚಂದ್ರಕಲಾ, ಸುಮ, ನಯನ ಸೇರಿದಂತೆ ಪೋಷಕರು ಮಕ್ಕಳು, ಗ್ರಾಮಸ್ಥರುಗಳು ಇದ್ದರು.

# ಮಲೆ ಮಾದಪ್ಪನ ದರ್ಶನ ಪಡೆದ ಮೆಟ್ಟೂರು ಶಾಸಕ ಸದಾಶಿವಂ

**ಹನೂರು:** ಮಲೆ ಮಹದೇಶ್ವರ ಬೆಟ್ಟದಲ್ಲಿ ಶಿವರಾತ್ರಿ ಜಾತ್ರೆ ಮಹೋತ್ಸವ ಪ್ರಯುಕ್ತ ಕ್ಷೇತ್ರದ ಎಂ.ಆರ್ ಮಂಜುನಾಥ್ ಜೊತೆ ತಮಿಳುನಾಡಿನ ಮೆಟ್ಟೂರು ವಿಧಾನಸಭಾ ಕ್ಷೇತ್ರದ ಶಾಸಕರಾದ ಸದಾಶಿವಂ ರವರು ಶ್ರೀ ಮಲೆ ಮಹದೇಶ್ವರ ಸ್ವಾಮಿ ದರ್ಶನ ಪಡೆದರು.

ತಾಲ್ಲೂಕಿನ ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾದ ಮಲೆ ಮಹದೇಶ್ವರ ಬೆಟ್ಟದಲ್ಲಿ ಐದು ದಿನಗಳ ಕಾಲ ನಡೆಯುತ್ತಿರುವ ಶಿವರಾತ್ರಿ ಜಾತ್ರೆ ಮಹೋತ್ಸವದ ವಿಶೇಷವಾಗಿ ಬೆಟ್ಟಕ್ಕೆ ಆಗಮಿಸಿದ ಮೆಟ್ಟೂರು ಶಾಸಕ ಸದಾಶಿವಂ ಅವರು ಮಲೆ ಮಾದಪ್ಪನ ಸನ್ನಿಧಿಯಲ್ಲಿ ಸುತ್ತಲು ಪ್ರದಕ್ಷಿಣೆ ಹಾಕಿ ಪೂಜೆ ಸಲ್ಲಿಸಿ ದರ್ಶನ ಪಡೆದು ಪ್ರಾರ್ಥನೆ ಸಲ್ಲಿಸಿದರು

ಮಹದೇಶ್ವರ ಬೆಟ್ಟಕ್ಕೆ ಆಗಮಿಸಿದ ಮೆಟ್ಟೂರು ಶಾಸಕ ತೇಪೋಭವನದಲ್ಲಿ ಶಾಸಕ ಎಂ.ಆರ್ ಮಂಜುನಾಥ್ ರವರನ್ನು ಭೇಟಿ ಮಾಡಿ ಕ್ಷೇತ್ರದ ಬಗ್ಗೆ ಅಭಿವೃದ್ಧಿ ಬಗ್ಗೆ ತಿಳಿದುಕೊಂಡು



ಕುಶೋಲೋಪರಿ ವಿಚಾರಿಸಿದರು ಬಂದಂತ ಶಾಸಕರನ್ನು ಆತ್ಮೀಯವಾಗಿ ಶಾಲು ಹಾರ ಹಾಕಿ ಸನ್ಮಾನಿಸಿದರು.

ಇದೇ ಸಂದರ್ಭದಲ್ಲಿ ಪ್ರಾಧಿಕಾರದ ಕಾರ್ಯದರ್ಶಿ ರಘು, ಉಪ ಕಾರ್ಯದರ್ಶಿ ಚಂದ್ರಶೇಖರ್, ಡಿವೈ ಎಸ್ಪಿ ಧರ್ಮೇಂದ್ರ,ಹಾಗೂ ಇನ್ನಿತರರು ಆಡಳಿತ ವರ್ಗದ ಸಿಬ್ಬಂದಿಗಳು ಹಾಜರಿದ್ದರು.

# ಸಣ್ಣಮ್ಮಿಕೋಟೆ ಅರಣ್ಯಕ್ಕೆ ಬೆಂಕಿ ಹಚ್ಚಿದ್ದ ಆರೋಪಿ ಬಂಧನ

**ಹನೂರು:** ಮಲೈ ಮಹದೇಶ್ವರ ವನ್ಯಜೀವಿ ವಿಭಾಗ ವ್ಯಾಪ್ತಿಯ ಹೂಗ್ಯಂ ವನ್ಯಜೀವಿ ವಲಯ ವ್ಯಾಪ್ತಿಯ ಮೀಣ್ಯಂ ಶಾಖೆಯ ನೆಕ್ಕುಂದಿ ಗಸ್ತಿನ ಕಂಪಾರ್ಟ್ ಮೆಂಟ್–115 ರ ಸಣ್ಣಮ್ಮಿಕೋಟೆ ಅರಣ್ಯ ಪ್ರದೇಶದಲ್ಲಿ ಅರಣ್ಯಕ್ಕೆ ಬೆಂಕಿ ಹಾಕಿದ್ದ ವ್ಯಕ್ತಿಯನ್ನು ಅರಣ್ಯ ಇಲಾಖೆ ಅಧಿಕಾರಿಗಳು ಬಂಧಿಸಿದ್ದಾರೆ.

ರಾಮಾಪುರ ಗ್ರಾಮದ ಮಾದೇಶ ಬಿನ್. ಲೇಟ್, ಮಸಣೇಗೌಡ (40) ಬಂಧಿತ ಆರೋಪಿಯಾಗಿದ್ದಾನೆ.

ದಿನಾಂಕ: 26.02.2025 ರಂದು ಅರಣ್ಯ ಸಿಬ್ಬಂದಿಗಳು ಎಂದಿನಂತೆ ಗಸ್ತು ಮಾಡುವಾಗ ಮಲೈ ಮಹದೇಶ್ವರ ವನ್ಯಜೀವಿ ವಿಭಾಗ ವ್ಯಾಪ್ತಿಯ ಹೂಗ್ಯಂ ವನ್ಯಜೀವಿ ವಲಯ ವ್ಯಾಪ್ತಿಯ ಮೀಣ್ಯಂ ಶಾಖೆಯ ನೆಕ್ಕುಂದಿ ಗಸ್ತಿನ ಕಂಪಾರ್ಟ್ ಮೆಂಟ್–115 ರ ಸಣ್ಣಮ್ಮಿಕೋಟೆ ಅರಣ್ಯ ಪ್ರದೇಶದಲ್ಲಿ ಅರಣ್ಯಕ್ಕೆ ಬೆಂಕಿ ಬಿದ್ದಿರುವುದನ್ನು ಗಮನಿಸಿ ತಕ್ಷಣ ಸಿಬ್ಬಂದಿಗಳು ಬೆಂಕಿಯನ್ನು ನಂದಿಸಿದ್ದಾರೆ.



ಅರಣ್ಯಕ್ಕೆ ಬೆಂಕಿ ಬೀಳಲು ಕಾರಣವೇನು ಎಂದು ಕೂಲಂಕುಷವಾಗಿ ಪರಿಶೀಲಿಸಿ ಪರಮೇಶ ಕೆ. ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮಲೈ ಮಹದೇಶ್ವರ ವನ್ಯಜೀವಿ ವಿಭಾಗ, ಕೊಳ್ಳೇಗಾಲ ಇವರ ಮಾರ್ಗದರ್ಶನದ ಮೇರೆಗೆ ಬೆಂಕಿಯನ್ನು ನಂದಿಸಿ ವಾಪಸ್ ಬರುತ್ತಿರುವಾಗ ಗೊಡ್ರಹಳ್ಳ ಅರಣ್ಯ ಪ್ರದೇಶಕ್ಕೆ ಬೆಂಕಿಯನ್ನು ಹಾಕಿದ ಆರೋಪಿಯಾದ ಮಾದೇಶ ಬಿನ್. ಲೇಟ್ ಮಸಣೇಗೌಡ ಸಿಕ್ಕಿಬಿದ್ದಿದ್ದಾನೆ.

ಆರೋಪಿಯನ್ನು ದಸ್ತಗಿರಿ ಮಾಡಿ ಆತನ ವಿರುದ್ಧ ವನ್ಯಜೀವಿ ಅಪರಾಧ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಿ ಮುಂದಿನ ಕ್ರಮ ಕೈಗೊಳ್ಳಲಾಗಿದೆ.

ಈ ಸಂದರ್ಭದಲ್ಲಿ ಸ್ವಪ್ರಿಲ್ ಮನೋಹರ್ ಆಹಿರೆ, ಭಾ.ಅ.ಸೇ., ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಹನೂರು ವನ್ಯಜೀವಿ ಉಪ ವಿಭಾಗ, ಹನೂರು, ಮಾದೇಶ, ವಲಯ ಅರಣ್ಯಾಧಿಕಾರಿ, ಹೂಗ್ಯಂ ವನ್ಯಜೀವಿ ವಲಯ ಹಾಗೂ ಸಿಬ್ಬಂದಿಗಳು ಹಾಜರಿದ್ದರು.

# ನೀರು ಪೂರೈಸುವಲ್ಲಿ ಗ್ರಾ.ಪಂ.ವಿಫಲ: ಕುಡಿಯುವ ನೀರಿಗೆ ಹಾಹಾಕಾರ

**ಕೊರಟಗೆರೆ:** ತಾಲೂಕಿನ ಮಹಾಲಿಂಗನಹಟ್ಟಿ ಗ್ರಾಮದ 25ಕ್ಕೂ ಹೆಚ್ಚು ಮನೆಗಳಿರುವ ಗ್ರಾಮಕ್ಕೆಒಂದು ವರ್ಷದಿಂದ ಕುಡಿಯಲು ನೀರು ನೀಡಲು ಗ್ರಾಪಂ ಹಾಗೂ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಅಧಿಕಾರಿಗಳು ವಿಫಲರಾಗಿದ್ದಾರೆ. ನಮ್ಮ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ ಎಂದು ಗ್ರಾಮಸ್ಥರು ಅಧಿಕಾರಿಗಳಿಗೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕೊರಟಗೆರೆತಾಲ್ಲೂಕಿನ ಬುಕ್ಕಪಟ್ಟಣಗ್ರಾಪಂ ವ್ಯಾಪ್ತಿಗೆ ಬರುವ ಮಹಾಲಿಂಗನಹಟ್ಟಿ ಗ್ರಾಮದಲ್ಲಿ ಸುಮಾರು 25ಕ್ಕೂ ಹೆಚ್ಚು ಮನೆಗಳು ಹೊಂದಿದ್ದು, ಈ ಗ್ರಾಮಕ್ಕೆ ಸುಮಾರು ಒಂದುವರೆ ವರ್ಷದಿಂದ ನೀರು ಪೂರೈಸುವಲ್ಲಿ ಗ್ರಾಪಂ ಹಾಗೂ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಅಧಿಕಾರಿಗಳು ವಿಫಲರಾಗಿದ್ದು, ಪ್ರತಿನಿತ್ಯ ಹೆರಜೇನಹಳ್ಳಿ ಗ್ರಾಮಕ್ಕೆ ಸುಮಾರುಒಂದು ಕಿಲೋ ದೂರ ಹೋಗಿ ನೀರುತಂದುಜೀವನ ನಡೆಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಒಂದು ವರ್ಷಗಳ ಹಿಂದೆ ಹೊಸ ಬೋರ್‌ವೆಲ್ ಹಾಕಿಸಿಕೊಡುವಂತೆ ಊರಿನಗ್ರಾಮಸ್ಥರುಗ್ರಾಪಂ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತ್ತು. ಅದರೆಇಲ್ಲಿಯವರೆಗೆಯಾವಯೊಬ್ಬ ಅಧಿಕಾರಿಗಳು

ಮಹಾಲಿಂಗನ ಹಟ್ಟಿಗ್ರಾಮಕ್ಕೆ ಹೊಸ ಬೋರ್‌ವೆಲ್ ಕೊರಸಿ ನೀರಿನ ಸಮಸ್ಯೆ ಬಗೆಹರಿಸಲುಟಾಸ್ಕ್ ಫೋರ್ಸ್ ಕಮಿಟಿಯಲ್ಲಿ ಅನುಮೋದನೆ ಪಡೆಯಲಾಗಿದೆ.

ಈ ಹಿಂದೆಕೊರಿಸಲಾಗಿದ್ದ ಬೋರ್‌ವೆಲ್‌ನಲ್ಲಿ ನೀರು ನಿಂತಿದೆ. ಜಿಪಂ ಅನುಮತಿ ಪಡೆದುಅದಷ್ಟು ಬೇಗ ಬೋರ್ ಕೊರಸಿ ನೀರಿನ ವ್ಯವಸ್ಥೆ ಮಾಡಲಾಗುವುದು.

– **ಕಾಂತರಾಜು,** ಕುಡಿಯವ ನೀರು ಮತ್ತು ನೈರ್ಮಲ್ಯ ಇಲಾಖೆ ಅಧಿಕಾರಿಕೊರಟಗೆರೆ.



## ಒಂದು ವರ್ಷದ ಹಿಂದೆ ನೀರಿನ ಸಮಸ್ಯೆ

**ಸುಮಾರು ಒಂದು ವರ್ಷದ ಹಿಂದೆ ನೀರಿನ ಸಮಸ್ಯೆ ಸರಿ ಪಡಿಸಿ ಎಂದುತಾಪಂ ಇಒ, ಗ್ರಾಪಂ ಪಿಡಿಒ, ಕುಡಿಯವ ನೀರು ಮತ್ತು ನೈರ್ಮಲ್ಯ ಇಲಾಖೆಗೆ ಲಿಖಿತ ಮೂಲಕ ಮನವಿ ಮಾಡಿದರೂಯಾವುದೆ ಪ್ರಯೋಜನವಾಗಿಲ್ಲ. ಕುಡಿಯವ ನೀರು ಮತ್ತು ನೈರ್ಮಲ್ಯ ಇಲಾಖೆಯ ಎಇಇ ಕಾಂತರಾಜುಅವರುಗ್ರಾಪಂ ಅಧಿಕಾರಿಗಳು ಆ ಗ್ರಾಮಕ್ಕೆ ನೀರು ನೀಡುತ್ತಿದ್ದಾರೆಎಂದು ಹೇಳುತ್ತಿದ್ದಾರೆ. ಅಲ್ಲಿಗೆಯಾರು ಸಹ ನೀರು ಬಿಡುತ್ತಿಲ್ಲ. ಒಂದು ವಾರದಲ್ಲಿ ಬೋರ್ ವೆಲ್ ಬರುತ್ತೆಎಂದು ಹಾರಿಕೆಉತ್ತರ ನೀಡುತ್ತಿರುವ ಅಧಿಕಾರಿಗಳು ಜನರ ಜೀವದ ಜತೆ ಚಲ್ಲಾಟ ಆಡುತ್ತಿರುವುದು ಶೋಚನೀಯ ಸಂಗತಿಯಾಗಿದೆ.**

ಇಲ್ಲಿನಜನರಿಗೆ ನೀರನ್ನ ನೀಡುವಗೋಜಿಗೆ ಹೋಗಿಲ್ಲ. ಗ್ರಾಪಂತಾಪಂ ಹಾಗೂ ಕುಡಿಯುವ ನೀರು ಮತ್ತು ನೈರ್ಮಲ್ಯಇಲಾಖೆಯ ಅಧಿಕಾರಿಗಳಿಗೆ ಗೋಗರಿದರೂಯಾವುದೇ ಪ್ರಯೋಜನವಾಗಿಲ್ಲ. ನಾವು ಈ ದೇಶದ ಪ್ರಜೆಗಳಾಗಿ ನೀರು ಕೇಳಲು ಹಕ್ಕು ಇಲ್ಲವೇ.ನಾವು ಈ ದೇಶದಲ್ಲಿ ಇದ್ದಿವಾ ಇಲ್ಲ ಬೇರೆದೇಶದಲ್ಲಿ ಇದ್ದಿವಾ ಗೊತ್ತಿಲ್ಲಎಂದು ಅಧಿಕಾರಿಗಳ ವಿರುದ್ಧಗ್ರಾಮಸ್ಥರುಆಕ್ರೋಶ ವ್ಯಕ್ತಪಡಿಸಿದರು.

**ನಮ್ಮ ಗ್ರಾಮದಲ್ಲಿ ಮನೆ ಇಲ್ಲಅದರಿಂದ ನಮ್ಮ ಜಮೀನಿನಲ್ಲಿ ಮನೆ ಕಟ್ಟಿಕೊಳ್ಳಲಾಗಿದೆ. ಗ್ರಾಪಂಗೆಕಂದಾಯ, ನೀರಿನ ಕಂದಾಯ ಸೇರಿದಂತೆ ಸರ್ಕಾರಕ್ಕೆತೆರಿಗೆ ನೀಡಲಾಗುತ್ತಿದೆ.ಅದರೆ ನಮಗೆ ರಸ್ತೆ ಮತ್ತು ನೀರಿನ ಸೌಲಭ್ಯ ನೀಡುತ್ತಿಲ್ಲ. ನಾವು ಕರ್ನಾಟಕದಲ್ಲಿ ಹುಟ್ಟಿಲ್ವಾ ಬೇರೆ ದೇಶದಲ್ಲಿ ಇದ್ದೀವಾ ನಮಗೆ ಮೂಲಸೌಕರ್ಯ ನೀಡದೇ ಅಧಿಕಾರಿಗಳು ಅನ್ಯಾಯ ಮಾಡುತ್ತಿದ್ದಾರೆ.**

**–ಗೋಪಾಲಕೃಷ್ಣ ಊರಿನಗ್ರಾಮಸ್ಥರು**

**ನನ್ನ ವಾರ್ಡಿನ್ ಮಹಾಲಿಂಗನಹಟ್ಟಿಯಲ್ಲಿಒಂದು ವರ್ಷದಿಂದ ನೀರಿನ ಸಮಸ್ಯೆಇದೆಎಂದುಗ್ರಾಪಂ ಪಿಡಿಒ, ಕುಡಿಯವ ನೀರು ಮತ್ತು ನೈರ್ಮಲ್ಯ ಇಲಾಖೆಗೆ ಅಧಿಕಾರಿಗಳು ಮತ್ತು ತಾಪಂ ಇಒ ಮೇಡಮ್ ಸ್ಥಳಕ್ಕೆ ಭೇಟಿ ನೀಡಿದ್ದಾರೆ. ಆದರೂ ಯಾವುದೇ ಪ್ರಯೋಜನವಾಗಿಲ್ಲ. ನನ್ನ ಮತದಾರರ ಸಮಸ್ಯೆ ನೋಡಿ ನನ್ನ ವೈಯಕ್ತಿಕ ಖರ್ಚನಿಂದ ಟ್ಯಾಂಕರ್ ಮೂಲಕ ನೀರನ್ನ ನೀಡುತ್ತಿದ್ದೇನೆ.**

**–ಶ್ರೀನಿವಾಸ್ ಬುಕ್ಕಪಟ್ಟಣಗ್ರಾಪಂ ಸದಸ್ಯ.**

ನಮ್ಮ ಮಹಾಲಿಂಗನಹಟ್ಟಿ ಗ್ರಾಮಕ್ಕೆ ಹೋಗ ಬೇಕಾದರೆ ಹೆರಜೇನಹಳ್ಳಿ ಗ್ರಾಮದಿಂದ ಬರಬೇಕುಆದರೆ ಗಟ್ಲಗೊಲ್ಲಹಳ್ಳಿ ಗ್ರಾಮದಿಂದ ಬರುವರಸ್ತೆತುಂಬ ಹದಗೆಟ್ಟಿದ್ದು, ಒಂದು ಬೈಕ್‌ನಲ್ಲಿ ಬರಬೇಕಾದರೂಕಷ್ಟವಾಗುತ್ತದೆ. ಇನ್ನೂಅಪಘಾತ, ಹೆರಿಗೆ ನೋವುಗಳಿಗೆ ಆಂಬ್ಯುಲೆನ್ಸ್ ಬರಲು ಸಾಧ್ಯವಾಗದಷ್ಟು ರಸ್ತೆ ಹಾಳಾಗಿದೆ. ಅನೇಕ ಬಾರಿಡಾಂಬರ್ ಹಾಕುವಂತೆ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಗ್ರಾಮಸ್ಥರುದೂರಿದರು.



# ಅಕ್ಷರ ದಿ ಸ್ಕೂಲ್‌ನಲ್ಲಿ ಮಕ್ಕಳ ವಿಜ್ಞಾನ ಮತ್ತು ವಸ್ತು ಪ್ರದರ್ಶನ

ಚೇಳೂರು : ತಾಲ್ಲೂಕಿನ ಚಿಲಕಲನೇರ್ಪು ಸಮೀಪದ ಅಕ್ಷರ ದಿ ಶಾಲೆಯಲ್ಲಿ ಮಕ್ಕಳ ವಿಜ್ಞಾನ ಪ್ರದರ್ಶನ ಇದು ಭವಿಷ್ಯದ ರಾಷ್ಟ್ರ ನಿರ್ಮಾತೃರ ಜ್ಞಾನ ದರ್ಶನ ಶಾಲೆಯಲ್ಲಿ, ಎರಡು ದಿನಗಳ ಮಕ್ಕಳ ವಿಜ್ಞಾನ ವಸ್ತು ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿತ್ತು.

ಶಾಲೆಯ ಮಕ್ಕಳು ವಿವಿಧ ವೈಜ್ಞಾನಿಕ ಉಪಕರಣಗಳ ಮಾದರಿಯನ್ನು ಸ್ವತಃ ತಯಾರಿಸಿ ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ. ಬಾಹ್ಯಾಕಾಶ ಕ್ಷೇತ್ರದ ಮಾದರಿ ಉಪಕರಣಗಳು, ೦ಖ ತಂತ್ರಜ್ಞಾನ ಮಾದರಿ, ಸ್ಮಾರ್ಟ್ ಸಿಟಿ ಪರಿಕಲ್ಪನೆ, ಅತ್ಯಾಧುನಿಕ ಡ್ರೋನ್ ಮಾದರಿಗಳು ಸೇರಿದಂತೆ ಅನೇಕ ಉಪಕರಣಗಳು ನೋಡುಗರನ್ನು ಸೆಳೆದವು. ಶಾಲೆಯ ಆಡಳಿತ ಮಂಡಳಿಯು ಈ ವಿಜ್ಞಾನ ವಸ್ತು ಪ್ರದರ್ಶನಕ್ಕೆ, ಸುತ್ತಮುತ್ತಲಿನ ಸರ್ಕಾರಿ ಶಾಲಾ ಮಕ್ಕಳಿಗೂ ಅವಕಾಶ ಕಲ್ಪಿಸಿದ್ದಕ್ಕೆ ವೀಕ್ಷಕರಿಂದ ಮೆಚ್ಚಿಗೆ ವ್ಯಕ್ತವಾಯಿತು.

ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವನೆ ಬೆಳೆಸುವುದು ಪೋಷಕರ ಮತ್ತು ಶಾಲೆಗಳ ಆದ್ಯ ಕರ್ತವ್ಯ. ಆಧುನಿಕ ಭಾರತವನ್ನು ಮುನ್ನಡೆಸಬೇಕಾದ ಜವಾಬ್ದಾರಿ ಹೊತ್ತಿರುವ ಮಕ್ಕಳು, ವಿಜ್ಞಾನ ಕ್ಷೇತ್ರದಲ್ಲಿ ದೇಶದ ಹೆಸರನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯಬೇಕಿದೆ. ಈ ದಿಸೆಯಲ್ಲಿ ಶಾಲೆಗಳಲ್ಲಿ ಹಮ್ಮಿಕೊಳ್ಳುವ ವಿಜ್ಞಾನ ಪ್ರದರ್ಶನಗಳು, ಮಕ್ಕಳಲ್ಲಿ ವಿಜ್ಞಾನ ಕ್ಷೇತ್ರದ ಕುರಿತು ಹೆಚ್ಚಿನ ಆಸಕ್ತಿಯನ್ನು ಮೂಡಿಸುತ್ತವೆ. ಎಂದು ಶಾಲಾ ಪ್ರಾಂಶುಪಾಲರಾದ ಪುಷ್ಪ ಶಾ



ಜೀ ತಿಳಿಸಿದರು

ಇದಕ್ಕೆ ಪುಷ್ಟಿ ಎಂಬಂತೆ ಶಾಲೆಯಲ್ಲಿ, ಎರಡು ದಿನಗಳ ಮಕ್ಕಳ ವಿಜ್ಞಾನ ವಸ್ತು ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿದೆ. ಶಾಲೆಯ ಮಕ್ಕಳು ವಿವಿಧ ವೈಜ್ಞಾನಿಕ ಉಪಕರಣಗಳ ಮಾದರಿಯನ್ನು ಸ್ವತಃ ತಯಾರಿಸಿ ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ. ಈ ವಸ್ತು ಪ್ರದರ್ಶನದಲ್ಲಿ ಮಕ್ಕಳು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಅನುವಾಗುವಂತೆ ಶಾಲೆಯ ವ್ಯವಸ್ಥಾಪಕ ಮಂಡಳಿಯೇ ಆರ್ಥಿಕ ಸಹಾಯ ನೀಡಿರುವುದು ವಿಶೇಷ

ಪ್ರಮುಖವಾಗಿ ಬಾಹ್ಯಾಕಾಶ ಕ್ಷೇತ್ರಕ್ಕೆ ಸಂಬಂಧಿಸಿದ ಉಪಕರಣಗಳ ಮಾದರಿಯನ್ನು ತಯಾರಿಸಿರುವ ಶಾಲಾ ಮಕ್ಕಳು, ಅತ್ಯಾಧುನಿಕ ರಾಕೆಟ್ ಮಾದರಿ, ಬಾಹ್ಯಾಕಾಶ ನೌಕೆಯ ಮಾದರಿ, ಅತ್ಯಾಧುನಿಕ ಡ್ರೋನ್ ಮಾದರಿ, ಬಾಹ್ಯಾಕಾಶ ದೂರದರ್ಶಕ ಯಂತ್ರದ ಮಾದರಿ ಸೇರಿದಂತೆ ಹಲವು ಬಗೆಯ ಉಪಕರಣಗಳ ಪ್ರದರ್ಶನ ಗಮನ ಸೆಳೆಯಿತು.

ವಸ್ತು ಪ್ರದರ್ಶನದ ವಿಶೇಷತೆ:

ವಾಸಯೋಗ್ಯ ಉತ್ತಮ ವಾತಾವರಣ ನಿರ್ಮಾಣ ಮಾಡುವ ಕುರಿತು, ಅಕ್ಷರ ದಿ ಶಾಲೆಯ ಮಕ್ಕಳು ನೀಡಿದ ವಿವರಣೆ ಕೇಳಿ ವಸ್ತು ಪ್ರದರ್ಶನ ವೀಕ್ಷಕರು ಮೆಚ್ಚುಗೆ ವ್ಯಕ್ತಪಡಿಸಿದರು. ಸುಂದರ ಭವಿಷ್ಯದ ಕುರಿತು ಮಕ್ಕಳಲ್ಲಿರುವ ಕನಸುಗಳಿಗೆ ಎಲ್ಲರೂ ಶಹಬ್ಬಾಸಗಿರಿ ನೀಡಿದರು.

ಇಷ್ಟೇ ಅಲ್ಲದೇ ಸ್ಮಾರ್ಟ್ ಸಿಟಿ ಯೋಜನೆಯ ಬಗ್ಗೆ ಮಕ್ಕಳು ಪ್ರದರ್ಶಿಸಿದ ಮಾಹಿತಿ ಈ ವಸ್ತು ಪ್ರದರ್ಶನದ ಕೇಂದ್ರ ಬಿಂದುವಾಗಿತ್ತು. ೦ಖ ತಂತ್ರಜ್ಞಾನ ಬಳಕೆ ಮತ್ತು ಅದರ ಭವಿಷ್ಯದ ಕುರಿತು ಅಕ್ಷರ ದಿ ಶಾಲೆಯ ಮಕ್ಕಳಲ್ಲಿರುವ ಅಪರಿಮಿತ ಜ್ಞಾನ ವೀಕ್ಷರನ್ನು ಸೆಳೆಯಿತು.

ವೈಫೈ ಟ್ರಾನ್ಸ್‌ಮೀಟರ್ ಮೂಲಕ ವಾಯ್ಸ್ ಕಮಾಂಡ್ ಸ್ವೀಕರಿಸಿ ಕಾರ್ಯಾಚರಣೆ ನಡೆಸುವ "ನಿಂಬಸ್" ಹೆಸರಿನ ಡ್ರೋನ್ ಕಂಡು ಮೂಗಿನ ಮೇಲೆ ಬೆರಳಿಡದವರಿಲ್ಲ. ತಂತ್ರಜ್ಞಾನ ಕ್ಷೇತ್ರದಲ್ಲಿ ಹೈಸ್ಕೂಲ್ ಶಾಲಾ ಮಕ್ಕಳ ಜ್ಞಾನಕ್ಕೆ ಎಲ್ಲರೂ ಸೈ ಎಂದರು. ಶಾಲಾ ಮಕ್ಕಳೇ ತಯಾರಿಸಿದ ವರ್ಟಿಕಲ್ ಗಾರ್ಡನ್ ಮಾದರಿ ನಗರದ ಸೌಂದರ್ಯ ಮತ್ತು ವಾತಾವರಣ ರಕ್ಷಣೆಯ ಕುರಿತು ಜನರಲ್ಲಿ ಜಾಗೃತಿ ಮೂಡಿಸಿದ್ದು ಸುಳ್ಳಲ್ಲ.

ನವೀಕರಿಸಬಹುದಾದ ಇಂಧನ ಬಳಕೆ ಮತ್ತು ಅಗತ್ಯತೆಯನ್ನು ಸಾರುವ ಮಾದರಿಯು, ಈ ಕ್ಷೇತ್ರದ ಬಗ್ಗೆ ಅರಿವಿಲ್ಲದವರಿಗೂ ಸಾಕಷ್ಟು ಮಾಹಿತಿ ಒದಗಿಸಿತು. ಕಾರ್ಬನ್ ಮುಕ್ತ ವಾತಾವರಣ ನಿರ್ಮಾಣ ಸಾಧ್ಯ ಎಂದು ಪ್ರಾಯೋಗಿಕವಾಗಿ ತೋರಿಸಿದ ಅಕ್ಷರ ದಿ ಶಾಲೆಯ ಮಕ್ಕಳಿಗೆ ವೀಕ್ಷಕರು ಧನ್ಯವಾದ ಅರ್ಪಿಸಿದ್ದು ಕಂಡುಬಂದಿತು.

ಅದರಂತೆ ಶತ್ರು ರಾಷ್ಟಗಳ ಗುಪ್ತಚರ ಉಪಗ್ರಹಗಳನ್ನು ನಾಶ ಮಾಡುವ ಸಾಮರ್ಥ್ಯವುಳ್ಳ ಕ್ಷಿಪಣಿಯ ಮಾದರಿಯು, ಭಾರತದ ಬಾಹ್ಯಾಕಾಶ ಸಾಮರ್ಥ್ಯಕ್ಕೆ ಕನ್ನಡಿ ಹಿಡಿಯಿತು. ಈ ವಿಜ್ಞಾನ ವಸ್ತು ಪ್ರದರ್ಶನದಲ್ಲಿ ಬಾರತದ ಬಾಹ್ಯಾಕಾಶ ಸಾಧನೆಯನ್ನು ತಿಳಿಸುವ ಅನೇಕ ಮಾದರಿ ಉಪಕರಣಗಳನ್ನು ಕಂಡು ವೀಕ್ಷಕರು ಸಂತಸ ವ್ಯಕ್ತಪಡಿಸಿದರು.


**ಸಾಂಸ್ಕೃತಿಕ ಕಾರ್ಯಕ್ರಮ:**

ಇನ್ನು ಶಾಲೆಯಲ್ಲಿ ಕೇವಲ ವಸ್ತು ಪ್ರದರ್ಶನ ಮಾತ್ರವಲ್ಲದೇ ಹಾಡು, ಜಾನಪದ ನೃತ್ಯ ಸೇರಿದಂತೆ ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕೂಡ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ವಿವಿಧ ತರಗತಿಯ ಮಕ್ಕಳು ತಮ್ಮ ಕಲಾ ಪ್ರದರ್ಶನ ಮಾಡಿ ಗಮನ ಸೆಳೆದರು. ಇದೇ ವೇಳೆ ಅಕ್ಷರ ದಿ ಶಾಲೆಯ ಆಡಳಿತ ಮಂಡಳಿಯು ಸುತ್ತಮುತ್ತಲಿನ ಸರ್ಕಾರಿ ಶಾಲೆಯ ಮಕ್ಕಳಿಗೆ ಮತ್ತು ಸಾರ್ವಜನಿಕರಿಗೆ ಈ ವಸ್ತು ಪ್ರದರ್ಶನ ವೀಕ್ಷಿಸುವ ಅವಕಾಶ ಕಲ್ಪಿಸಿಕೊಟ್ಟಿದ್ದು ವಿಶೇಷವಾಗಿತ್ತು.

ಎರಡು ದಿನಗಳ ವಸ್ತು ಪ್ರದರ್ಶನದ ಕುರಿತು ಮಾತನಾಡಿದ ಶಾಲೆಯ ಪ್ರಾಂಶುಪಾಲೆ ಪುಷ್ಪ ಶಾ ಜಿ ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವನೆ ಬೆಳೆಸುವ ಉದ್ದೇಶದಿಂದ ಹಮ್ಮಿಕೊಂಡಿರುವ ಎರಡು ದಿನಗಳ ವಿಜ್ಞಾನ ವಸ್ತು ಪ್ರದರ್ಶನವು ಅತ್ಯಂತ ಯಶಸ್ವಿಯಾಗಿದೆ ಎಂದು ಹೇಳಿದರು.

ಒಟ್ಟಿನಲ್ಲಿ ಅಕ್ಷರ ದಿ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿರುವ ಎರಡು ದಿನಗಳ ವಿಜ್ಞಾನ ವಸ್ತು ಪ್ರದರ್ಶನಕ್ಕೆ ಉತ್ತಮ ಸ್ಪಂದನೆ ದೊರೆತಿದ್ದು, ಭವಿಷ್ಯದ ರಾಷ್ಟ್ರ ನಿರ್ಮಾಪಕರನ್ನು ತಯಾರು ಮಾಡುವ ಅಕ್ಷರ ದಿ ಶಾಲೆಯ ಬದ್ಧತೆಯ ಬಗ್ಗೆ ಎಲ್ಲರೂ ಮೆಚ್ಚುಗೆ ವ್ಯಕ್ತಪಡಿಸಿದರು

ಈ ಸಂದರ್ಭದಲ್ಲಿ ಶಾಲಾ ಮಂಡಳಿಯ ಅಧ್ಯಕ್ಷರಾದ ಲಕ್ಷ್ಮಿ ಮರತಾಳ.ಸದಸ್ಯರಾದ ಡಿ.ಸಿ.ಚೌಡರೆಡ್ಡಿ. ಶಿಕ್ಷಕರಾದ. ಸುಧಾರಾಣಿ.ದಿವ್ಯ. ಮೀನಾ. ಪವಿತ್ರ. ರಾಘವೇಂದ್ರ. ಅಶೋಕ. ಮುಂತಾದವರು ಇದ್ದರು




# ಒತ್ತಡ ಜೀವನ ನಿರ್ವಹಣೆಗೆ ಕ್ರೀಡೆ ಸಹಕಾರಿ

**ದೇವನಹಳ್ಳಿ:** ಮಹಿಳೆಯರಿಗೆ ಮನೆ ಜವಾಬ್ದಾರಿ, ಕೆಲಸದ ನಡುವೆ ಈ ರೀತಿಯ ಕ್ರೀಡೆಗಳನ್ನು ಏರ್ಪಡಿಸುವುದರಿಂದ ಮಹಿಳೆಯರಲ್ಲಿ ಕ್ರೀಡಾ ಉತ್ಸಾಹ ಬೆಳೆದು ಒತ್ತಡದ ಜೀವನ ದೂರವಾಗುತ್ತದೆ ಎಂದು ದೇವನಹಳ್ಳಿ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಶ್ರೀನಾಥ್ ಅವರು ಹೇಳಿದ್ದಾರೆ.

ದೇವನಹಳ್ಳಿ ಟೌನ್ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಅಯೋಜಿಸಿದ್ದ ಮಹಿಳಾ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತಾಡಿದರು.

ಮಹಿಳೆಯಲ್ಲಿರುವ ಆಸಕ್ತಿಗೆ ಅನುಗುಣವಾಗಿ ವಿವಿಧ ಸ್ಪರ್ಧೆ ಏರ್ಪಡಿಸಿ ಅವರಲ್ಲಿರುವ ಜ್ಞಾನ, ಪ್ರತಿಭೆಯನ್ನು ಇತರರಿಗೆ ಗುರುತಿಸಿ ಕೊಡುತ್ತಿರುವುದು ಸಂತೋಷದ ವಿಷಯ. ಪ್ರಸ್ತುತ ದಿನಗಳಲ್ಲಿ ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿದ್ದು, ಮಹಿಳೆಯರಲ್ಲಿ ಆತ್ಮ ಸ್ಥೈರ್ಯ ಹೆಚ್ಚಿಸಲು ಸಹಕಾರ ನೀಡಬೇಕು. ಕ್ರೀಡಾ ಕ್ಷೇತ್ರದಲ್ಲಿ ಮಹಿಳೆಯರು ಉತ್ತಮ ಸಾಧನೆಗೈಯುತ್ತಿದ್ದು



ಪುರುಷನಿಗಿಂತ ಕಡಿಮೆ ಇಲ್ಲ ಎಂದು ಸಾಧನೆ ಮಾಡುತ್ತಿದ್ದಾರೆ ಎಂದರು.

ಮಹಿಳೆಯರಿಗಾಗಿ ಹಗ್ಗ ಜಗ್ಗಾಟ, ಮ್ಯೂಸಿಕಲ್ ಚೇರ್,ಮಡಿಕೆ ಹೊಡೆಯುವುದು, ಬಾಲ್‌ಇನ್ ದಿ ಬಕೆಟ್,50 ಮೀ ವಾಕ್‌ರೇಸ್, ಲೆಮನ್ ಅಂಡ್ ಸ್ಪೂನ್, ಖೋ- ಖೋ, ಕೇರಂ ಸ್ಪರ್ಧೆಗಳು ನಡೆದವು ವಿಜೇತರಿಗೆ ಬಹುಮಾನ ವಿತರಿಸಲಾಯಿತು ಹಾಗೂ ಕ್ರೀಡೆಯಲ್ಲಿ ಸಾಧನೆ ಮಾಡಿದ ಪ್ರಣತಿ ಮತ್ತು ಮಾನಸ ಅವರಿಗೆ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಯುವ ಸಬಲಿಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರಾದ ವಿಜಯಲಕ್ಷ್ಮಿ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರಾದ ನಳಿನಾ, ತಾಲ್ಲೂಕು ದೈಹಿಕ ಶಿಕ್ಷಣ ಪ್ರಬಾರಿ ವೆಂಕಟೇಶ್, ಮದ್ದೂರಪ್ಪ, ಜಿಲ್ಲೆಯ ದೈಹಿಕ ಶಿಕ್ಷಣ ಶಿಕ್ಷಕರು, ಇಲಾಖೆ ಸಿಬ್ಬಂದಿ ಹಾಗೂ ಜಿಲ್ಲೆಯ ಮಹಿಳೆಯರು ಉಪಸ್ಥಿತರಿದ್ದರು.

# ಮೆಥೋಡಿಸ್ಟ್ ಚರ್ಚ್ ಇನ್ ಇಂಡಿಯಾದ ಮುಖ್ಯಸ್ಥ ನೇಮಕ

**ಬೆಂಗಳೂರು:**ಬಿಷಪ್ ಡಾ.ಅನಿಲ್ ಕುಮಾರ್ ಜಾನ್ ಸರ್ವಂದ್ ಅವರನ್ನು ಬೆಂಗಳೂರು ಪ್ರಾದೇಶಿಕ ಸಮ್ಮೇಳನಕ್ಕೆ ಕಾನೂನುಬದ್ಧವಾಗಿ ನೇಮಕಗೊಂಡಿದ್ದಾರೆ ಎಂದು ಮೆಥೋಡಿಸ್ಟ್ ಚರ್ಚ್ ಇನ್ ಇಂಡಿಯಾ ಅಧಿಕೃತವಾಗಿ ಘೋಷಿಸಿದೆ.

ಬಿಷಪ್ ಡಾ.ಅನಿಲ್ ಕುಮಾರ್ ಅವರು, ಸೆರಾಂಪೂರ್ ಕಾಲೇಜಿನ ಸೆನೆಟ್ ಮಾಸ್ಟರ್ ಸತ್ತಾಲ್ ಕ್ರಿಶ್ಚಿಯನ್ ಆಶ್ರಮದ ಮುಖ್ಯ ಅಚಾರ್ಯರಾಗಿ, ಕೌನ್ಸಿಲ್ ಆಫ್ ಮೆಡಿಕಲ್ ವರ್ಕ್ ಅಧ್ಯಕ್ಷರಾಗಿ, ಕೌನ್ಸಿಲ್ ಆಫ್ ವುಮೆನ್ಸ್ ವರ್ಕ್ ಅಧ್ಯಕ್ಷರಾಗಿ ಮತ್ತು ವರ್ಲ್ಡ್ ಕೌನ್ಸಿಲ್ ಆಫ್ ಚರ್ಚ್ ಕೇಂದ್ರ ಸಮಿತಿ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ

ಪ್ರಸ್ತುತ ಬಿಷಪ್ ಎನ್.ಎಲ್ ಕರ್ಕರೆ ಅವರಿಗೆ 77 ವರ್ಷವಾಗಿದ್ದು, ಇನ್ನೂ ತಮ್ಮ ಸ್ಥಾನವನ್ನು ಬಿಟ್ಟುಕೊಡದೆ ಕಾನೂನು ಬಾಹಿರವಾಗಿ ತಮ್ಮ ಹುದ್ದೆಯಲ್ಲಿ ಮುಂದುವರೆಯಬೇಕೆಂಬ ಹುನ್ನಾರ ನಡೆಸುತ್ತಿದ್ದಾರೆ, ಬಿಷಪ್ ಕರ್ಕರೆ ಅವರಿಗೆ 70 ವರ್ಷ ವಯಸ್ಸನ್ನು ದಾಟಿದ ನಂತರವೂ ಅಧಿಕಾರದಲ್ಲಿ ಮುಂದುವರಿದ ಅವರು ಕಾರ್ಯಕಾರಿ ಮಂಡಳಿಯ ನಿರ್ಣಯದ ಪ್ರಕಾರ, ಅವರು ಇನ್ನು ಮುಂದೆ ಬೆಂಗಳೂರು ಪ್ರಾದೇಶಿಕ ಸಮ್ಮೇಳನದಲ್ಲಿ ಯಾವುದೇ ಅಧಿಕೃತ ಸ್ಥಾನ, ಬಿರುದು ಅಥವಾ ಅಧಿಕಾರವನ್ನು ಹೊಂದಿರುವುದಿಲ್ಲ ಅವರು ಬೆಂಗಳೂರು ಪ್ರಾದೇಶಿಕ ಸಮ್ಮೇಳನ ಅಥವಾ ಎಂಸಿಐ ಅಡಿಯಲ್ಲಿ ಯಾವುದೇ ಸಂಸ್ಥೆ, ಮಂಡಳಿ, ಕೌನ್ಸಿಲ್ ಅಥವಾ ಟ್ರಸ್ಟ್‌ನ ಅಧ್ಯಕ್ಷರು ಅಥವಾ ಮುಖ್ಯಸ್ಥರಲ್ಲ ಹಾಗೂ ಇನ್ನಿತರ ರೀತಿಯಲ್ಲಿ ದಾರಿ ತಪ್ಪಿಸುವ ಯಾವುದೇ ಹೇಳಿಕೆಗಳು ಸುಳ್ಳು ಮತ್ತು ಸತ್ಯಕ್ಕೆ ದೂರವಾದವುಗಳು ಎಂದು ಬೆಂಗಳೂರು ಪ್ರಾದೇಶಿಕ ಸಮ್ಮೇಳನ ಮೆಥೋಡಿಸ್ಟ್ ಚರ್ಚ್ ಇನ್ ಇಂಡಿಯಾ ಕಾರ್ಯಕಾರಿ ಕಾರ್ಯದರ್ಶಿ ರೆವ್. ಡೇವಿಡ್ ನಥಾನಿಯಲ್ ಪ್ರೆಸ್‌ಕ್ಲಬ್ ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

# ರಾಜ್ಯದ ಕೈಗಾರಿಕಾ ನೀತಿಯಲ್ಲಿ ಪ್ರವಾಸೋದ್ಯಮ ಸೇರ್ಪಡೆ: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್

ಬೆಂಗಳೂರು:"ಕರ್ನಾಟಕ ವಿವಿಧ ಆಯಾಮಗಳನ್ನು ಹೊಂದಿರುವ ರಾಜ್ಯ. ಕರ್ನಾಟಕ ಇಡೀ ಭಾರತದಲ್ಲಿಯೇ ವೈವಿಧ್ಯಮಯ ಪ್ರವಾಸೋದ್ಯಮಕ್ಕೆ ತಕ್ಕನಾಗಿದೆ. ಈ ಕಾರಣಕ್ಕೆ ನಮ್ಮ ಕೈಗಾರಿಕಾ ನೀತಿಯಲ್ಲಿ ಪ್ರವಾಸೋದ್ಯಮವನ್ನು ಪ್ರಮುಖವಾಗಿ ಸೇರ್ಪಡೆ ಮಾಡಿದ್ದೇವೆ. ಸಾಕಷ್ಟು ಪ್ರೋತ್ಸಾಹ ನೀಡುತ್ತಾ ಇದ್ದೇವೆ" ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಹೇಳಿದರು.

ಬೆಂಗಳೂರಿನಲ್ಲಿ ರಾಷ್ಟ್ರೀಯ ಪ್ರವಾಸ ನಿರ್ವಹಣೆಗಾರರ ಸಭೆಯನ್ನು ಉದ್ದೇಶಿಸಿ ಡಿಸಿಎಂ ಡಿ ಕೆ ಶಿವಕುಮಾರ್ ಅವರು ಶುಕ್ರವಾರ ಮಾತನಾಡಿದರು.

"ನೈಸರ್ಗಿಕವಾಗಿಯೂ ನಮ್ಮ ರಾಜ್ಯ ವೈವಿಧ್ಯತೆಯಿಂದ ಕೂಡಿದೆ. ಬಂದರು, 350 ಕಿ.ಮೀ. ಉದ್ದದ ಸಮುದ್ರ ತೀರ, ಪಶ್ಚಿಮ ಘಟ್ಟಗಳ ಸಾಲು, ಮಲೆನಾಡು, ಬಯಲು ಪ್ರದೇಶ, ನದಿಗಳು, ವಿವಿಧ ಭಾಷೆ, ಜನರು, ಪ್ರಾಣಿ ಸಂಕುಲ, ಪಾರಂಪರಿಕ ತಾಣಗಳು ಹೀಗೆ ಹಲವಾರು ಉದಾಹರಣೆಗಳು ಸಿಗುತ್ತವೆ" ಎಂದರು.

"ಇಡೀ ಜಗತ್ತು ಬೆಂಗಳೂರನ್ನು ಗಮನಿಸುತ್ತಿದೆ. ಬೆಂಗಳೂರಿನ ಮೂಲಕ ಭಾರತ ದರ್ಶನ ಮಾಡಲಾಗುತ್ತಿದೆ. ಸಿಲಿಕಾನ್ ಸಿಟಿಯಾಗಿ ಬೆಳೆದಿದೆ, ಶಿಕ್ಷಣ, ನವೋದ್ಯಮ ಮತ್ತು ವೈದ್ಯಕೀಯದ ಹಬ್ ಆಗಿ ಬೆಳೆದಿದೆ, ಬೆಳೆಯುತ್ತಿದೆ. ರಾಜ್ಯ ರಾಜಧಾನಿಗೆ ತನ್ನದೇ ಆದ ಇತಿಹಾಸವಿದೆ. ನಮ್ಮ ಪರಂಪರೆ ನಮ್ಮನ್ನು ಕಾಪಾಡುತ್ತಿದೆ" ಎಂದು ತಿಳಿಸಿದರು.

"ಎಂಜಿನಿಯರ್ ಗಳು, ತಂತ್ರಜ್ಞಾನಿಗಳನ್ನು ನಮ್ಮ ಬೆಂಗಳೂರು ಇಡೀ ಪ್ರಪಂಚಕ್ಕೆ ಕೊಡುಗೆ ನೀಡುತ್ತಿದೆ. 1904 ರಲ್ಲಿ ಇಡೀ ಏಷ್ಯಾದಲ್ಲಿಯೇ ಮೊದಲು ವಿದ್ಯುತ್ ದೀಪ ಬೆಳಗಿದ ಭೂಮಿ ನಮ್ಮದು. ಇಸ್ರೋ, ಐಐಎಸ್, ಅತ್ಯಮೂಲ್ಯ ಕೈಗಾರಿಕೆಗಳು ಸ್ಥಾಪನೆಯಾಗಿದ್ದು ಇಲ್ಲಿ. ನಮ್ಮ ಕರ್ನಾಟಕವನ್ನು ಕೇವಲ ರಾಜ್ಯವಾಗಿ ನೋಡಬಾರದು. ಸಾಂಸ್ಕೃತಿಕ ವೈವಿಧ್ಯತೆಯಿಂದ ಕೂಡಿದ ಶ್ರೀಮಂತ ಸಂಸ್ಕೃತಿಯ ಪ್ರದೇಶ"



ಎಂದು ಹೇಳಿದರು.

"ಪ್ರಪಂಚದ ನಾನಾ ಭಾಗಗಳಿಂದ ಅಥಿತಿಗಳು ಕರ್ನಾಟಕದ ವೈಭವವನ್ನು ಕಣ್ತುಂಬಿಕೊಳ್ಳಲು ಬಂದಿದ್ದೀರಿ. ನೀವು ನಮ್ಮ ರಾಜ್ಯದ ಮುಂದಿನ ರಾಯಭಾರಿಗಳು ಎಂದರೆ ಅತಿಶಯೋಕ್ತಿಯಲ್ಲ" ಎಂದರು.

"ಸುಮಾರು 30- 40 ವರ್ಷಗಳ ಹಿಂದೆ ಆನೆಗಳನ್ನು ಖೆಡ್ಡಾಕ್ಕೆ ಬೀಳಿಸಿ ಪಳಗಿಸುವ ಸಂಸ್ಕೃತಿ ಮೈಸೂರು ಸೇರಿದಂತೆ ಇತರೇ ಭಾಗದಲ್ಲಿತ್ತು. ಗೋಲ್ ಗುಂಬಜ್, ಬಾದಾಮಿ, ಹಂಪಿಯ ವೈಭವ, ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಬೀದಿಗಳಲ್ಲಿ ಮುತ್ತು ರತ್ನಗಳನ್ನು ಮಾರಾಟ ಮಾಡುತ್ತಿದ್ದರು" ಎಂದು ಹೇಳಿದರು.

"ಪ್ರವಾಸೋದ್ಯಮಕ್ಕೆ ನಮಗೆ ಪ್ರಾಮಾಣಿಕವಾಗಿ ಹೂಡಿಕೆ ಮಾಡುವ ಹೂಡಿಕೆದಾರರ ಅಗತ್ಯವಿದೆ. ನಮ್ಮ ಅಧಿಕಾರಿಯೊಬ್ಬರು ಹೇಳುತ್ತಿದ್ದರು. ಇಡೀ ಪ್ರಪಂಚದಲ್ಲಿ ಪ್ರವಾಸೋದ್ಯಮ ಅತ್ಯಂತ ಹೆಚ್ಚು ಉದ್ಯೋಗ ಸೃಷ್ಟಿ ಮಾಡುವುದರಲ್ಲಿ ಎರಡನೇ ಸ್ಥಾನದಲ್ಲಿದೆ. ಅನೇಕ ದೇಶಗಳು ಪ್ರವಾಸೋದ್ಯಮದಿಂದಲೇ ಬದುಕಿವೆ. ನಾನು ಸಹ ಪ್ರಪಂಚದ ನಾನಾ ಕಡೆ ಪ್ರವಾಸ ಮಾಡುತ್ತಾ ಇರುತ್ತೇನೆ ಈ ಅನುಭವ ನನಗೂ ಆಗಿದೆ" ಎಂದರು.

"ಪ್ರವಾಸೋದ್ಯಮದಲ್ಲಿ ಹೂಡಿಕೆ ಮಾಡುವವರು ಬೆಂಗಳೂರು ಹೊರಗೆ ಹೆಚ್ಚು ಗಮನಹರಿಸಿ. ನಿಮಗೆ ನಿಮ್ಮ ಮೊಬೈಲ್ ಮೂಲಕವೇ ಇಡೀ ಕರ್ನಾಟಕದ ಮಾಹಿತಿ ಸಿಗುತ್ತದೆ. ಆದ ಕಾರಣ ನೀವೆ ಪರೀಕ್ಷೆ ಮಾಡಿ, ನೀವೆ ನಮ್ಮ ಬಗ್ಗೆ ನಿರ್ಧಾರ ಮಾಡಬಹುದು. ಅವಕಾಶವನ್ನು ಬಳಸಿಕೊಳ್ಳಿ. ನೀವು ಬೆಳೆದರೆ ರಾಜ್ಯ ಬೆಳೆಯುತ್ತದೆ. ಆರ್ಥಿಕವಾಗಿ ನೀವು ಸಬಲರಾದರೆ ದೇಶ ಹಾಗೂ ರಾಜ್ಯ ಬಲವಾಗುತ್ತವೆ" ಎಂದು ಹೇಳಿದರು.

"ಪ್ರವಾಸೋದ್ಯಮ ಇಲಾಖೆ ಉತ್ತಮ ಅಧಿಕಾರಿಗಳನ್ನು ಹೊಂದಿದೆ. ಈ ಇಲಾಖೆಯ ಯುವ ಅಧಿಕಾರಿಗಳು ಜವಾಬ್ದಾರಿ ಹೊತ್ತುಕೊಂಡು ಕಾರ್ಯಕ್ರಮ ನಡೆಸಿದ್ದಾರೆ. ಸಚಿವರಾದ ಎಚ್.ಕೆ.ಪಾಟೀಲ್ ಅವರಿಗೆ ಚುನಾವಣಾ ಕಾರ್ಯ ನಿಮಿತ್ತ ನಿಮ್ಮಜೊತೆ ಕಾಲ ಕಳೆಯಲು ಸಾಧ್ಯವಾಗಿಲ್ಲ. ಆದರೆ ನಾವು ನಿಮ್ಮ ಜೊತೆ ಸದಾ ಇರುತ್ತೇವೆ" ಎಂದರು.

# ಸುಧಾರಿತ ತಂತ್ರಜ್ಞಾನದಲ್ಲಿ ಸಹಕಾರ ಅತ್ಯಗತ್ಯ ಎಂದು ಒತ್ತಿ ಹೇಳಿದ ಸಚಿವರು

**ನವದೆಹಲಿ:** ಎಲೆಕ್ಟ್ರಿಕ್ ವಾಹನ ಹಾಗೂ ಉಕ್ಕು ಕ್ಷೇತ್ರದಲ್ಲಿ ಹೂಡಿಕೆ ಹಾಗೂ ಸುಧಾರಿತ ತಂತ್ರಜ್ಞಾನ ಆಳವಡಿಕೆ ಹಾಗೂ ವಾಯು ಮಾಲಿನ್ಯವನ್ನು ಗಣಣೀಯವಾಗಿ ತಗ್ಗಿಸುವ ನಿಟ್ಟಿನಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಯುರೋಪ್ ಒಕ್ಕೂಟದ ಜತೆ ಮಹತ್ವದ ಮಾತುಕತೆ ನಡೆಸಿದರು.

ನವದೆಹಲಿಯ ತಮ್ಮ ಸಚಿವಾಲಯದ ಕಚೇರಿಯಲ್ಲಿ ಶುಕ್ರವಾರ ಯುರೋಪ್ ಒಕ್ಕೂಟದ ಕೈಗಾರಿಕಾ ಕಾರ್ಯತಂತ್ರ ವಿಭಾಗದ ಕಾರ್ಯಕಾರಿ ಉಪಾಧ್ಯಕ್ಷ ಸ್ಟೀಫನ್ ಸೆಜರ್ನೆ ಅವರ ನೇತೃತ್ವದ ನಿಯೋಗದ ಜತೆ ಸಚಿವರು ಮಾತುಕತೆ ನಡೆಸಿದರು.

ಎರಡೂ ಕ್ಷೇತ್ರಗಳಲ್ಲಿ ಸುಸ್ಥಿರತೆ, ಹೂಡಿಕೆ ಮತ್ತು ತಾಂತ್ರಿಕ ಪ್ರಗತಿಗಳ ಮೇಲೆ ತಮ್ಮ ಚರ್ಚೆಯನ್ನು ಕೇಂದ್ರೀಕರಿಸಿದ ಸಚಿವರು; ಉಕ್ಕು ಮತ್ತು ಭಾರೀ ಕೈಗಾರಿಕೆಗಳ ವಲಯದಲ್ಲಿ ಭಾರತ ಮತ್ತು ಯುರೋಪ್ ಒಕ್ಕೂಟದ ನಡುವಿನ ಸಹಕಾರವನ್ನು ಗಾಢವಾಗಿಸುವ ಬಗ್ಗೆ ಒತ್ತಿ ಹೇಳಿದರು.

ಚರ್ಚೆಯ ಪ್ರಮುಖ ಮುಖ್ಯಾಂಶಗಳು:

* ಎಲೆಕ್ಟ್ರಿಕ್ ವಾಹನ (ಇವಿ) ತಯಾರಿಕೆಯಲ್ಲಿ ಹೂಡಿಕೆ: ಜಾಗತಿಕ ವಾಹನ ತಯಾರಕರಿಗೆ ಕಸ್ಟಮ್ ಸುಂಕ ಕಡಿತ ಮತ್ತು ಪ್ರೋತ್ಸಾಹ ನೀಡುವಲ್ಲಿ ಹೆಚ್ಚು ಉತ್ತೇಜನ ಕೊಡುತ್ತಿದ್ದು, ಭಾರತದಲ್ಲಿ ಎಲೆಕ್ಟ್ರಿಕ್ ಕಾರುಗಳ ಉತ್ಪಾದನೆಯ ಯೋಜನೆಯಲ್ಲಿ ಹೂಡಿಕೆ ಮಾಡುವಂತೆ ಕೇಂದ್ರ ಸಚಿವರು ಯುರೋಪ್ ಇವಿ ಕಂಪನಿಗಳಿಗೆ ಮುಕ್ತ ಆಹ್ವಾನ ನೀಡಿದರು.

"ಭಾರತದ ಆಟೋಮೊಬೈಲ್ ಕ್ಷೇತ್ರವು ವೇಗವಾಗಿ ವಿಸ್ತರಿಸುತ್ತಿದೆ ಮತ್ತು ಈ ಪರಿವರ್ತನೆಯ ದಿಕ್ಕಿನಲ್ಲಿ ವೇಗವಾಗಿ ಹೆಜ್ಜೆ ಇಡುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಜಾಗತಿಕ ವೇದಿಕೆಗಳಲ್ಲಿ ನುಡಿದಂತೆ, ದೇಶಿಯವಾಗಿ ವಾಯು ಮಾಲಿನ್ಯವನ್ನು ತಗ್ಗಿಸಿ ತಾಪಮಾನ ನಿಯಂತ್ರಣಕ್ಕೆ ಕೊಡುಗೆ ನೀಡಲು ಇವಿ ಕ್ಷೇತ್ರದಲ್ಲಿ ಯುರೋಪ್ ಕಂಪನಿಗಳನ್ನು ಪ್ರೋತ್ಸಾಹಿಸುತ್ತಿದ್ದೇವೆ" ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಯುರೋಪ್ ನಿಯೋಗಕ್ಕೆ ಹಳಿದರು.

**ಎಲೆಕ್ಟ್ರಿಕ್ ವಾಹನ ಬ್ಯಾಟರಿಗಳಲ್ಲಿ ತಂತ್ರಜ್ಞಾನ ಅಭಿವೃದ್ಧಿ:** ಯುರೋಪ್ ನಿಯೋಗವು ಇಗಿ ಬ್ಯಾಟರಿ ತಯಾರಿಕೆಯ ಬಗ್ಗ ಹೆಚ್ಚು ಆಸಕ್ತಿ ತೋರಿದೆ. ಜಂಟಿ ಸಂಶೋಧನೆ ಮತ್ತು ನಾವೀನ್ಯತೆಗೆ ಬೆಂಬಲ ಕೊಡುವುದಾಗಿ ಭರವಸೆ ನೀಡಿತು. ಈ ನಿಟ್ಟಿನಲ್ಲಿ ನಿಯೋಗದ ಜತೆ ಸಚಿವರು ಮಾತುಕತೆ ನಡೆಸಿದರು.

* ಬ್ಯಾಟರಿ ತಂತ್ರಜ್ಞಾನಗಳಲ್ಲಿ ಪ್ರಮಾಣೀಕರಣ: ತಡೆರಹಿತ ವ್ಯಾಪಾರ ಮತ್ತು ತಾಂತ್ರಿಕ ವಿನಿಮಯವನ್ನು ಸುಗಮಗೊಳಿಸಲು, ಯುರೋಪ್ ಒಕ್ಕೂಟ ಮತ್ತು ಭಾರತದ ನುವೆ ಮತ್ತಷ್ಟು ಗಾಢವಾದ ಬಾಂಧವ್ಯ ಹೆಚ್ಚಿಸುವ ಬಗ್ಗೆ, ಎರಡೂ ಕಡೆ ಹೊಂದಾಣಿಕೆಯನ್ನು ಸಕ್ರಿಯಗೊಳಿಸುವುದಕ್ಕಾಗಿ ಬ್ಯಾಟರಿ



ಘಟಕಗಳು ಮತ್ತು ತಂತ್ರಜ್ಞಾನಗಳಲ್ಲಿ ಏಕರೂಪದ ಮಾನದಂಡಗಳನ್ನು ಅಭಿವೃದ್ಧಿಪಡಿಸುವ ಬಗ್ಗೆಯೂ ಸಭೆಯಲ್ಲಿ ಸಮಾಲೋಚನೆ ನಡೆಸಲಾಯಿತು.

* ಗ್ರೀನ್ ಸ್ಟೀಲ್ ಉತ್ಪಾದನೆಯಲ್ಲಿ ಭಾರತ- ಯುರೋಪ್ ಒಕ್ಕೂಟದ ಪಾಲುದಾರಿಕೆ: ಸುಸ್ಥಿರ ಕೈಗಾರಿಕಾ ಅಭಿವೃದ್ದಿಯ ಬಗ್ಗೆ ಪರಸ್ಪರ ಸಹಮತ ವ್ಯಕ್ತವಾಗಿದ್ದು, ಗ್ರೀನ್ ಸ್ಟೀಲ್ ಉತ್ಪಾದನೆಯಲ್ಲಿ ಜಾಗತಿಕ ನಾಯಕತ್ವ ವಹಿಸುವುದು ಭಾರತದ ಬದ್ಧತೆ ಆಗಿದೆ ಎಂದು ಕೇಂದ್ರ ಸಚಿವ ಕುಮಾರಸ್ವಾಮಿ ಅವರು ಯುರೋಪ್ ನಿಯೋಗಕ್ಕೆ ಒತ್ತಿ ಹೇಳಿದರು.

ಗ್ರೀನ್ ಸ್ಟೀಲ್ ಉತ್ಪಾದನೆಯಲ್ಲಿ ತಾಂತ್ರಿಕ ಅಗತ್ಯಗಳ ಪೂರೈಕೆ ಮತ್ತು ಸಂಶೋಧನೆಗೆ ಹೆಚ್ಚಿನ ಸಹಯೋಗ ಹೊಂದುವ ಭಾರತದ ಆಕಾಂಕ್ಷೆಯನ್ನು ಸಚಿವರು ಪ್ರಬಲವಾಗಿ ಪ್ರತಿಪಾದಿಸಿದರು. "ಹಸಿರು ಪರಿವರ್ತನೆಯತ್ತ ಒಂದು ಹೆಗ್ಗುರುತಾಗಿ, ಭಾರತವು ಗ್ರೀನ್ ಸ್ಟೀಲ್ ಅನ್ನು ಜಾಗತಿಕ ವೇದಿಕೆಗಳಲ್ಲಿ ಪ್ರಬಲವಾಗಿ ಪ್ರತಿಪಾದಿಸಿದ ಮೊದಲ ದೇಶವಾಗಿದೆ ಮತ್ತು ಡಿಸೆಂಬರ್ 2024ರಲ್ಲಿ 'ಗ್ರೀನ್ ಸ್ಟೀಲ್ ಟ್ಯಾಕ್ಸಾನಮಿ' ಯನ್ನು ಬಿಡುಗಡೆ ಮಾಡಿದೆ. ನಾವು ಜಾಗತಿಕ ಮಟ್ಟದಲ್ಲಿ ಈ ಪರಿವರ್ತನೆಗೆ ಚಾಲನೆ ನೀಡಿದ್ದೇವೆ" ಎಂದು ಉಕ್ಕು ಸಚಿವರಾದ ಕುಮಾರಸ್ವಾಮಿ ಅವರು ಹೇಳಿದರು.

ಯುರೋಪ್ ನಿಯೋಗವು ಗ್ರೀನ್ ಸ್ಟೀಲ್ ಉತ್ಪಾದನೆಯಲ್ಲಿ ಭಾರತದ ಪ್ರಗತಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಸಿತಲ್ಲದೆ, ಗ್ರೀನ್ ಸ್ಟೀಲ್‌ಗೆ ಜಾಗತಿಕ ಮಾರುಕಟ್ಟೆಯನ್ನು ರೂಪಿಸುವ ಅಗತ್ಯವನ್ನು ಒತ್ತಿಹೇಳಿತು. ನೀತಿಯ ಚೌಕಟ್ಟುಗಳು, ಹೂಡಿಕೆ ಮತ್ತು ಪರಿಸರಪೂರಕ ಉಕ್ಕು ತಯಾರಿಕೆಯ ಅಳವಡಿಕೆಯನ್ನು ವಿಸ್ತರಿಸುವಲ್ಲಿ ಜಂಟಿ ಉಪಕ್ರಮಗಳ ಪಾತ್ರವನ್ನು ಎರಡೂ ದೇಶಗಳು ಒತ್ತಿ ಹೇಳಿದವು.

ಶೈಕ್ಷಣಿಕ ಮತ್ತು ಕೈಗಾರಿಕಾ ಸಹಯೋಗದಲ್ಲಿಯೂ ಭಾರತದ ಜತೆ ಕೆಲಸ ಮಾಡಲು ಯುರೋಪ್ ಒಕ್ಕೂಟ ಉತ್ಸುಕವಾಗಿದ್ದು, ಭವಿಷ್ಯದ ತಂತ್ರಜ್ಞಾನಗಳ ಅಭಿವೃದ್ಧಿಗಾಗಿ, ವಿಶೇಷವಾಗಿ ಇಂಗಾಲವನ್ನು ಕಡಿಮೆ ಹೊರಸೂಸುವ ಉಕ್ಕಿನ ಉತ್ಪಾದನೆ, ಇಂಗಾಲದ ನಿಯಂತ್ರಣ ಮತ್ತು ಸುಧಾರಿತ ಉತ್ಪಾದನಾ ತಂತ್ರಗಳಲ್ಲಿ ಎರಡೂ ಪ್ರದೇಶಗಳಲ್ಲಿ ಶೈಕ್ಷಣಿಕ ಮತ್ತು ಕೈಗಾರಿಕೆಗಳ ನಡುವಿನ ಸಹಕಾರವನ್ನು ಹೆಚ್ಚಿಸುವಲ್ಲಿ ಪರಸ್ಪರ ಸಹಮತ ವ್ಯಕ್ತವಾಯಿತು.

**ಹಸಿರು ಭವಿಷ್ಯಕ್ಕಾಗಿ ಒಗ್ಗಟ್ಟಿನ ದುಡಿಮೆ:**

ಭಾರತ- ಯುರೋಪ್ ಒಕ್ಕೂಟದ ಕೈಗಾರಿಕಾ ಸಹಯೋಗವನ್ನು ಬಲಪಡಿಸುವ ಬದ್ಧತೆಯೊಂದಿಗೆ ಉನ್ನತ ಮಟ್ಟದ ಸಭೆಯು ಮುಕ್ತಾಯವಾಯಿತು. "ಒಟ್ಟಾಗಿ, ನಾವು ಎಲ್ಲರಿಗೂ ಹಸಿರು ಮತ್ತು ಹೆಚ್ಚು ಆಶಾದಾಯಕವಾದ ಭವಿಷ್ಯವನ್ನು ಕಂಡುಕೊಳ್ಳಬೇಕು" ಎಂದು ಕೇಂದ್ರ ಸಚಿವರು ಹೇಳಿದರಲ್ಲದೆ, ಭಾರತದಲ್ಲಿ ವಿಪುಲವಾಗಿ ಬೆಳೆಯುತ್ತಿರುವ ಉಕ್ಕು, ಎಲೆಕ್ಟ್ರಿಕ್ ವಾಹನ ಹಾಗೂ ಎಲೆಕ್ಟ್ರಿಕ್ ಬ್ಯಾಟರಿ ಉದ್ಯಮಗಳಲ್ಲಿ ಹೂಡಿಕೆ ಮಾಡಲು ಯುರೋಪಿಯನ್ ಉದ್ಯಮಿದಾರರನ್ನು ಮುಕ್ತವಾಗಿ ಆಹ್ವಾನಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರ ಮಹತ್ವಾಕಾಂಕ್ಷೆಯ ವಿಕಸಿತ ಭಾರತ 2047 ಮತ್ತು ಆತ್ಮನಿರ್ಭರ ಭಾರತ ಪರಿಕಲ್ಪನೆಗಳ ಅಡಿಯಲ್ಲಿ ಕೈಗಾರಿಕಾ ಬೆಳವಣಿಗೆಗೆ ಭಾರತದ ಕಾರ್ಯತಂತ್ರದ ದೃಷ್ಟಿಯೊಂದಿಗೆ, ಭಾರತ ಮತ್ತು ಯುರೋಪಿಯನ್ ಒಕ್ಕೂಟದ ನಡುವಿನ ಪಾಲುದಾರಿಕೆಯು ಸುಸ್ಥಿರ ಅಭಿವೃದ್ಧಿ ಮತ್ತು ತಾಂತ್ರಿಕ ಪ್ರಗತಿಗೆ ಹೊಸ ಅವಕಾಶಗಳನ್ನು ಸೃಷ್ಟಿಸಲು ಸಿದ್ಧವಾಗಿದೆ ಎಂದು ಸಚಿವ ಕುಮಾರಸ್ವಾಮಿ ಯುರೋಪ್ ಒಕ್ಕೂಟಕ್ಕೆ ಒತ್ತಿ ಹೇಳಿದರು.

ಸಭೆಯಲ್ಲಿ ಭಾರತದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವಾಲಯಗಳ ಉನ್ನತ ಅಧಿಕಾರಿಗಳು, ಯುರೋಪ್ ಒಕ್ಕೂಟದ ಉನ್ನತ ಅಧಿಕಾರಿಗಳು ಭಾಗಿಯಾಗಿದ್ದರು.

# ಮತ್ತೆ ಕಣ್ಣ ಮುಂದೆ ಕನಕ

ಈ ಸೋಷಿಯಲ್ ಮೀಡಿಯಾದಲ್ಲಿ ಯಾರು ಯಾವಾಗ ಪ್ರತ್ಯಕ್ಷವಾಗ್ತಾರೆ, ಯಾರು ಯಾವಾಗ, ಎಷ್ಟೋ ವರ್ಷಗಳ ಮೇಲೆ ಮತ್ತೆ ಕಣ್ಣಿಗೆ ಬೀಳ್ತಾರೆ ಅಂತ ಹೇಳೋದಕ್ಕೆ ಆಗಲ್ಲ.. ಈಗ್ಯಾಕೆ ಈ ಸಂಗತಿ ಅಂದ್ರೆ...

ನಟಿ ಶಿಲ್ಪಾ ಅವರು 2004ರಲ್ಲಿ ತೆರೆಗೆ ಬಂದ ಕನ್ನಡ ಸಿನಿಮಾ 'ಪಾಂಡವ' ಬಳಿಕ ಮತ್ತೆ ಕನ್ನಡಿಗರ ಕಣ್ಣಿಗೆ ಬಿದ್ದಿರಲಿಲ್ಲ. ಆದರೆ, ಇದೀಗ ಸೋಷಿಯಲ್ ಮೀಡಿಯಾದಲಲ್ಲಿ ಮಲಯಾಳಂ ನಟಿಯ ವಿಡಿಯೋವೊಂದು ವೈರಲ್ ಆಗ್ತಿದೆ.

ಹೌದು, ಖಾಸಗಿ ಯೂಟ್ಯೂಬ್ ಚಾನೆಲ್‌ನ ವಿಡಿಯೋ ಒಂದರಲ್ಲಿ 'ಜನುಮದ ಜೋಡಿ' ಚಿತ್ರದ ಬೆಡಗಿ ಶಿಲ್ಪಾ ಅವರು ವೈರಲ್ ಆಗ್ತಿದಾರೆ.. ಈ ವಿಡಿಯೋದಲ್ಲಿ ಅವರು ಕೆಲವು ಸ್ನೇಹಿತೆಯರೋ ಅಥವಾ ನೆಂಟರ ಜೊತೆಗೋ ಫೋಟೋವನ್ನು ಸೆಲ್ಫೀ ಕ್ಲಿಕ್ಕಿಸಿಕೊಂಡು ಖುಷಿ ಪಟ್ಟಿದ್ದಾರೆ. ಈ ಶಾರ್ಟ್ ಇದೀಗ ಸೋಷಿಯಲ್ ಮೀಡಿಯಾದಲ್ಲಿ ಭಾರೀ ವೈರಲ್ ಆಗ್ತಿದೆ. ತುಂಬಾ ದಿನಗಳಿಂದ ನೋಡದೇ ಇದ್ದ ನಟಿ ಶಿಲ್ಪಾರನ್ನು ಅವರ ಫ್ಯಾನ್ಸ್ ನೋಡಿ ಈಗ ಖುಷಿ ಅನುಭವಿಸುತ್ತಿದ್ದಾರೆ.



ಆ ವಿಡಿಯೋದಲ್ಲಿ ಈ ಹಾಡು ಕೂಡ ಗಮನ ಸೆಳೆಯುತ್ತಿದೆ. ನೀನು ಬರದೇ ಗುಡಿ ತುಂಬಲ್ಲಾ.. ನೀನು ಬರದೇ ಮನೆ ತುಂಬಲ್ಲಾ.. ನೀನು ಬರದೇ ಹಾಲು ಉಕ್ಕಲ್ಲಾ.. ಹೂವಂತ ಹೆಣ್ಣೆ ಹೂವಂತ ಹೆಣ್ಣೇ..' ಎಂಬ ಹಾಡು ಅದು.. ಅಂದಹಾಗೆ, 'ಜನುಮದ ಜೋಡಿ' ಶಿವರಾಜ್‌ಕುಮಾರ್ ನಾಯಕತ್ವದ ಬ್ಲಾಕ್ ಬಸ್ಟರ್ ಚಿತ್ರ. ಅದರಲ್ಲಿ ಶಿವಣ್ಣನಿಗೆ ಜೋಡಿಯಾಗಿ ನಟಿ ಶಿಲ್ಪಾ ನಟಿಸಿದ್ದಾರೆ.

ಕೆಲವರಿಗೆ ಶಿಲ್ಪಾ ಅಂದ್ರೆ ಗೊತ್ತಾಗ್ಲಿಕ್ಕಿಲ್ಲ, ಅದ್ರೆ ಕನಕ ಅಂದ್ರೆ ಗೊತ್ತಾಗುತ್ತೆ.. ಅಷ್ಟರಮಟ್ಟಿಗೆ ಶಿಲ್ಪಾರ ಕನಕ ಪಾತ್ರ ಫೇಮಸ್ ಆಗಿತ್ತು. ಹೌದು, ಜನುಮದ ಜೋಡಿಯ ಕನಕ ಪಾತ್ರದಲ್ಲಿ ಅಕ್ಷರಶಃ ಜೀವಿಸಿದಂತೆ ನಟಿಸಿದ್ದಾರೆ ಈ ಶಿಲ್ಪಾ. ಆ ಬಳಿಕ ಕೂಡ ಅವರು ಸಾಕಷ್ಟು ಚಿತ್ರಗಳಲ್ಲಿ ನಟಿಸಿದ್ದಾರೆ. ಮುಂಗಾರಿನ ಮಿಂಚು, ಧರ್ಮ ದೇವತೆ, ಭೂಮಿತಾಯಿಯ ಚೊಚ್ಚಲು ಮಗ ಹೀಗೆ ಸಾಲು ಸಾಲು ಚಿತ್ರಗಳು. ಕನ್ನಡದಲ್ಲಿ ಪಾಂಡವ ನಟಿ ಶಿಲ್ಪಾರ ಕೊನೆಯ ಚಿತ್ರ.

ಅಂತಹ ಖ್ಯಾತ ನಟಿ ಶಿಲ್ಪಾ ಈಗೇನು ಮಾಡುತ್ತಿದ್ದಾರೆ? ಬಹಳಷ್ಟು ಸಿನಿಮಾ ಪ್ರೇಮಿಗಳಿಗೆ ಈ ಕುತೂಹಲ ಸಹಜ. ಶಿಲ್ಪಾ ಅವರು 2004ರಲ್ಲಿ ಕನ್ನಡದಲ್ಲಿ ಪಾಂಡವ ಸಿನಿಮಾದಲ್ಲಿ ನಟಿಸಿದ್ದೇ ಲಾಸ್ಟ್ . ಆ ಬಳಿಕ ಅವರು ಮಲಯಾಳಂನ ಖ್ಯಾತ ನಿರ್ಮಾಪಕ ಎಂ ರಂಜಿತ್ ಅವರನ್ನು ವಿವಾಹವಾದರು. ಧಾರಾವಾಹಿ ಹಾಗೂ ದೂರದರ್ಶನದಲ್ಲಿ ಸಹ ನಟಿಸುತ್ತಿದ್ದರು ಈ ಶಿಲ್ಪಾ. ಬಳಿಕ, ಸ್ವಂ ನಿರ್ಮಾಣ ಸಂಸ್ಥೆಯ ಮೂಲಕ ಮಲಯಾಳಂ ಸಿನಿಮಾ ನಿರ್ಮಾಣವನ್ನೂ ಸಹ ಮಾಡಿದ್ದಾರೆ. ಕೇರಳದಲ್ಲಿ ಸೆಟ್ಲ್ ಆಗಿದ್ದಾರೆ.

ಆದ್ರೆ, ಸಿನಿಮಾ ನಿರ್ಮಾಣ ಶಿಲ್ಪಾರ ಪ್ರೊಡಕ್ಷನ್ ಹೌಸ್‌ಗೆ ಸಿಕ್ಕಾಪಟ್ಟೆ ನಷ್ಟ ತಂದಿಟ್ಟಿತು. ಬಳಿಕ ಅವರು ಸಿನಿಮಾ ಬದಲು ಸೀರಿಯಲ್ ನಿರ್ಮಾಣಕ್ಕೆ ಇಳಿದರು. ಅದು ಶಿಲ್ಪಾ-ರಂಜಿತ್ ಜೋಡಿಯ ಕೈ ಹಿಡಿಯಿತು. ಈ ಜೋಡಿಯ ನಿರ್ಮಾಣ ಸಂಸ್ಥೆ ಹೆಸರು ಆವಂತಿಕಾ ಕ್ರಿಯೇಷನ್ಸ್. ಇದು ಅವರಿಬ್ಬರ ಮಗಳ ಹೆಸರು! ಗಂಡ ನಿರ್ದೇಶನದಲ್ಲಿ ಬ್ಯುಸಿ ಆಗಿದ್ದಾಗ ಹೆಂಡತಿ ಶಿಲ್ಪಾ ನಿರ್ಮಾಣದಲ್ಲಿ ತೊಡಗಿಸಿಕೊಂಡಿದ್ದಾರೆ.

ಮಲಯಾಳಂನ ಎರಡು ಸೀರಿಯಲ್‌ಗಳು ಅವರ ಕೈ ಹಿಡಿಯಿತು. ಹೀಗೆ, ಮೊದಲು ನಟಿಯಾಗಿದ್ದ ಶಿಲ್ಪಾ ಈಗ ನಿರ್ಮಾಪಕಿಯಾಗಿದ್ದಾರೆ. ಶಿವರಾಜ್‌ಕುಮಾರ್-ಶಿಲ್ಪಾ ಜೋಡಿಯ ಜನಿಮದ ಜೋಡಿ ಚಿತ್ರವು ಬಾಕ್ಸ್ ಆಫೀಸ್ ಕಲೆಕ್ಷನ್ ದೃಷ್ಟಿಯಿಂದ ಮಾತ್ರ ಸೂಪರ್ ಹಿಟ್ ಚಿತ್ರವಲ್ಲ. ಇದು ಮ್ಯೂಸಿಕಲ್ ಹಿಟ್ ಸಿನಿಮಾ ಕೂಡ.

ಈ ಚಿತ್ರದ ಹಾಡುಗಳು ತುಂಬಾ ಜನಪ್ರಿಯ ಆಗಿದ್ದವು. ಈಗಲೂ ಕೂಡ ಕನ್ನಡ ಸಿನಿಪ್ರೇಮಿಗಳು ಈ ಚಿತ್ರದ ಹಾಡುಗಳನ್ನು ನೆನಪು ಮಾಡಿಕೊಳ್ಳುತ್ತಾರೆ. ಈ ಚಿತ್ರದಲ್ಲಿ ನಟಿ ಪವಿತ್ರಾ ಲೋಕೇಶ್ ಅವರು ಇದೇ ಶಿಲ್ಪಾರ ಸ್ನೇಹಿತೆ ಪಾತ್ರದಲ್ಲಿ ನಟಿಸಿದ್ದಾರೆ. ಅಂದಹಾಗೆ ಈ ಚಿತ್ರವು 1996ರಲ್ಲಿ ತೆರೆಗೆ ಬಂದಿತ್ತು.

# ಬೋಲ್ಡ್ ಅವತಾರದಲ್ಲಿ ಮೋಕ್ಷಾ ಕುಶಲ್

ಕೋಟಿ ಸಿನಿಮಾದಲ್ಲಿ ಡಾಲಿ ಧನಂಜಯ್‌ಗೆ ನಾಯಕಿಯಾಗಿ ನಟಿಸಿದ ನಟಿ ಮೋಕ್ಷಾ ಕುಶಲ್ ನೆನಪಿದ್ದಾರಾ? ತಮ್ಮ ಮನೋಜ್ಞ ಅಭಿನಯದ ಮೂಲಕ ಮನಗೆದ್ದ ನಟಿಯ ಇದೀಗ ಸಖತ್ ಬೋಲ್ಡ್ ಆಗಿ ಕಾಣಿಸಿಕೊಂಡಿದ್ದಾರೆ. ಅವರ ಲುಕ್ ನೋಡಿ ಅಭಿಮಾನಿಗಳು ಫಿದಾ ಆಗಿದ್ದಾರೆ.

ಕಪ್ಪು ಬಣ್ಣದ ಡೀಪ್ ನೆಕ್ ಇರುವ, ನೆಟೆಡ್ ಗೌನ್ ಧರಿಸಿರುವ ಮೋಕ್ಷಾ ಕುಶಲ್ (ಒಂಞಚಿ ಏಣಞಚಿಟ), ಕೈಯಲ್ಲಿ ಗುಲಾಬಿ ಹೂವಿನ ಗುಚ್ಚ ಹಿಡಿದು, ಸಖತ್ ಆಗಿ ಪೋಸ್ ಕೊಟ್ಟಿದ್ದಾರೆ. ತುಂಬಾನೆ ಚೆನ್ನಾಗಿ ಕಾಣಿಸ್ತೀರಾ. ಸೆಕ್ಸಿ, ಬೆಂಕಿ, ಕ್ಯೂಟ್, ಯಾಕಿಷ್ಟು ಚೆಂದಾ ನೀವು, ಆ ಕಿಲ್ಲರ್ ಕಣ್ಣುಗಳು ಉಫ್ ಅಂದವಾದ ಫೋಟೊ, ಸ್ಟನ್ನಿಂಗ್, ಕೊಕೈನ್ ಎಂದೆಲ್ಲಾ ಕಾಮೆಂಟ್ ಮಾಡಿದ್ದಾರೆ.

ಸಿನಿಮಾದಲ್ಲಿ ಸಿಂಪಲ್ ಆಗಿ ಕಾಣಿಸಿಕೊಳ್ಳುವ ನಟಿ ರಿಯಲ್ ಆಗಿ ಸಖತ್ ಬೋಲ್ಡ್ ಆಗಿದ್ದಾರೆ. ಇವರ ಸೋಶಿಯಲ್ ಮೀಡಿಯಾದಲ್ಲಿ ಇಂತಹ ಹಲವಾರು ಬೋಲ್ಡ್ ಫೋಟೊಶೂಟ್‌ಗಳನ್ನು ಸಹ ಕಾಣಬಹುದು. ಇವರನ್ನು ನೋಡಿದ್ರೆನೇ ಮೋಕ್ಷಾ ತುಂಬಾನೆ ಬಬ್ಲಿ ಬಿಂದಾಸ್ ಬೆಡಗಿ ಅನ್ನೋದು ಗೊತ್ತಾಗುತ್ತೆ. ಆದಿ ಪುರಾಣ ಸಿನಿಮಾದ ಮೂಲಕ ಕನ್ನಡ ಚಿತ್ರರಂಗಕ್ಕೆ ಎಂಟ್ರಿ ಕೊಟ್ಟ ಕೂರ್ಗ್ ಬ್ಯೂಟಿ ಮೋಕ್ಷಾ, ನಂತರ ನವರತ್ನ ಸಿನಿಮಾದಲ್ಲಿ ವೈಲ್ಡ್ ಲೈಫ್ ಫೋಟೊಗ್ರಾಫರ್ ಆಗಿ ಮಿಂಚಿದ್ದರು, ಬಳಿಕ ಡಾಲಿ ಧನಂಜಯ್ ನಾಯಕಿಯಾಗಿ ಕೋಟಿ ಸಿನಿಮಾದಲ್ಲಿ ನಟಿಸಿದ್ದಾರೆ. ಇದಲ್ಲದೇ ನಟಿ ಆಯನ ಸಿನಿಮಾದಲ್ಲೂ ನಟಿಸಿದ್ದಾರೆ. ಮುಂದೆ ಯಾವ ಸಿನಿಮಾದಲ್ಲಿ ನಟಿಸಲಿದ್ದಾರೆ ಅನ್ನೋದು ತಿಳಿದು ಬಂದಿಲ್ಲ.

ಮಾಡೆಲ್ ಆಗಿರುವ ಮೋಕ್ಷಾ ಹಲವು ಫ್ಯಾಷನ್ ಶೋ, ಈವೆಂಟ್‌ಗಳಲ್ಲಿ ಕೂಡ ಭಾಗವಹಿಸಿದ್ದಾರೆ, ಜೊತೆಗೆ ಗೋದ್ರೇಜ್ ಸೋಪ್, ಸಂಗೀತಾ ಮೊಬೈಲ್, ಸಿರೋನಾ ಮೆನ್ಸುವಲ್ ಕಪ್, ಸ್ಮಾರ್ಟ್ ವಾಚ್, ಟೈಟಾನ್ ವಾಚ್, ಸೀರೆ, ಜ್ಯುವೆಲ್ಲರಿಗಳಿಗೆ ಮಾಡೆಲ್ ಆಗಿ ಹಲವಾರು ಜಾಹೀರಾತಲ್ಲಿ ನಟಿಸಿದ್ದಾರೆ.




# ಮದ್ವೆ ಆಗೋರನ್ನೇ ವಿಕ್ಕಿ ಕೌಶಲ್ ಲವ್ ಮಾಡಿದ್ದು

ಎಲ್ಲೆಲ್ಲೂ ಈಗ ನಟ ವಿಕ್ಕಿ ಕೌಶಲ್ ಜಾದೂ ಶುರುವಾಗಿದೆ. ವಿಕ್ಕಿ ಯಾರು, ಎಲ್ಲಿಂದ ಬಂದ್ರು, ಸಿನಿಮಾ ಕೆರಿಯರ್ ಶುರುವಾಗಿದ್ದು ಯಾವಾಗ ಎಲ್ಲವೂ ಈಗ ಚರ್ಚೆಯ ಸಂಗತಿಯೇ... ಆದರೆ, ಛಾವಾ ಚಿತ್ರಕ್ಕಿಂತ ಮೊದಲು ಈ ನಟನ ಬಗ್ಗೆ ಯಾರೂ ಅಷ್ಟೊಂದು ತಲೆ ಕೆಡಿಸಿಕೊಂಡಿರಲಿಲ್ಲ. ಆದ್ರೆ ಈಗ ನಟ ವಿಕ್ಕಿ ಕೌಶಾಲ್ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾಗಿದ್ದಾರೆ. ವಿಕ್ಕಿ ಈಗ ಬಾಲಿವುಡ್‌ನ ಬಿಗ್ ಸ್ಟಾರ್. ಒಂದು ಕಾಲದಲ್ಲಿ ಕೇಳೋರೆ ಇರ್ಲಿಲ್ಲ, ಈಗ ಹೇಳೋರೇ ಎಲ್ಲ..!

ಆದರೆ, ನಟ ವಿಕ್ಕಿ ಕೌಶಲ್ ಅವರಲ್ಲಿ ಇರುವ ಒಂದು ಟ್ಯಾಲೆಂಟ್ ಹಾಗು ಕತ್ರಿನಾ ಕೈಫ್ ಮದುವೆಯಾದ ಸುದ್ದಿ ಮಾತ್ರ ದೊಡ್ಡ ಸೀಕ್ರೆಟ್ ಆಗಿ ಹಾಗೇ ಉಳಿದುಕೊಂಡಿದೆ. ವಿಕ್ಕಿ ಮನೆಯವರು, ಸ್ನೇಹಿತರು ಹಾಗು ಕೆಲವೇ ಆಪ್ತರಿಗೆ ಅದು ಗೊತ್ತು. ಈ ವಿಕ್ಕಿ ಕೌಶಲ್‌ಗೆ ಒಚಿಟುಜಿಝಣಚಿಣುಂಟಿ ಅಂತಾರಲ್ಲ, ಅದನ್ನು ನಿಖರವಾಗಿ ಮಾಡುವ ಅಭ್ಯಾಸ ಇದೆಯಂತೆ.. ಬಾಲ್ಯದಿಂದಲೂ ಈ ಅಭ್ಯಾಸವನ್ನು ನಿರಂತರವಾಗಿ ಮಾಡಿಕೊಂಡು ಬಂದಿರುವ ವಿಕ್ಕಿ, ಇದರಲ್ಲಿ ಯಾವತ್ತೂ ಫೇಲ್ ಆಗಿಲ್ವಂತೆ.

ವಿಕ್ಕಿ ಕೌಶಲ್ ತಾವು 10-12 ವರ್ಷ ಇದ್ದಾಗಿನಿಂದಲೂ ನಾನು ಮುಂದೆ ಬಾಲಿವುಡ್ ಬಿಗ್ ಸ್ಟಾರ್ ಆಗ್ತೀನಿ ಅಂತಾನೇ ಇದ್ರಂತೆ. ಅದು ಸುಳ್ಳು ಅಂತ ಅಂದ್ಕೊಂಡ ಬಹಳಷ್ಟು ಮಂದಿಗೆ ಈಗ ಸತ್ಯ ಅಂತ ಅರ್ಥವಾಗಿದೆ. ಅವ್ರಿಗೆ ಸ್ಟ್ರಾಂಗ್ ಮೆನಿಫೆಸ್ಟೇಶನ್ ಸಾಮರ್ಥ್ಯ ಇದೆ ಅಂತಾರೆ. ಈಗ ಅವರ ಸಾಧನೆ ನೋಡಿದರೆ ಹೌದು ಅನ್ನಲೇಬೇಕು. ವಿಕ್ಕಿ ಕೌಶಲ್ ತಮ್ಮ 21ನೇ ವಯಸ್ಸಿನಲ್ಲಿಯೇ ತಾವು ನಟಿ ಕತ್ರಿನಾ ಕೈಫ್ (ಏಚಿಣಡಿಟಿಚಿ ಏಚಿಜಿ) ಅವರನ್ನು ಮದುವೆ ಆಗೋದಾಗಿ ಹೇಳಿದ್ರಂತೆ. ಅದನ್ನು ಸಾಧ್ಯ ಮಾಡಿಕೊಂಡಿದ್ದಾರೆ.



ನಾನು ಕತ್ರಿನಾರನ್ನೇ ಮದ್ವೆ ಆಗೋದು ಅಂತ. ಅಷ್ಟೇ ಅಲ್ಲ, ಒಮ್ಮೆ ರಣಬೀರ್ ಕಪೂರ್ ಹಾಗೂ ಸಲ್ಮಾನ್ ಖಾನ್ ಇಬ್ಬರೂ ಇದ್ದ ಸ್ಟೇಜ್‌ನಲ್ಲೇ ಈ ವಿಕ್ಕಿ ತಾವು ಕತ್ರಿನಾರನ್ನು ಮದುವೆ ಆಗೋದಾಗಿ ಹೇಳಿದ್ದರು.

ಹೌದು, ನಟ ವಿಕ್ಕಿ ಕೌಶಲ್ ಇನ್ನೂ ಬಾಲಿವುಡ್ ಸಿನಿಮಾದಲ್ಲಿ ಚಾನ್ಸ್ ಪಡೆಯುವ ಮೊದಲೇ ನಟಿ ಕತ್ರಿನಾ ಕೈಫ್ ಬಿಗ್ ಸ್ಟಾರ್. ಬ್ರಿಟಿಷ್ ಮೂಲದ ಕತ್ರಿನಾ ಕೈಫ್ ದೊಡ್ಡ ನಟಿಯಾಗಿದ್ದಾಗ ಒಮ್ಮೆ ಸಂದರ್ಶನ ಮಾಡುತ್ತಾ ನಟ ವಿಕ್ಕಿ ಕೌಶಲ್ ಅವರು 'ನೀವು ವಿಕ್ಕಿ ಕೌಶಲ್ ಅವರನ್ನು ಮದುವೆ ಆಗಬಹುದಲ್ಲ' ಎಂದು ಹೇಳಿದ್ದರು. ಅದಕ್ಕೆ ಆಗ ನಟಿ ಕತ್ರಿನಾ ನಾಚಿಕೊಂಡು ಸುಮ್ಮನಾಗಿದ್ದರು. ಆದರೆ, ಈ ವಿಕ್ಕಿಗೆ ಮಾತ್ರ ತಾವು ಕತ್ರಿನಾರನ್ನೇ ಮದುವೆ ಆಗುವ ನಂಬಿಕೆ ಬಲವಾಗಿ ಇತ್ತಂತೆ. ನಟಿ ಕತ್ರಿನಾ ಕೈಫ್ ನಟ ವಿಕ್ಕಿ ಕೌಶಲ್ ಗಿಂತ ಐದು (5) ವರ್ಷ ಚಿಕ್ಕವರು. ಆದರೂ ಕೂಡ ತಮ್ಮ 21ರ ಹರೆಯದಲ್ಲೇ ವಿಕ್ಕಿ ಈ ಬಗ್ಗೆ ದೃಢವಾಗಿ ಹೇಳಿದ್ದರಂತೆ ನಾನು ಕತ್ರಿನಾರನ್ನೇ ಮದ್ವೆ ಆಗೋದು ಅಂತ. ಅಷ್ಟೇ ಅಲ್ಲ, ಒಮ್ಮೆ ರಣಬೀರ್ ಕಪೂರ್ ಹಾಗೂ ಸಲ್ಮಾನ್ ಖಾನ್ ಇಬ್ಬರೂ ಇದ್ದ ಸ್ಟೇಜ್‌ನಲ್ಲೇ ಈ ವಿಕ್ಕಿ ತಾವು ಕತ್ರಿನಾರನ್ನು ಮದುವೆ ಆಗೋದಾಗಿ ಹೇಳಿದ್ದರು. ಅದಕ್ಕೆ ರಣಬೀರ್ ಕಪೂರ್ ಜೋರಾಗಿ ನಕ್ಕಿದ್ದರೆ, ಸಲ್ಲೂ ಹುಬ್ಬೇರಿಸಿ ವ್ಯಂಗ್ಯವಾಡಿದ್ದರು. ಆದರೆ, ನಟ ವಿಕ್ಕಿ ಕೌಶಲ್‌ಗೆ ತುಂಬಾ ಸ್ಪಷ್ಟವಾಗಿ ಅದು ಗೊತ್ತಿತ್ತು. ನಾನು ಕತ್ರಿನಾರನ್ನೇ ಮದುವೆ ಆಗ್ತೀನಿ, ಮುಂದೊಂದು ದಿನ ಬಾಲಿವುಡ್‌ನಲ್ಲಿ ಬಿಗ್ ಸ್ಟಾರ್ ಆಗ್ತೀನಿ ಅಂತ ತುಂಬಾ ಭರವಸೆಯಿಂದ ಹೇಳ್ತಾ ಇದ್ರಂತೆ. ಅದರಂತೇ ಎಲ್ಲವೂ ಆಗಿದೆ. 9 ಡಿಸೆಂಬರ್ 2021 ರಂದು ನಟಿ ಕತ್ರಿನಾ ಹಾಗೂ ನಟ ವಿಕ್ಕಿ ಕೌಶಲ್ ಮದುವೆ ಆಗದ್ದಾರೆ. ಅದಕ್ಕೂ ಮೊದಲು ಅವರಿಬ್ಬರೂ ಲವ್‌ನಲ್ಲಿ ಬಿದ್ದಿದ್ದರು. ವಿಕ್ಕಿ ಕೊನೆಗೂ ತಾವು ಹೇಳಿದಂತೆ ಕತ್ರಿನಾ ಜೊತೆ ಮ್ಯಾರೇಜ್ ಮಾಡಿಕೊಂಡಿದ್ದಾರೆ, ಬಾಲಿವುಡ್ ಬಿಗ್ ಸ್ಟಾರ್ ಕೂಡ ಆಗಿದ್ದಾರೆ ಈಗ.

ಈ Manifestation ಅಂದ್ರೆ ಏನು ಅಂತ ಯಾರಿಗೂ ಹೇಳ್ಬೇಕಾಗಿಲ್ಲ..! ಯಾಕೆ ಅಂದ್ರೆ ತುಂಬಾ ಮಂದಿಗೆ ಈ ಶಬ್ದ ಹಾಗೂ ಅರ್ಥ ಗೊತ್ತು. ಅವರಲ್ಲಿ ಬಹಳಷ್ಟು ಮಂದಿ ಅದನ್ನು ಸ್ಟ್ರಾಂಗ್ ಆಗಿ ಮಾಡಲ್ಲ ಅಷ್ಟೇ. ಅದಕ್ಕೇ ಅವ್ರು ಅಂದ್ಕೊಳ್ಳೋದೇ ಒಂದು ಆಗೋದೇ ಇನ್ನೊಂದು..!

# ಹೀರೋ ಆಗು ಅಂದ್ರೆ, ವಿಲನ್ ಆಗ್ತೀನೆಂದ ನಟ!

ದಕ್ಷಿಣ ಭಾರತ ಚಿತ್ರರಂಗದಲ್ಲಿ ಅರುಣ್ ವಿಜಯ್ 25 ವರ್ಷದಿಂದ ನಟನೆ ಮಾಡ್ತಿದ್ದಾರೆ. 'ಎನ್ನೈ ಅರಿಂದಾಲ್' ಸಿನಿಮಾ ಇವರಿಗೆ ಒಳ್ಳೆ ಹೆಸರು ತಂದುಕೊಟ್ಟಿತು. ಆ ಸಿನಿಮಾದಲ್ಲಿ ಅಜಿತ್‌ಗೆ ವಿಲನ್ ಆಗಿ ಆಕ್ಟ್ ಮಾಡಿದ್ದರು.

ಅರುಣ್ ವಿಜಯ್ ಈಗ 'ಇಡ್ಲಿ ಕಡೈ' ಸಿನಿಮಾದಲ್ಲಿ ವಿಲನ್ ಆಗಿ ಆಕ್ಟ್ ಮಾಡುತ್ತಿದ್ದಾರೆ. ಧನುಷ್ ಈ ಸಿನಿಮಾಗೆ ಡೈರೆಕ್ಟರ್. ಏಪ್ರಿಲ್ 10ಕ್ಕೆ ಸಿನಿಮಾ ರಿಲೀಸ್ ಆಗುತ್ತದೆ.

ಮೂಕುತಿ ಅಮ್ಮನ್ 2: ಸುಂದರ್ ಸಿ ಡೈರೆಕ್ಷನ್‌ನಲ್ಲಿ ನಯನತಾರಾ ಆಕ್ಟ್ ಮಾಡ್ತಿರೋ 'ಮೂಕುತಿ ಅಮ್ಮನ್ 2' (ಅಮ್ಮೋರು ತಾಯಿ 2) ಸಿನಿಮಾದಲ್ಲಿ ಅರುಣ್ ವಿಜಯ್‌ನ ವಿಲನ್ ಆಗಿ ತಗೋಬೇಕು ಎಂದು ತೀರ್ಮಾನಿಸಿದ್ದಾರೆ. ಈ ಸಿನಿಮಾದ ಶೂಟಿಂಗ್ ಮಾರ್ಚ್ 15ಕ್ಕೆ ಆರಂಭವಾಗುತ್ತದೆ



'ಮೂಕುತಿ ಅಮ್ಮನ್ 2'ಗೋಸ್ಕರ ಅರುಣ್ ವಿಜಯ್ ಜಾಸ್ತಿ ದುಡ್ಡು ಕೇಳುತ್ತಿದ್ದಾರಂತೆ. ಎಲ್ಲ ಓಕೆ ಆದರೆ ನಯನತಾರಾ ಜೊತೆ ಅರುಣ್ ವಿಜಯ್ ಫಸ್ಟ್ ಸಿನಿಮಾ ಇದೇ ಆಗುತ್ತದೆ.



# ತುಳುನಾಡ ಸಂಸ್ಕೃತಿ ಮರೆಯದ ಮಂಗಳೂರು ಬೆಡಗಿ

ನಟಿ ಶಿಲ್ಪಾ ಶೆಟ್ಟಿ ಮಂಗಳೂರಿನವರು. ಇಂದು ಮುಂಬೈನಲ್ಲಿ ಸೆಟಲ್ ಆಗಿದ್ದರೂ ಕೂಡ ಅವರು ತಮ್ಮ ಮಾತೃಭಾಷೆ ತುಳು, ತುಳುನಾಡಿನ ಸಂಸ್ಕೃತಿಯನ್ನು ಮರೆಯೋದಿಲ್ಲ. ವರ್ಷಕ್ಕೊಮ್ಮೆ ಮಂಗಳೂರಿಗೆ ಬಂದು, ಇಲ್ಲಿನ ದೇವಸ್ಥಾನಗಳಿಗೆ ಅವರು ಭೇಟಿ ಕೊಡ್ತಾರೆ. ಈಗ ಅವರು ಮಂಗಳೂರಿಗೆ ಭೇಟಿ ಕೊಟ್ಟು, ಸೋಶಿಯಲ್ ಮೀಡಿಯಾ ಪೋಸ್ಟ್ ಹಂಚಿಕೊಂಡಿದ್ದಾರೆ.

ಶಿಲ್ಪಾ ಶೆಟ್ಟಿ ಅವರು ತಾಯಿ, ಸಹೋದರಿ ಶಮಿತಾ ಶೆಟ್ಟಿ ಅವರೊಂದಿಗೆ ಮಂಗಳೂರಿಗೆ ಭೇಟಿ ಕೊಟ್ಟಿದ್ದಾರೆ. ಸಾಂಪ್ರದಾಯಿಕ ಡ್ರೆಸ್‌ನಲ್ಲಿ ಅವರು ದೇವಸ್ಥಾನಕ್ಕೆ ತೆರಳಿದ್ದಾರೆ.

ಬಾಲಿವುಡ್ ನಟಿ ಶಿಲ್ಪಾ ಶೆಟ್ಟಿ ಅವರು ಮಗಳು ಸಮಿಶಾ ಶೆಟ್ಟಿ, ಮಗ ವಿಯಾನ್, ಶಮಿತಾ ಶೆಟ್ಟಿ, ತಾಯಿ ಜೊತೆಗೆ ಮಂಗಳೂರಿಗೆ ಭೇಟಿ ಕೊಟ್ಟಿದ್ದಾರೆ.

ಶಿಲ್ಪಾ ಶೆಟ್ಟಿ ಅವರ ಪತಿ ರಾಜ್ ಕುಂದ್ರಾ ಮಾತ್ರ ಹಾಜರಿ ಹಾಕಿರಲಿಲ್ಲ. ಕೆಲಸದ ನಿಮಿತ್ತ ರಾಜ್ ಕುಂದ್ರಾ ಬಂದಿರಲಿಲ್ಲ ಎಂದು ಕಾಣುತ್ತದೆ.

ಬಾಲಿವುಡ್ ನಟಿ ಶಿಲ್ಪಾ ಶೆಟ್ಟಿ ಮಂಗಳೂರು ಮಲ್ಲಿಗೆ ಹೂ ಮುಡಿದಿದ್ದಾರೆ. ಇನ್ನು ಅವರು ಸಿನಿಮಾಗಳಲ್ಲಿ ಕೂಡ ಬ್ಯುಸಿ ಆಗುತ್ತಿದ್ದಾರೆ.

# 'ನಿಮ್ಮ ಗಂಡಗಿಂತ ದಳಪತಿ ವಿಜಯ್, ಪ್ರದೀಪ್ ರಂಗನಾಥ್ ಬೆಟರ್'



ಕಂಗುವ ಚಿತ್ರಕ್ಕೋಸ್ಕರ ಸೂರ್ಯ ಮೈ ಮುರಿದುಕೊಂಡು ಕಷ್ಟಪಟ್ಟಿದ್ದಾರೆ. ಆದರೆ ಆ ಸಿನಿಮಾ ನಿರಾಸೆ ಮೂಡಿಸಿತು. ಸದ್ಯಕ್ಕೆ ಸೂರ್ಯ ಕೆಲವು ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ.

ಸೋಶಿಯಲ್ ಮೀಡಿಯಾದಲ್ಲಿ ಒಬ್ಬ ಹೀರೋ ಅಭಿಮಾನಿಗಳು ಮತ್ತೊಬ್ಬ ಹೀರೋ ಟಾರ್ಗೆಟ್ ಮಾಡೋದು, ಕಾಲೆಳೆಯೋದು ಕಾಮನ್. ತೆಲುಗು, ತಮಿಳು ಚಿತ್ರರಂಗಗಳಲ್ಲಿ ಫ್ಯಾನ್ಸ್ ವಾರ್ ಜಾಸ್ತಿ ಇರುತ್ತೆ. ಹೀರೋಗಳನ್ನ ಅಭಿಮಾನಿಗಳು ಹುಚ್ಚರ ತರ ಪ್ರೀತಿಸೋದೇ ಅದಕ್ಕೆ ಕಾರಣ. ಆದರೆ ಈಗ ಕೆಲ ನೆಟ್ಟಿಗರು ಹೀರೋ ಸೂರ್ಯನ ಟಾರ್ಗೆಟ್ ಮಾಡಿದ್ದಾರೆ.

ಸೂರ್ಯ ಯಾವ ವಿವಾದಕ್ಕೂ ತಲೆ ಕೆಡಿಸಿಕೊಳ್ಳದೆ ತನ್ನ ಕೆಲಸ ಮಾಡಿಕೊಂಡು ಹೋಗುವ ಮನುಷ್ಯ. ಸಿನಿಮಾಕ್ಕೋಸ್ಕರ ಸೂರ್ಯ 100% ಡೆಡಿಕೇಶನ್ ಕೊಡ್ತಾನೆ. ಕಂಗುವ ಚಿತ್ರಕ್ಕೋಸ್ಕರ ಸೂರ್ಯ ಮೈ ಮುರಿದುಕೊಂಡು ಕಷ್ಟಪಟ್ಟಿದ್ದಾರೆ. ಆದರೆ ಆ ಸಿನಿಮಾ ನಿರಾಸೆ ಮೂಡಿಸಿತು. ಸದ್ಯಕ್ಕೆ ಸೂರ್ಯ ಕೆಲವು ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ. ನೆಟ್ಟಿಗರು ಕೆಲವರು ಸೂರ್ಯ ಮೇಲೆ ನೆಗೆಟಿವ್ ಕಾಮೆಂಟ್ಸ್ ಶುರು ಮಾಡಿದ್ದಾರೆ. ಸೂರ್ಯನ ಮಾತ್ರ ಅಲ್ಲ ಅವರ ಹೆಂಡತಿ ಜ್ಯೋತಿಕಾನ ಕೂಡ ವಿವಾದಕ್ಕೆ ಎಳೆದಿದ್ದಾರೆ.

ಜ್ಯೋತಿಕಾ ಸೋಶಿಯಲ್ ಮೀಡಿಯಾ ಅಕೌಂಟ್‌ನಲ್ಲಿ ಕೆಲ ನೆಟ್ಟಿಗರು ಕಾಮೆಂಟ್ಸ್ ಮಾಡ್ತಾ.. ನಿಮ್ಮ ಗಂಡನಿಗಿಂತ ದಳಪತಿ ವಿಜಯ್ ತುಂಬಾ ಬೆಟರ್ ಅಂತ ಕಾಮೆಂಟ್ ಹಾಕಿದ್ದಾರೆ. ಇನ್ನೊಬ್ಬ ನೆಟ್ಟಿಗ ನಿಮ್ಮ ಗಂಡನಿಗಿಂತ ಯುವ ಹೀರೋ ಪ್ರದೀಪ್ ರಂಗನಾಥ್ ತುಂಬಾ ಚೆನ್ನಾಗಿ ಆಕ್ಟ್ ಮಾಡ್ತಾನೆ ಅಂತ ಹೇಳಿದ್ದಾನೆ. ಇನ್ನೂ ಕೆಲವರು ಸೂರ್ಯ, ಕಾರ್ತಿ ಗಿಂತ ವಿಜಯ್ ಒಳ್ಳೆ ನಟ ಅಂತ ಕಾಮೆಂಟ್ ಮಾಡಿದ್ದಾರೆ.

ಅವರ ಕಾಮೆಂಟ್‌ಗಳಿಗೆ ಕೂಲ್ ಆಗಿ ಪ್ರತಿಕ್ರಿಯಿಸಿರುವ ಜ್ಯೋತಿಕಾ, ನಗುಮುಖದ ಎಮೋಜಿಗಳನ್ನು ಪೋಸ್ಟ್ ಮಾಡುವ ಮೂಲಕ ಅದು ನಿಜವೇ? ಬೆದರಿಸುವವರು ಯಾವಾಗಲೂ ಈ ರೀತಿಯ ಕಾಮೆಂಟ್‌ಗಳನ್ನು ಮಾಡುತ್ತಾರೆ ಎಂದು ಎಲ್ಲರನ್ನೂ ಬಾಯಿ ಮುಚ್ಚಿಸಿದ್ದಾರೆ.

Edited, Published and Owned by Laxmiprasanna R.H, #1652/6, 20th Cross, 8th Main, C Block, SahakarNagar, Bangalore-560092. Printed by P N Printers, Narasipalya, Arishinakunte(Post), Kasaba(hobali), Nelamangala, Bengaluru-562123
Email-mussanje2010@gmail.com, Phone: 9448074878